RECOVERY OF THE LOAN GRANTED FOR LAND IMPROVEMENT IN RAMANAGARAM

441. SRI S. KARIYAPPA (Kanakapura).—

Will the Minister for Revenue be pleased to state .—

(a) the number of persons in Ramanagaram Sub-Division who have borrowed money from the Government for land improvment ;

(b) the number of persons who have not paid instalments for the past,—

(i) One year,
(ii) Two years,
(iii) Three years,
(iv) Five Years and
(v) more than five years ;

(c) the steps taken for recovery of the amount ?

SRI N. HUTCHAMASTHY GOWDA.—(Minister for Revenue). —

(a) 2053.

(b) Number of persons who have not paid instalments —

(i)	One year	...	160
(ii)	Two years	...	139
(iii)	Three years	...	251
(vi)	Five years	...	351
(v)	More than five years	...	750
		Total	1,651

(c) Coercive steps such as issue of demand notices, Distraint warrants and Sale istihar have been taken to recover the overdue loans.

CALLING ATTENTION TO MATTERS OF URGENT PUBLIC IMPORTANCE.

(i) re: resignations of Municipal Councillors at K.G.F.

SRI A. V. MUNISWAMY (Malur).— I call the attention of the Minister for Municipal Administration to the resignation of Municipal Councillors at K.G.F. .

SRI B. BASAVALINGAPPA (Minister for Municipal Administration).— I state as follows.—

The Robertsonpet town Municipality consists of 23 members of whom five members tendered their resignation in August 1971. These were accepted by the then President. When the question of filling up of these vacancies and holding of bye elections was taken up, a writ petition was filed in the High Court of Mysore, pointing out the defects in the publication of the Calendar of events and secondly, the electoral roll was under revision in connection with the general elections to the Legislative Assembly and as a result, the bye elections could not be held. It may be mentioned here that shortly after resignation of the five councillors in August 1971 Sri C. S. Pannalal the then President of the Town Municipal Council also resigned with effect from 30th August 1971. Sri C. M. Armugam was elected as President in the Council of the remaining 18 members. The Council continued to function with 18 members so far.

On 23rd June 1972 a letter was received in Deputy Commissioner's Office from the Ex-Vice-President of the Town Municipal Council together with a copy of the joint resignation letter addressed to the President, and signed by 11 Councillors tendering resignation to their membership.

The resignation letter is dated 19th June 1972 and the reasons stated are as follows :—

"We are forced to resign from the Council as we are not satisfied with the present state of affairs in the municipality and the manner in which the Municipal Administration is carried on"

Incidentally, the term of the present Council expires on 30th July 1972 and general elections will have to be held on the basis of 1971 census figures which are still awaited.

In July 1971 certain allegations of irregularities in the Town Municipal Council were made by the K.G.F. City Congress Committee (R). These allegations related to heavy loss of revenue to the Municipality owing to corrupt administration such as by the allotment of valuable sites to the interested parties, non-collection of Mohatarfa, connivance of octroi evasion, tacit permission of encroachments, non-observance of rules in the purchase of materials like electrical equipment, etc. Government have directed to the Controller, State Accounts Department, Bangalore, to conduct special audit of accounts particularly regarding purchase of electric bulbs and fittings. The Assistant Controller after making a detailed investigation has disclosed several irregularities and stated that investigation by higher administrative authorities is called for rather than merely auditing the accounts.

(SRI B. BASAVALINGAPPA)

The Deputy Commissioner, Kolar has furnished a detailed report about the affairs of the Town Municipal Council, Robertsonpet and has recommended to appoint the Assistant Commissioner, Kolar Sub-Division, as Administrator of the Town Municipal Council, Robertsonpet from 30th July 1972. The Question of appointing the Administrator to the Town Municipal Council is being examined separately and orders will be issued within 30th July 1972.

SRI A. V. MUNISWAMY.—From the statement of the Hon'ble Minister it is evident that there are serious irregularities. May I Know why proper steps were not taken to supersede the Municipality and appoint a Commission of Enquiry to look into the matter ?

SRI B. BASAVALINGAPPA.—The term of the present Council will expire on 30th July 1972 *i.e.*, after 10 days I do not think the question of superseding arises.

10-00 A. M.

Re : Bus accident between Gokak Mills and Gokak in June 1972

SRI C. T. GUDDAKAYU (Gokak).—I call the attention of the Minister for Labour to the bus accident in between Gokak Mills and Gokak on 25th June 1972.

Sri Azeez Sait (Minister for Labour) I State as follows:-On 25th June1972 at aboutl 450hours S.T. Driver Shivappa JotibaPowar of Hukeri when driving Mysore State Road Transport Corporation bus No. MYF 3330 with 40 passengers from Gokak Road to Gokak, seeing lorry No. MYL 5193 coming from opposite direction, took the bus to the extreme left. The bus dashed against the road—side culvert. As a result, it toppled down in the ditch and 21 persons sustained injuries. Immediately 16 persons were treated in the local dispensary and the remaining 2 in the Civil Hospital, Belguam. All have been discharged and none died.

So far no compensation have been claimed. The injured are being issued with notices to prefer claims for compensation before the claims Tribunal under Section 110 of the Motor Vehicies Act, 1939.

An offence at Cr. No. 45/72 under Section 279, 337, 338 IPC and 116 Motor Vehicles Act, has been registered at Gokak Police Station. Accused Driver is arrested and the case is under investigation.

SRI C. T. GUDDAKAYU.—The Government has not clarified the main cause for the accident. Will you please inform us the main cause of accident.?

SRI AZEEZ SAIT.—The main cause of accident is due to the negligence of the driver. The driver drove the vehicle negligently and he has not exercised due care and caution while driving the vehicle. The driver has been arrested and the matter is under investigation.

SRI C. T. GUDDAKAYU.—Is it not a fact that there is a curve near Gokak Mills and the Government has not bestowed sufficient care to straighten that curve and this curve is responsible for this accident ?

SRI AZEEZ SAIT.—The curve is there near the Gokak Mills. I shall bring to the Notice of the concerned Minister to take steps to straighten this curve.

SRI C.T. GUDDAKAYU.—You have stated in the statement that none died. But I have received a message from my place saying that one old lady died on account of this accident. This being so, the statement made by the Government is not correct.

SRI AZEEZ SAIT.—I have given the information which was available with me. If what the member says is correct, I shall examine it, If anybody has died as a result of this accident, he is entitled to get compensation as per rules. The fact that none has claimed compensacions, shows that none has died. I may inform the member that even now it is not too late, if anybody has died, he may direct the relatives of the deceased person to make a claim. I will see that the claim is considered.

(iii) Re: Death of a woman due to doctors negligence at Ripponpet

SRI S. M. SHEERNALY CHANDRASEKHAR.—(Hosanagar) I call the attention of the Minister for Health to the death of a woman due to negligence of a doctor working at Ripponpet.

SRI H. SIDDAVEERAPPA (Minister for Health) I State as follows.—

1. It has been reported by the Director of Health and Family Planning Services, Bangalore that on 26th June 1972 at about 3-00 PM two persons from Halagadde village, Hosanagar Taluk, approached the Medical Officer of Health, Primary Health Unit, Ripponpet, requesting him to send the Midwife to conduct a delivery in Halagadde village. The Medical Officer of Health immediately instructed the Midwife to proceed to this village which is about 2¼ miles from Ripponpet. The Midwife reached the village at about 6-00 P. M. Smt. Rajamma, aged about 23 years, daughter of Kalappagowda was the woman. The Midwife was called to assist at delivery. Having examined this woman, the Midwife felt that it was necessary to send for the Medical Officer of Health to conduct the delivery.

2. Sri H. S. Ramegowda, Chairman of this Village Panchayat immediately proceeded to Ripponpet and returned to the village at about 7-00 P.M. accompanied by the Medical Officer of Health, Ripponpet. Smt. Rajamma had a normal delivery at about 8-00 P.M,

(SRI H. SIDDAVEERAPPA)

3. Having waited for about 10-15 minutes, the Medical Officer of Health returned to Ripponpet. Thereafter, the Midwife noticed that the patient was bleeding since the placenta was not yet expelled. Hence, she requested that the Medical Officer of Health be sent for once again. Once again Sri H.S. Ramegowda proceeeded to Ripponpet and requested the Medical Officer to come to the village. The time was about 11-00 P. M. The Medical Officer informed Sri H. S. Ramegowda that he would not be in a position to stop bleeding as facilities were not available in his institution, and therefore, he advised to shift the patient immediately to the Combined Dispensary, Anandapuram, for better treatment. Accordingly, Sri H. S. Ramegowda returned to the village and informed the parents of the woman about the fact. Later on, he went to the Combined Dispensary, Ananadapuram at about 1—30 A. M. on 27th June 1972 and requested the Medical Officer Ananandapuram, to come to the village. Accompanied by the Medical Officer of Anandapuram, he arrived at the village at about 3 P. M. By that time the patient had already expired.

4. From the report of the Director of Health and Family Planning Services, it is clear that there is a *prima facie* case of negligence on the part of the Medical Officer, Primary Health Unit. Ripponpet. He should have waited until the delivery was completed in all respects However, in this case, even before the placenta had been expelled, the doctor appears to have left the place leaving the case in the hands of Midwife. When the Midwife suspected that the case was becoming complicated, she wanted his assistance and hence sent for him. Inspite of his knowledge that the patient had developed complications, the doctor had not cared to go to the village and to attend on the patient. On the other hand, he had directed the relatives of the patient to go to Anandapuram. During this interval the patient had collapsed without medical care. As it has appeared to Government that this is a case of gross negligence on the part of the Doctor concerned, Government have ordered an enquiry into the conduct of the Doctor by the Joint Director of Health and Family Plannig Services (Health) and suitable disciplinary action would be taken against the Doctor on the receipt of the Enquiry Report.

SRI S. M. SHEERNALY CHANDRASEKHER.—I congratulate the Hon. Minister for Health for his statement, and I request him to keep it up. The incapacity of this doctor was brought to the notice of the Government about one year back and there is an agitation from the people of that village that the hospital being an upgraded hospital, an M.B.B.S. Doctor should be posted to that Hospital, but inspite of this request the Government has not taken action to post a Medical graduate doctor. Will the Government atleast now consider the request to post a M.B.B.S. doctor to that hospital ? Because of the incapacity of this

doctor, such a sad incident has taken place. This is not the first time that such an incident has taken place, several such instances have happened in the past. Hence the need for posting a doctor.

SRI H. SIDDAVEERAPPA.—It is true that this dispensary is an upgraded one and it needs a Class II Medical Officer. I am going to post a doctor to that hospital shortly.

ಶ್ರೀ ಕೋಣಂದೂರು ಲಿಂಗಪ್ಪ.—ರಿಪ್ಪನ್‌ಪೇಟೆ ಆಸ್ಪತ್ರೆಯಲ್ಲಿ ಅಗತ್ಯವಾದ ಸೌಲಭ್ಯಗಳೂ, ಔಷಧಿಗಳೂ ಸಾಕಷ್ಟಿಲ್ಲ. ಕೂಡಲೆ ಕಳುಹಿಸಿಕೊಡುತ್ತೀರಾ?

ಅಧ್ಯಕ್ಷರು : ಅದನ್ನೆಲ್ಲ ಮಾಡುವುದಾಗಿ ಮಂತ್ರಿಗಳು ಹೇಳಿದ್ದಾರೆ.

ಶ್ರೀ ಎಂ.ಎಸ್. ಕೃಷ್ಣನ್: ಸತ್ತುಹೋದವರ ಸಂಸಾರಕ್ಕೆ ಪರಿಹಾರ ಕೊಡುವುದಿಲ್ಲವೆ?

ಶ್ರೀ ಎಚ್ ಸಿದ್ದವೀರಪ್ಪ : ನಾನೂ ಕೂಡ ಪಶ್ಚಾತ್ತಾಪ ಪಡುತ್ತೇನೆ, ಅದನ್ನು ಕೊಡುವುದಕ್ಕೆ ಪ್ರಾವಿಷನ್ ಇದೆಯೋ ಇಲ್ಲವೋ ನೋಡಬೇಕು.

PRESENTATION OF THE REPORT OF THE COMMITTEE ON PRIVATE MEMBER'S BILLS AND RESOLUTIONS.

SRI B.P. KADAM.—Madam Speaker, I beg to present the Third Report of the Committe on Private Member's Bills and Resolutions.

Madam Speaker:—The Report is Presented.

[NON OFFICIAL PRIVATE MEMBER'S] RESOLUTION

Re: Introduction of total Prohibition in the State

Madam Speaker: Now further discussion on the resolution moved by Sri M.H. Jayaprakash Narayan on 31st July 1972. The Resolution reads as follows: "That this Assembly recommends that total prohibition be introduced through out the State by making alternative arrangements for the loss of revenue through fresh taxation measures in order to materialise ideals of Gandhism through Socialism."

Jubilation over the news of naming the State as 'Karnataka'

ಶ್ರೀ ವಾಟಾಳ್ ನಾಗರಾಜ್, ಚಾಮರಾಜಪೇಟೆ —ಅಧ್ಯಕ್ಷರೇ, ಒಂದು ಸಂತೋಷಕರವಾದ ಸುದಿ ಹೊರಬಿದ್ದಿದೆ, ತಾವು ಅಧ್ಯಕ್ಷರಾಗಿರುವಾಗ ಒಂದು ಪುಣ್ಯದ ಕೆಲಸವಾಗಿದೆ. ಹಿಂದೆ ನಾರಾ ಭಾರತೀ ಅಧ್ಯಕ್ಷರಾಗಿದ್ದರು ಅವರ ಕಾಲದಲ್ಲಾಗದಿರುವ ಕೆಲಸ ಇಂದು ಆಗಿದೆ. ಕರ್ನಾಟಕ ಎಂದು ನಮ್ಮ ರಾಜ್ಯಕ್ಕೆ ನಾಮಕರಣ ಮಾಡಲು ನಿಶ್ಚಯಿಸಿರುವುದಾಗಿ ತಿಳಿದು ಬಂದಿದೆ. ಇದು ಬಹಳ ಸಂತೋಷದ ಸಮಾಚಾರ. ಇಲ್ಲದೆ ಶ್ರೀ ಹನುಮಂತಪ್ಪನವರು ಶಾಸನಸಭೆಯ ಸೆಕ್ರೆಟರಿಯಾಗಿರುವಾಗ ಈ ಕೆಲಸವಾಗುತ್ತಿರುವುದು ಸಂತೋಷಕರವಾಗಿದೆ. ಈ ಸಂದರ್ಭದಲ್ಲಿ ನಮ್ಮ ಸಂತೋಷ ಉಕ್ಕಿ ಬಂದಿದೆ. ಈ ಶುಭ ಸಮಯದಲ್ಲಿ ಶುಭ ಸಂದೇಶವನ್ನು ಕೇಳಿ ಸಂತೋಷದಿಂದ ಅಧ್ಯಕ್ಷರು, ಮಂತ್ರಿಗಳು ಮುಂತಾದವರಿಗೆ ಅರ್ಪಿಸಲು ಸಂಪಿಗೆ ಹೂವನ್ನು ತಂದಿದ್ದೇನೆ, ತಾವು ಸ್ವೀಕಾರಮಾಡಬೇಕು, ತಾವು ಬೇಡವೆಂದು ಹೇಳಬಾರದು. (ಇಷ್ಟು ಹೇಳಿ ಅವರು ಸಂಪಿಗೆ ಹೂವನ್ನು ಅಧ್ಯಕ್ಷರು, ಸೆಕ್ರೆಟರಿಯವರು, ಮಂತ್ರಿಗಳು ಪತ್ರಿಕಾ ವರದಿಗಾರರು ಮುಂತಾದವರಿಗೆ ಹಂಚಿದರು)

ಶ್ರೀ ಎಚ್. ಸಿದ್ದವೀರಪ್ಪ.—ಬರೀ ಹೂವು ಕೊಟ್ಟರೆ ಸಾಲದು. ಈ ದಿವಸದಿಂದ ತಾವು ತೊಂದರೆ ತಕರಾರು ಮಾಡುವುದಿಲ್ಲವೆಂದು ಆಶ್ವಾಸನೆ ಕೊಟ್ಟರೆ ನಾವು ಹೂವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಕೋಣಂದೂರು ಲಿಂಗಪ್ಪ, (ತೀರ್ಥಹಳ್ಳಿ).—ತಮಗೆ ಸದ್ಬುದ್ಧಿ ಬಂದಿರುವುದಕ್ಕಾಗಿ ನಾನು ಕರ್ನಾಟಕದ ೩ ಕೋಟಿ ಜನರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಸ್ವಾತಂತ್ರ್ಯ ಬಂದ ೨೫ ವರ್ಷಗಳ ಮೇಲಾದರೂ ಸರಕಾರಕ್ಕೆ ಒಳ್ಳೆಯ ಬುದ್ಧಿ ಬಂದಿದೆ. ಕರ್ನಾಟಕ ರಚನೆಯಾದ ೧೬ ವರ್ಷಗಳ ನಂತರವಾದರೂ ಈ ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರಿಡಲು ನಿರ್ಧರಿಸಿರುವುದು ಸಂತೋಷದ ವಿಷಯ ವಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಆ ಕಡೆಯಿಂದ ಒಂದು ನಿರ್ಣಯ ಬರಬಹುದು, ಬಂದಾಗ ಎಲ್ಲರಿಗೂ ಹಾರ ಹಾಕಿದರೆ ಒಳ್ಳೆಯದು.

SRI H. S. SIDDAPPA.—I want to say something about Karnataka affair. In this connection I regret very much to bring your kind notice that the Town Municipal Council, Tumkur has made a resolution congratulating this House in regard to the transfer of Chief Minister. They have passed a resolution in this regard. I would like to know if there is transfer of our Chief Minister.

SRI S. M. SHEERANALLI CHANDRASHEKAR.—For private member's Resolution I have been allowed one hour time.

MADAM SPEAKER —There must be some limit for it the hon. Member has his chance.

ಶ್ರೀ ಎಸ್. ಬಂಗಾರಪ್ಪ.—ನಾನು ಪತ್ರ ಬರೆದಿರುವ ವಿಷಯದಲ್ಲಿ ಪ್ರಸ್ತಾಪ ಮಾಡಲು ನನಗೆ ಸೋಮವಾರವಾದರೂ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಆಗಬಹುದು.

SRI C. M. ARUMUGHAM.—I am submitting you have permitted Sri Vatal Nagaraj for distributing flowers...............

MADAM SPEAKER.—I have not permitted him.

SRI C. M. ARUMUGHAM.—This is a very auspicious occasion when the Ruling Party has decided to name the Mysore State as 'Karnataka'. I submit it would have been proper if the Government were to announce its decision in this House. It has come in the Press.

SRI H. SIDDAVEERAPPA.—I categorically say that the Government has not issued any press statement nor made any statement anywhere. If anything has appeared in the Press, The Government cannot be held responsible. The Government will take a decision and make announcement in the appropriate manner.

SRI C. M. ARUMUGAM.—I congratulate hon. Sri Devaraj Urs. and his Cabinet for the decision taken to name this State as Karnataka. It was for the last 15 to 16 years ever since the integration took place, this issue was there. Some section of the people were afraid of changing the name and they were opposing to change the name. Some section was in favour of changing the name. I feel happy that the

Government has got over the trouble and they have taken a decision in this regard. I hope it will be welcomed by the entire people of Mysore. I want to mention in this connection, the credit or ownership will not go to any particular community so far as naming the State as 'Karnataka'. It is not exclusively the ownership of any community so far as this naming of the State. By naming it, you may call it an integration or emotional integration. Everybody feels that it is their State.

MADAM SPEAKER.—Then what is the hon. member doing ?

SRI C. M. AURMUGHAM. I am only saying that there was some opposition for re-naming the State. Let me tell the House in detail. In this connection I want to say that the entire population congratulate the Chief Minister for his bold steps. The opposition was.. .....

MADAM SPEAKER.—The Hon. member will stop at that. I cannot allow him any further.

ಶ್ರೀ ಎಸ್. ಬಂಗಾರಪ್ಪ.—ಅಪ್ರೋಪ್ರಿಯೇಟ್ ಟೈಂನಲ್ಲಿ ನಿರ್ಣಯ ತರುವುದಾಗಿ ಹೇಳಿದ್ದಾರೆ. ಪಾರ್ಟಿ ತೀರ್ಮಾನ ಪತ್ರಿಕೆಯಲ್ಲಿ ಬಂದಿದೆ. ಕ್ಯಾಬಿನೆಟ್ ತೀರ್ಮಾನವಾಗಬೇಕೆಂದು ಕಾಣುತ್ತದೆ. ಎರಡು, ಮೂರು ದಿವಸಗಳಲ್ಲಿ ತರಬೇಕೆಂದು ಕೇಳಿಕೊಳ್ಳುತ್ತೇನೆ.

PRIVATE MEMBERS' RESOLUTION

re: Introduction of total prohibition in the state, etc.,

(Deputy Speaker in the Chair)

†ಶ್ರೀ ಕೆ. ಪ್ರಭಾಕರ್.—(ವರ್ತೂರು) ಮಾನ್ಯ ಅಧ್ಯಕ್ಷರೆ "ಸಮಾಜವಾದದ ಮೂಲಕ ಗಾಂಧೀ ತತ್ವವನ್ನು ಆಚರಣೆಗೆ ತರುವ ದೃಷ್ಟಿಯಿಂದ ಪಾನ ನಿರೋಧವನ್ನು ಜಾರಿಗೊಳಿಸುವುದರಿಂದಾಗುವ ನಷ್ಟವನ್ನು, ಪರ್ಯಾಯ ವ್ಯವಸ್ಥೆ ಮಾಡಿ ಹೆಚ್ಚಿನ ತೆರಿಗೆಗಳನ್ನು ವಿಧಿಸುವ ಮೂಲಕ, ತುಂಬಿ ರಾಜ್ಯಾದ್ಯಂತ ಸಮಗ್ರ ಪಾನನಿರೋಧವನ್ನು ಜಾರಿಗೊಳಿಸಬೇಕೆಂದು ಈ ಸಭೆಯವರು ಶಿಫಾರಸು ಮಾಡುತ್ತಾರೆ. ಎಂಬ ನಿರ್ಣಯವನ್ನು ನಿನ್ನೆ ದಿವಸ ಮಂಡಿಸಿದಾಗ ನಿನ್ನೆಯೂ ಚರ್ಚೆಯಾಗಿ ಈ ದಿವಸವೂ ಮುಂದುವರಿದಿದೆ. ಆದುದರಿಂದ ನಾನು ಇದರಲ್ಲಿರತಕ್ಕಂಥ ಮಹತ್ತರವಾದ ವಿಚಾರಗಳನ್ನು ಈ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ.

ಮಹಾತ್ಮ ಗಾಂಧಿಯವರು ನಮ್ಮ ಸಮಾಜವನ್ನು ಶುದ್ಧೀಕರಣ ಮಾಡುವ ದೃಷ್ಟಿಯಿಂದ ಪಾನ ನಿರೋಧವನ್ನು ಕಡ್ಡಾಯವಾಗಿ ಜಾರಿಗೆ ತಂದು ರಾಷ್ಟ್ರವನ್ನು ಪವಿತ್ರವನ್ನಾಗಿ ಮಾಡತಕ್ಕಂಥಾ ಧ್ಯೇಯ ಉಳ್ಳವರಾಗಿದ್ದರು. ಅವರು ಜೀವಂತವಾಗಿದ್ದ ಕಾಲದಲ್ಲಿ ಭಾರತ ದೇಶದ ಉನ್ನತ ನಾಯಕ ಸ್ಥಾನದಲ್ಲಿದ್ದಾಗ ಅವರು ಮೊಟ್ಟ ಮೊದಲನೆಯ ಕೆಲಸ ಪಾನ ನಿರೋಧ ಜಾರಿಗೆ ತರುತ್ತೇವೆ ಎಂಬುದಾಗಿ ಹೇಳಿದರು. ಈಗ ಆ ತತ್ವಗಳನ್ನು ಅನುಸರಿಸಿ ರಾಷ್ಟ್ರಾದ್ಯಂತ ವಿಪುಲವಾದಂಥ ಕಾರ್ಯಕ್ರಮಗಳನ್ನು ಹಾಕಿಕೊಂಡು ಸರ್ಕಾರ ಅದನ್ನು ನಡೆಸುವ ರೀತಿಯಲ್ಲಿ ಮಾಡಿಕೊಂಡಿದ್ದಾರೆಯೇ ಎಂದು ನಾವು ಪ್ರಶ್ನೆ ಮಾಡಬೇಕಾಗಿದೆ. ಈಗ ಸಮಾಜವಾದ ತತ್ವಗಳು ಅನುಷ್ಠಾನಕ್ಕೆ ಬಂದು ಸ್ವಲ್ಪಮಟ್ಟಿಗೆ ಎಲ್ಲರಿಗೂ ಸರಿಸಮನಾದ ಹಕ್ಕುಗಳು ಪ್ರಾಪ್ತಿಯಾಗಿ ಸಮಾಜದಲ್ಲಿನ ಏರುಪೇರುಗಳು ಮಾಯವಾಗಲು ಸರ್ವೋದಯ ಸಮಾಜವನ್ನು ರೂಢಿಸತಕ್ಕಂಥ ಕಡೆಗೆ ನಾಗಾಲೋಟದಲ್ಲಿ ಸರ್ಕಾರದವರು ಹೋಗುತ್ತಿದ್ದಾರೆ. ಇಂತಹ ಒಂದು ಸುಭದ್ರವಾದ ಸರ್ಕಾರದಿಂದ ರಾಜ್ಯಾಂಗ ಒಪ್ಪಿರತಕ್ಕಂಥ ತತ್ವಗಳಿಗನುಗುಣವಾಗಿ ಈ ಒಂದು ಭವ್ಯ ಸರ್ವೋದಯ ಸಮಾಜ ನಿರ್ಮಾಣವಾಗಬೇಕಾದರೆ ಈ ಒಂದು ಪಾನನಿರೋಧವು ಅದರ ಅತಿ ಮುಖ್ಯವಾದಂಥ ಕಾರ್ಯಕ್ರಮವಾಗಿರಬೇಕು. ಅದನ್ನು ಅಲ್ಲಗಳೆಯತಕ್ಕಂಥ ಶಕ್ತಿ ಯಾವ ರಾಷ್ಟ್ರಕ್ಕೂ, ಯಾವ ಜನತೆಗೂ ತುಂಬ

(ಶ್ರೀ ಕೆ. ಪ್ರಭಾಕರ್)

ಯಾವ ರಾಜಕಾರಣಿಗೂ ಇಲ್ಲ. ಆದರೆ ಈಗ ರಾಜ್ಯಭಾರದ ವ್ಯವಸ್ಥೆಗೆ ಬೇಕಾಗಿರತಕ್ಕಂಥ ಹಣಕಾಸಿನ ಕೊರತೆ ಪದೇ ಪದೇ ಬರುತ್ತದೆ ಎಂಬ ನೆಪದಿಂದ ಈ ಒಂದು ಕುಡಿತದದಿಂದ ಬರತಕ್ಕಂಥ ಹೆಚ್ಚಿನ ಹಣದ ಸೌಲಭ್ಯವನ್ನು ಪಡೆದುಕೊಳ್ಳಬೇಕೆಂಬ ಆಸೆಯಿಂದ ಈ ಒಂದು ಪಾನ ನಿರೋಧವನ್ನು ರದ್ದು ಮಾಡುವ ಕಡೆಗೆ ಕೆಲವು ಸರ್ಕಾರಗಳು ಪ್ರಯತ್ನ ಮಾಡಿದವು. ಈ ಒಂದು ಹಣವನ್ನು ಸರಿದೂಗಿಸುವುದಕ್ಕೆ ಕೇಂದ್ರ ಸರ್ಕಾರದವರು ಸಂಸ್ಥಾನದ ಸರ್ಕಾರಗಳಿಗೆ ಗ್ರ್ಯಾಂಟ್ ರೂಪದಲ್ಲಿ ಹಣವನ್ನು ಕೊಡತಕ್ಕಂಥ ಒಂದು ನಿರ್ದೇಶನವನ್ನೂ ಕೂಡ ಅವರು ಇಟ್ಟುಕೊಂಡಿದ್ದಾರೆ. ಮಾನ್ಯ ರಾಜಗೋಪಾಲಾಚಾರಿಯವರು ಈ ಪಾನ ನಿರೋಧವನ್ನು ಜಾರಿಗೆ ತರುವುದರಿಂದ ಸರ್ಕಾರಗಳಿಗೆ ಉಂಟಾಗತಕ್ಕ ಹಣದ ಕೊರತೆಯನ್ನು ಸರಿದೂಗಿಸುವುದಕ್ಕಾಗಿ ಸೇಲ್ಸ್ ಟ್ಯಾಕ್ಸನ್ನು ಜಾರಿಗೆ ತರುವ ಸಲಹೆ ಮಾಡಿದರು. ಈಗ ಮಾರಾಟ ತೆರಿಗೆ ಜಾರಿಗೆ ಬಂದೂ ಆಯಿತು. ಹೀಗಿದ್ದೂ ಈ ಪಾನ ನಿರೋಧಕ್ಕೆ ತಿಲಾಂಜಲಿ ಬಿಟ್ಟಿದ್ದರೂ ಕೂಡ ಅಖಿಲ ಭಾರತ ಕಾಂಗ್ರೆಸಿನ ಧ್ಯೇಯೋದ್ದೇಶಗಳಲ್ಲಿ ಪಾನ ನಿರೋಧವನ್ನು ಖಾಯಂ ಮಾಡತಕ್ಕಂಥ ಒಂದು ನಂಬಿಕೆಯನ್ನು ನಾವು ಇಟ್ಟುಕೊಂಡಿದ್ದೇವೆ. ಈ ಸುರಾಪಾನವನ್ನು ರದ್ದು ಮಾಡಿ ಅದನ್ನು ನೀರಾ ರೂಪದಲ್ಲಿ ಆಗಲಿ ಮತ್ತು ಬೆಲ್ಲ ಮಾಡತಕ್ಕಂಥ ರೂಪದಲ್ಲಿ ಆಗಲಿ ದೇಶದ ಸಂಪತ್ತನ್ನು ಹೆಚ್ಚಿಸುವ ವ್ಯವಸ್ಥೆ ಮಾಡಬಹುದು. ಭಾವ ಗರ್ಭದಿಂದ ಆಗಲಿ, ನೀರಾ ರೂಪದಿಂದಾಗಲಿ ಬರತಕ್ಕಂಥ ಆದಾಯಕ್ಕೆ ಸಮಯೋಚಿತವಾಗಿ ಸೆಸ್‌ಗಳನ್ನು ಹೆಚ್ಚಿಸಿದರೆ ಈ ಒಂದು ಹಣದ ಕೊರತೆಯನ್ನು ತಪ್ಪಿಸಿಕೊಳ್ಳಬಹುದು ಎಂದು ತಜ್ಞರು ಹೇಳಿದ್ದಾರೆ. ಈ ಸಭೆಯಲ್ಲಿ ಇದರ ಬಗ್ಗೆ ವಿಪುಲವಾದಂಥ ಚರ್ಚೆ ಮಾಡಿದ್ದೇವೆ. ಬಡವರ ಬಾಳನ್ನು ನೆಟ್ಟಗೆ ಮಾಡುವುದಕ್ಕೆ ಸರ್ಕಾರದವರ ಮತ್ತು ಸಾಹುಕಾರರು ಸಹಕರಿಸಿದಲ್ಲಿ ನಮ್ಮ ಮೇಲೆ ಏನೊಂದು ತೆರಿಗೆಯನ್ನು ಹೊರಿಸಿದರೂ ಕೂಡ ಅದನ್ನು ಕೊಡಲಿಕ್ಕೆ ಸಿದ್ಧವಾಗಿದ್ದೇವೆ. ಈಗ ದೇಶದಲ್ಲಿ ಬಡವರನ್ನು ಉದ್ಧಾರ ಮಾಡುವ ಕಾಲದಲ್ಲಿ ಸರ್ಕಾರದ ಧ್ಯೇಯೋದ್ದೇಶಗಳು ಕಾರ್ಯರೂಪಕ್ಕೆ ಬರುವಂತಾಗಬೇಕು. ಬಡವ ಮತ್ತು ಬಲ್ಲಿದರ ಜೀವನದ ಹೋರಾಟದ ಸಂದರ್ಭದಲ್ಲಿ ಬಡವರ ಬಾಳು ನೆಟ್ಟಗಾಗುವಂತೆ ಎಲ್ಲರೂ ಕೂಡ ಶ್ರಮಿಸಬೇಕು. ಈ ಸಂದರ್ಭದಲ್ಲಿ ಮಾನ್ಯ ಸದಸ್ಯರು ಬಡವರ ಬಾಳು ನೆಟ್ಟಗಾಗುವಂತೆ [illegible] ಅವರು ಉದ್ಧಾರವಾಗುವ ಹಾದಿಯಲ್ಲಿ ಮಾರ್ಗದರ್ಶನ ಮಾಡಬೇಕು. ನಮ್ಮ ಸಮಾಜದ [illegible] ಸ್ಥಾನದಲ್ಲಿರತಕ್ಕಂಥ ಅಧಿಕಾರ ವರ್ಗದವರ [illegible] ಮಾರ್ಗದರ್ಶನ [illegible] ಸಮಾಜದ ಘಾತುಕ ಮತ್ತು [illegible] ಉಂಟಾಗುತ್ತವೆ. ಈ ರೀತಿ ಉಂಟಾಗತಕ್ಕ ಅಪಘಾತವನ್ನು ತಡೆಯಬೇಕು. [illegible] ಆದರೆ [illegible] ಆಗುತ್ತಾ ಇರುವುದು ಸಮತಾವಾದ ಸಮಾಜ ರಚನೆ ಆಗಬೇಕೆಂದು ನಾವು ಬಯಸುತ್ತಾ ಇರುವುದನ್ನು ಇಂದು ಸಿಂಹಾವಲೋಕನ ಮಾಡಿ ನೋಡುವುದಾದರೆ [illegible] ಮಾಡುವುದು ಹೆಂಡ ಸಾರಾಯಿ ಕಳ್ಳಭಟ್ಟಿ [illegible] ಮಾಡಿ ಕುಡಿಯುವುದು ಜೂಜು ಆಡುವುದು [illegible] ವೋಟಿಗಾಗಿ ಜನರಿಗೆ ಹೆಂಡ ಕುಡಿಸಿ [illegible] ಓಟು ಪಡೆಯುವುದು [illegible] ಒಂದು ಜಾತಿಯನ್ನೇ ಹಾಳು ಮಾಡುವುದು ಇವನ್ನೆಲ್ಲಾ ನಾವು ನೆನೆಸಿಕೊಂಡರೆ ಗಾಂಧೀಜಿಯವರು ಯಾವ ಒಂದು ಸಮಾಜ ರಚನೆಯಾಗಬೇಕೆಂದು ಕನಸನ್ನು ಕಂಡಿದ್ದರೋ ಅಂಥ ಪುಣ್ಯವಾದ ಸಮಾಜಕ್ಕೆ ತಿಲಾಂಜಲಿಯನ್ನು ಕೊಟ್ಟಂತಾಗುತ್ತದೆ. ಇದನ್ನು ನಾವು ಕ್ರೋಢೀಕರಿಸಿ ಹೇಳುವುದಾದರೆ ಪಾನ ನಿರೋಧವನ್ನು ರದ್ದು ಮಾಡುವುದರಿಂದ ಜನರ ನೈತಿಕ ಮಟ್ಟ ಹಾಳಾಗುತ್ತದೆ. ದೇಶದಲ್ಲಿ ಜನರು ನೆಮ್ಮದಿಯಿಂದ ಬಾಳಬೇಕಾದರೆ ಈ ಕುಡಿತದಿಂದ ಆಗತಕ್ಕಂಥ ಅನ್ಯಾಯವನ್ನು ತಪ್ಪಿಸುವುದು ಸರ್ಕಾರದ ಕರ್ತವ್ಯ. ಇದನ್ನು ತಪ್ಪಿಸದೇ ಹೋದರೆ ಯಾವ ಡೆವಲಪ್‌ಮೆಂಟ್ ಸ್ಕೀಮುಗಳನ್ನು ಹಾಕಿಕೊಂಡರೂ ಕೂಡ ಅದು ತೂತು ಇರತಕ್ಕಂಥ ಮಡಕೆಯಲ್ಲಿ ನೀರು ಯಾವ ರೀತಿ ಸೋರಿ ಹೋಗುತ್ತದೆಯೋ ಆ ರೀತಿ ಆಗುತ್ತದೆ ಎಂದು ಜನರು ಭಾವಿಸುತ್ತಾರೆ.

10-30 A.M.

ನಮ್ಮ ಪಕ್ಷದ ನೈತಿಕ ಬಲ, ತೇಜಸ್ಸು ಇದೆ ಎಂದು ಹೇಳುವುದಾದರೆ, ಸುರಾದೇವತೆಯನ್ನು ದೂರ ಇಡುವುದಕ್ಕೆ, ಕಿತ್ತು ಒಗೆಯುವುದಕ್ಕೆ ಎಂದು ವಸಸ್ಸು ಮಾಡುತ್ತೇವೆ ಎಂದು ಮತ್ತು ಆ ಮುಖೇನ ಮಾತ್ರ. ಇದರ ಕಡೆಗೆ ಯಾವ ಸರ್ಕಾರವೇ ಆಗಲೀ ತಿರಸ್ಕಾರ ಮನೋಭಾವನೆಯನ್ನು ತೋರಿಸಿ ಕೇವಲ ದುಡ್ಡಿನ ಆಸೆಯಿಂದ ಮಾತ್ರ ಕುಡಿತವನ್ನು ಮನ್ನಾ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದರೆ ಹೆಚ್ಚಿನ ನೈತಿಕ ಬಲವನ್ನು ಸರ್ಕಾರ ಕಳೆದುಕೊಂಡಂತಾಗುತ್ತದೆ. ಬಡವರ ಉದ್ಧಾರಕ್ಕಾಗಿ ಏನೇನು ಧ್ಯೇಯ, ಧೋರಣೆಗಳು ಮತ್ತು ಯೋಜನೆಗಳನ್ನು ಹಾಕಿಕೊಂಡಿದ್ದೇವೆ ಅದರಲ್ಲಿ ೬೦ ಪರ್ಸೆಂಟ್ ಕುಡಿತದ ಹಾವಳಿ

ಯಿಂದ ನಷ್ಟವಾಗುತ್ತದೆ. ಒಂದು ಕೈಯಲ್ಲಿ ಕೊಟ್ಟಂತೆ ತೋರಿಸಿ ಮತ್ತೊಂದು ಕೈಯಲ್ಲಿ ನಿರಾಯಾಸವಾಗಿ ಮಾಯವಾಗುವ ರೂಪದಲ್ಲಿದೆ ಎಂದರೆ ತಪ್ಪಾಗಲಾರದು. ಹಿಂದೆ ಭಾರತ ಸರ್ಕಾರದವರು ಟೇಕ್‌ಚಂದ್ ಕಮಿಟಿ ಎನ್ನು ರಚನೆ ಮಾಡಿ ಅವರಿಂದ ಸಲಹೆಗಳನ್ನು ಪಡೆದು ಇಡೀ ದೇಶದಲ್ಲಿ ಪಾನನಿರೋಧವನ್ನು ಜಯಪ್ರದವಾಗಿ ಜಾರಿಗೆ ತರಬಹುದ ಎಂದು ಅಭಿಪ್ರಾಯ ಪಟ್ಟರು. ಇದು ಸ್ಟೇಟ್ ಸಬ್ಜೆಕ್ಟ್ ಎನ್ನುವ ರೀತಿಯಲ್ಲಿ ಆಯಾ ಸಂಸ್ಥಾನಗಳು ತಮ್ಮ ತಮ್ಮ ಅನುಕೂಲಕ್ಕೆ ತಕ್ಕಂತೆ ನಿರೂಪಿಸಿಕೊಳ್ಳಲಿ ಎನ್ನುವ ಶಂಕೆ ಬಂತು. ತದನುಸಾರವಾಗಿ ಕೆಲವು ಸರ್ಕಾರಗಳು ಹೆಚ್ಚು ಶ್ರದ್ಧೆಯಿಂದ ನಡೆಸಿದುವು. ಈ ದೃಷ್ಟಿಯಲ್ಲಿ ಯೋಚನೆ ಮಾಡುವುದಾದರೆ ಮೊನ್ನೆ ಮೊನ್ನೆಯವರೆಗೆ ಕೂಡ ಪಾನನಿರೋಧವನ್ನು ಜಾರಿಯಲ್ಲಿ ಇಟ್ಟು ಕೊಂಡಿದ್ದಂಥ ಮದ್ರಾಸ್ ಸರ್ಕಾರವನ್ನು ನಾವು ಮೆಚ್ಚಬೇಕಾಗಿದೆ. ಗೋವ ಎ.ಐ.ಸಿ.ಸಿ. ಅಧಿವೇಶನದಲ್ಲಿ ಮೈಸೂರು ರಾಜ್ಯದಲ್ಲಿ ಹೆಂಡವನ್ನು ಮಾರಾಟ ಮಾಡಬಹುದು ಎನ್ನುವ ತತ್ವವನ್ನು ಒಪ್ಪಿಕೊಂಡರು. ಈ ಸಂಬಂಧದಲ್ಲಿ ಆಗ ಮಂತ್ರಿಯಾಗಿದ್ದ ಶ್ರೀಮತಿ ಯಶೋಧರಮ್ಮ ದಾಸಪ್ಪನವರು ಮಂತ್ರಿಮಂಡಲ ಬಿಟ್ಟು ಹೋದರು. ಬಡ ಜನರಿಗೆ ಹೆಂಡ ಕುಡಿಸಿ ಅವರನ್ನು ಹಾಳು ಮಾಡತಕ್ಕ ಸರ್ಕಾರದಲ್ಲಿ ನಾನು ಇರುವುದಿಲ್ಲವೆನ್ನುವ ಧೋರಣೆಯನ್ನು ಅವರು ಇಟ್ಟುಕೊಂಡು ಮಂತ್ರಿಮಂಡಲವನ್ನು ಬಿಟ್ಟರು. ಆದರೆ ಈ ಸಂದರ್ಭದಲ್ಲಿ ಮೈಸೂರು ದೇಶಕ್ಕೆ ಹೆಂಡ ತಂದುಕೊಟ್ಟು ಅದನ್ನು ರೂಢಮೂಲವಾಗಿ ಬೆಳಸಿ ಹೆಚ್ಚು ಹಣ ಸಂಪಾದನೆ ಮಾಡುತ್ತೇವೆಂದು ಹೇಳಿದ ಅಪಕೀರ್ತಿ ಮಾನ್ಯ ಹೆಗಡೆಯವರಿಗೆ ಮತ್ತು ವೀರೇಂದ್ರ ಪಾಟೀಲರಿಗೆ ಬಂದಿದೆ. ಈಗಲಾದರೂ ಕೂಡ ನಮ್ಮ ಸರ್ಕಾರ ಬಂದ ಮೇಲೆ, ಹೆಚ್ಚಿನ ಶಕ್ತಿ, ಒಳ್ಳೆಯ ಧೈರ್ಯ ಧೋರಣೆ ಇರತಕ್ಕ ನಮ್ಮ ಮಂತ್ರಿಮಂಡಲವಿರುವಾಗ ಈ ದಿಸೆಯಲ್ಲಿ ನಾವು ಹೆಚ್ಚಿನ ಶ್ರದ್ಧಾ ಭಕ್ತಿಯಿಂದ ಕೆಲಸ ಮಾಡಿ, ದುಡಿದು ಪಾನನಿಷೇಧ ಕ್ರಮ ಮಾಡುವುದಕ್ಕೆ ಪ್ರಯತ್ನ ಮಾಡಬೇಕಲ್ಲದೆ, ಕುಡಿದವರು ಜೈಲಿಗೆ ಹೋಗುವಂಥ ಪರಿಸ್ಥಿತಿ ಇದೆ ಎನ್ನುವುದನ್ನು ಜನರಿಗೆ ತಿಳಿಸಿ, ಅವರಲ್ಲಿ ಕುಡಿಯುವ ಭಾವನೆಯನ್ನು ಕಡಿಮೆ ಮಾಡುವುದಕ್ಕೆ ಸ್ಟೇಟ್ ಒನ್ಡ್ ಸೆಂಟ್ರಲ್ ಪ್ರಾಪಗ್ಯಾಂಡ ಟೆಂಪರೆನ್ಸ್ ಕಮಿಟಿ ವ್ಯವಸ್ಥಿತವಾಗಿ ಮಾಡಬೇಕೆಂದು ಅನೇಕ ಸಲ ಸಲಹೆ ಕೊಟ್ಟಿದ್ದೇನೆ. ಆದರೆ ಸರ್ಕಾರ ಇನ್ನೂ ಕೂಡ ಆ ಕಡೆ ಗಮನಕೊಟ್ಟಿಲ್ಲ.

ಮಾನ್ಯ ಹಣಕಾಸಿನ ಸಚಿವರು ಮಾಡಿದ ಭಾಷಣದಿಂದ ಕಂಡು ಬರುವಂತೆ ಕುಡಿತದ ಬಾಬಿನಿಂದ ೨೮ ಕೋಟಿ ರೆವೆನ್ಯೂ ಬರುತ್ತದೆ. ಹೆಂಡ ತರಲೇ ಬಾರದು. ಒಂದು ವೇಳೆ ಟೆಂಪೊರರಿಯಾಗಿ ಅದನ್ನು ತರತಕ್ಕ ಸಂದರ್ಭ ಬಂದರು ಅದರಿಂದ ಬರತಕ್ಕ ಎಲ್ಲ ವರಮಾನವನ್ನೂ ಅಥವಾ ಸೇಕಡ ೭೫ ರಷ್ಟನ್ನು ಕೇವಲ ಬಡ ಮಕ್ಕಳ ವಿದ್ಯಾಭ್ಯಾಸಕ್ಕಾಗಿ, ಕುಡಿಯತಕ್ಕ ಚಾಳಿ ಇರುವ ಬಡವರ ಮಕ್ಕಳಿಗೆ ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡಬೇಕೆಂದು ಅನೇಕ ಸಲ ಹೇಳಿದ್ದರೂ ಕೂಡ ಇದರ ಕಡೆಗೆ ಹೆಚ್ಚು ಗಮನ ಕೊಡದೆ ೧೦ ಲಕ್ಷ ರೂಪಾಯಿಗಳನ್ನು ಇಟ್ಟು, ಹೆಂಡದ ಅಂಗಡಿಗಳನ್ನು ಸುಭದ್ರವಾಗಿ ಕಟ್ಟುವ ಯೋಜನೆ ಹಾಕಿರುವ ರೀತಿಯಲ್ಲಿ ಬಜೆಟ್ಟಿನಲ್ಲಿ ಹಣವನ್ನು ಒದಗಿಸಿರುವುದು ಮೆಚ್ಚತಕ್ಕ ವಿಷಯವಲ್ಲ. ಹೆಂಡದ ಅಂಗಡಿಗಳನ್ನು ಸುಭದ್ರವಾಗಿ ಗುಡಿಸಲ ಜನ ಇರುವ ಕಡೆ ಕಟ್ಟಿದರೆ ಅದನ್ನು ಕಿತ್ತು ಹಾಕುವುದರಿಂದ ನಷ್ಟವಾದೀತು. ಇವುಗಳನ್ನು ಕಟ್ಟಬೇಕಾದರೂ ಕೂಡ ಒಂದು ರೀತಿಯಲ್ಲಿ ಯೂತ್ ಕ್ಲಬ್ ಆಗಿ ಮುಂದೆ ಆ ಕಟ್ಟಡಗಳನ್ನು ಉಪಯೋಗಿಸಿಕೊಳ್ಳುವ ರೀತಿಯಲ್ಲಿ, ಹೆಂಡದ ಹಾವಳಿ ಹೋದ ಮೇಲೆ ಆ ಕಟ್ಟಡಗಳು ವೇಸ್ಟ್ ಆಗದ ರೀತಿಯಲ್ಲಿ ಏನಾದರೂ ಕೆಲಸಕ್ಕೆ ಬರುವ ರೀತಿಯಲ್ಲಿ ಕಟ್ಟಬೇಕೆಂದು ಸಲಹೆ ಮಾಡುತ್ತೇನೆ. ಹೆಂಡ ಕುಡಿಯುವುದನ್ನು ಜಾಸ್ತಿ ಮಾಡುತ್ತೇವೆ, ಎಲ್ಲರೂ ಕುಡಿಯುವ ಹಾಗೆ ಮಾಡುತ್ತೇವೆ ಎನ್ನುವ ದೃಷ್ಟಿ ಇರಬಾರದು. ಒಂದು ಸಲ ಒಬ್ಬ ಮಾನ್ಯ ಸದಸ್ಯರು ಹೇಳಿದ್ದು ನನಗೆ ಜ್ಞಾಪಕವಿದೆ. ವ್ಯವಸ್ಥಿತ ರೂಪದಲ್ಲಿ ಬಾಟಲಿನಲ್ಲಿ ಹಾಕಿ ಕೊಟ್ಟರೆ ಕುಡಿಯದೇ ಇರುವ ಜನರು ಕೂಡ ಕುಡಿಯುತ್ತಾರೆ. ಎಲ್ಲರೂ ಕುಡಿಯುವವರೇ. ಆದರೆ ಕುಡಿಯುವವರು ಕುಡಿಯದೆ ಇರುವವರು ಎನ್ನುವ ಭಾವನೆಯೇ ಇರುವುದಿಲ್ಲ ವೆಂದು ಹೇಳಿದರು. ಅಮೆರಿಕಾ ಮತ್ತು ಇತರ ಪಾಶ್ಚಾತ್ಯ ದೇಶಗಳ ಹಿನ್ನೆಲೆಯಲ್ಲಿ ನಾವು ನೋಡ ಬಾರದು. ನಮ್ಮದು ನಿಗೂಢವಾದ ಸಂಸ್ಕೃತಿ ಇರುವುದರಿಂದ ಕುಡಿಯದೆ ಇರತಕ್ಕ ಜನ ನಮ್ಮ ಸಮಾಜದಲ್ಲಿ ಹೆಚ್ಚು ಹೆಚ್ಚು ಇದ್ದಾರೆ. ಪಾಶ್ಚಾತ್ಯರನ್ನು ಅನುಕರಣೆ ಮಾಡುವುದು ಬೇಡ. ಕುಡಿಯದೆ ಇರುವವರ ಸಂಖ್ಯೆ ಮತ್ತು ಕುಡಿಯತಕ್ಕವರ ಸಂಖ್ಯೆಯನ್ನು ನಾವು ಪರಿಶೀಲನೆ ಮಾಡಿದರೆ ನಮ್ಮಲ್ಲಿ ಕುಡಿಯದೆ ಇರುವವರ ಸಂಖ್ಯೆ ಜಾಸ್ತಿ. ಕುಡಿಯುವ ದುಷ್ಟ ಚಟವನ್ನು ಯಾರೂ ಒಪ್ಪುವುದಿಲ್ಲ. ಸರ್ಕಾರ ಇದು ಒಳ್ಳೆಯದು ಎನ್ನುವುದನ್ನು ಒಪ್ಪದೆ ಇದ್ದರೂ ಕೂಡ, ಕುಡಿತವನ್ನು ನಿರ್ಮೂಲ ಮಾಡುವ ಕಡೆಗೆ ಹೆಚ್ಚು ಗಮನವನ್ನು ಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ.

ಸರ್ಕಾರದವರು ಕುಡಿತವನ್ನು ಅತ್ಯಾವಶ್ಯಕವಾಗಿ ಮಾಡಿ, ವ್ಯವಸ್ಥಿತವಾಗಿ ಮಾಡಿ ಚೆನ್ನಾಗಿ ನಡೆಸುತ್ತೇವೆಂದು ಆಸೆಪಟ್ಟರೂ ಕೂಡ ಕಳ್ಳಭಟ್ಟಿ ತಯಾರಿಕೆ ಇನ್ನೂ ಹೋಗಿಲ್ಲ. ಇದನ್ನು ಕಡಮೆ ಮಾಡುವುದಕ್ಕೋಸ್ಕರ ಹೆಂಡ ತರುತ್ತೇವೆಂದು ಹೇಳಿದ ಸೋಗು ಎಲ್ಲಿ ಹೋಯಿತು ಎಂದು ಕೇಳುತ್ತೇನೆ.

(ಶ್ರೀ ಕೆ. ಪ್ರಭಾಕರ್)

ಈ ರೀತಿಯಾಗಿ ಒಂದು ಕಡೆ ಕಳ್ಳಭಟ್ಟಿ ತಯಾರಿಕೆ ಜಾಸ್ತಿಯಾಗಿ ಅದನ್ನು ಕುಡಿಯುವುದರಲ್ಲಿ ಸಮಾಜ ಘಾತುಕತನ ಉಂಟಾಗುತ್ತದೆ, ಅದನ್ನು ನಿಲ್ಲಿಸಲೇ ಬೇಕು ಎನ್ನುವ ಪ್ರಾರ್ಥನೆಯನ್ನು ಸರ್ಕಾರದ ಮುಂದೆ ಇಡುವವನಾಗಿದ್ದೇನೆ. ಇದರಲ್ಲಿ ತಾತ್ಸಾರ ಭಾವನೆ ತಾಳಬಾರದು. ಅಮೆರಿಕಾ ಮುಂತಾದ ದೇಶಗಳಲ್ಲಿ ಸಾಧನೆ ಮಾಡುವುದಕ್ಕೆ ಸಾಧ್ಯವಿಲ್ಲದೆ ಇರಬಹುದು, ಆದರೆ ನಮ್ಮ ಭಾರತದ ಜನ ಸಾಧನೆ ಮಾಡೀತು ಎಂದು ಹೇಳುತ್ತೇನೆ. ಹಿಂದೆ ಮಹಾತ್ಮ ಗಾಂಧೀಜಿ ಅವರು ಈ ಸಂಬಂಧದಲ್ಲಿ, ಮಹಿಳೆಯರಾದರೂ ಹೆಚ್ಚು ಶ್ರದ್ಧೆ ವಹಿಸಿ ಮುಂದುವರೆಯಲಿ ಎನ್ನುವ ಆಸೆಯನ್ನು ವ್ಯಕ್ತಪಡಿಸಿದ್ದರು. ಕುಡುಕರು ಗಂಡಂದಿರಾಗಿದ್ದರೆ ಅವರನ್ನು ಮನೆಗೆ ಸೇರಿಸುವುದಿಲ್ಲವೆನ್ನುವ ಮಾತನ್ನು ಹೇಳುವುದಕ್ಕೆ ಮಹಿಳೆಯರು ಪ್ರಯತ್ನ ಮಾಡಿದರೆ ಕುಡಿತ ಕಡಿಮೆಯಾದೀತೋ ಏನೋ ಎನ್ನುವುದನ್ನು ಕೂಡ ನಾನು ಹೇಳುತ್ತೇನೆ. ಸರ್ಕಾರ ಒಂದು ವ್ಯವಸ್ಥಿತವಾದ ರೀತಿಯಲ್ಲಿ ಕುಡಿತಕ್ಕೆ ಅವಕಾಶ ಕೊಡದೆ, ಪೂರ್ಣ ಪಾನನಿರೋಧ ಜಾರಿಗೆ ಬರುವುದಕ್ಕೆ ಏನು ವ್ಯವಸ್ಥೆ ಮಾಡಬೇಕೋ ಅದನ್ನು ಮಾಡಿ ಮಾದರಿ ಮೈಸೂರಿನ ಕೀರ್ತಿ ಮೆರೆಯುವ ಹಾಗೆ ಮಾಡಬೇಕು. ಸಮಾಜದಲ್ಲಿ ಒಳ್ಳೆಯವರು, ಸುಶಿಕ್ಷಿತರು, ವಿದ್ಯಾವಂತರು ಎನ್ನತಕ್ಕ ಜನ ಕುಡಿತದ ದೆಸೆಯಿಂದ ಹಾಳಾಗುತ್ತಿದ್ದಾರೆ. ಇದು ಕೂಡ ತಪ್ಪಬೇಕು ಎಂದು ಹೇಳುತ್ತೇನೆ. ನಮ್ಮ ರಾಜ್ಯಕ್ಕೆ 'ಕರ್ನಾಟಕ' ಎನ್ನುವ ಹೆಸರು ಬರಲಿರುವುದರ ಸಂತೋಷಾರ್ಥವಾಗಿ ಮಾನ್ಯ ಸದಸ್ಯರು ಪುಷ್ಪಗಳನ್ನು ಹಂಚಿದರು. ಹಾಗೆಯೇ ನಮ್ಮ ರಾಜ್ಯದಲ್ಲಿ ಪೂರ್ಣ ಪಾನನಿರೋಧ ಜಾರಿಗೆ ಬಂದ ದಿವಸ ಒಂದು ಹಬ್ಬವನ್ನು ಆಚರಿಸುವ ದಿನವನ್ನು ಆಚರಿಸುವ ದಿನವನ್ನು ನಾವು ಬೇಗ ಕಾಣಬೇಕು. ಅದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು. ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಧೈರ್ಯ ಶಾಲಿಗಳು ಎನ್ನುವ ಹೆಸರನ್ನು ಪಡೆದಿದ್ದಾರೆ. ಈ ಕಾರ್ಯವನ್ನು ಮಾಡಿ ಇನ್ನೂ ಹೆಚ್ಚು ಕೀರ್ತಿಯನ್ನು ಪಡೆಯಬೇಕೆಂದು ಸಲಹೆ ಮಾಡಿ, ನಮ್ಮ ಮುಂದೆ ಇರುವ ನಿರ್ಣಯಕ್ಕೆ ಹೃತ್ಪೂರ್ವಕ ಬೆಂಬಲ ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

‡ ಶ್ರೀ ಬಿ. ವಿ. ಕಕ್ಕಿಲಾಯ, (ಬಂಟವಾಳ) :—

ಸನ್ಮಾನ್ಯ ಅಧ್ಯಕ್ಷರೇ, ಈ ನಿರ್ಣಯವನ್ನು ನಾನು ವಿರೋಧಿಸುತ್ತೇನೆ, ವಿರೋಧಿಸುವಾಗ ನಾನು ಕುಡುಕುತನ ಸಮಾಜದಲ್ಲಿ ಹೆಚ್ಚಾಗಬೇಕು ಎನ್ನುವ ಅಭಿಪ್ರಾಯದಿಂದ ಖಂಡಿತ ವಿರೋಧಿಸುತ್ತಿಲ್ಲ. ಶ್ರೀಮಾನ್ ಜಯಪ್ರಕಾಶ್ ನಾರಾಯಣ್ ಅವರು ಈ ನಿರ್ಣಯವನ್ನು ಸಭೆಯ ಮುಂದೆ ತಂದು ಭಾಷಣ ಮಾಡಿದಾಗ ಕುಡುಕುತನದ ವಿರುದ್ಧವಾಗಿ ಮಹಾಕವಿಗಳು ಹೇಳಿದಂಥಾದ್ದನ್ನು ಬಹಳ ಚೆನ್ನಾಗಿ ವಿವರಣೆ ಮಾಡಿದರು. ಆದರೆ ಯಾರೂ ಕೂಡ ಈ ಪ್ರಾಹಿಬಿಷನ್ ಅನ್ನು ಜಾರಿಗೆ ತಂದು ಕಾನೂನಿನಿಂದ ಮದ್ಯ ಪಾನದ ಚಟವನ್ನು ಹೋಗಲಾಡಿಸುವುದಕ್ಕೆ ಸಾಧ್ಯವಿದೆ ಎಂದು ಸಮರ್ಥಿಸಿಲ್ಲ. ಯಾವುದೇ ಉದಾಹರಣೆಯನ್ನು ಕೊಡಲಿಲ್ಲ. ನಮ್ಮ ದೇಶದಲ್ಲಿ ಪರಂಪರಾಗತವಾಗಿ ಮದ್ಯಪಾನದ ಚಟ ಹಿಂದಿನಿಂದಲೂ ಇದೆ. ಹಿಂದೆ ಬ್ರಾಹ್ಮಣರೂ ಕೂಡ ಮದ್ಯಪಾನ ಮತ್ತು ಮಾಂಸ ಭಕ್ಷಣೆಯನ್ನು ಮಾಡುತ್ತಾ ಇದ್ದರು. ಆದರೆ ನಾನು ಅವರನ್ನು ಅಭಿನಂದಿಸಬೇಕಾಗಿದೆ, ಮತ್ತು ಅವರಿಂದ ಪಾಠ ಕಲಿಯಬೇಕಾಗಿದೆ. ಬ್ರಾಹ್ಮಣರು ಇದನ್ನು ಬೇರೆಯವರಲ್ಲಿ ಬೆಳೆಸಿದರೂ ಬಹಳ ಸಾಧನೆ ಮಾಡಿ ತಮ್ಮಲ್ಲಿ ಇಲ್ಲದಂತೆ ಮಾಡಿದರು. ಯಾವ ರೀತಿಯಿಂದಲೋ ಅದನ್ನು ತೊಲಗಿಸಿದರು.

Sri M. Mallikarjunaswamy, (Minister for Community Development and Social Welfare) : In matters of food cult, Brahmins have undergone two revolutions but non Brahmins have undergone one revolution The Brahmins have undergone a charge from being beef-eaters to being non-beef eaters and from being drinkers to non-drinkers. The non-Brahmins have become only non-beef eaters : the have to undergo another revolution.

ಶ್ರೀ ಬಿ. ವಿ. ಕಕ್ಕಿಲಾಯ :—ಈ ಉದಾಹರಣೆಯನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಮದ್ಯ ಪಾನವನ್ನು ಸಮಾಜದಿಂದ ತೊಡೆದು ಹಾಕಬೇಕಾದರೆ ಅನೇಕ ವರ್ಷಗಳ ಸಾಧನೆ ಮಾಡಬೇಕು. ಒಂದು ಉದಾಹರಣೆಯನ್ನು ಹೇಳುವುದಾದರೆ, ಮದ್ಯಪಾನವನ್ನು ಹಾಗೂ ಮಾಂಸ ಭಕ್ಷಣೆಯ ಪ್ರವೃತ್ತಿಯನ್ನು ಮುಂದುವರಿದ ಪ್ರವೃತ್ತಿ ಎಂದು ಮನೋಧರ್ಮ ಶಾಸ್ತ್ರದಲ್ಲಿ ಹೇಳಿದ್ದಾರೆ. ಕಾನೂನು ಮೂಲಕ

ಕಾಯಿದೆ ಮೂಲಕ ಇದನ್ನು ತಡೆಯುವುದಕ್ಕೆ ಸಾಧ್ಯವಿಲ್ಲ. ಇದನ್ನು ತೊಲಗಿಸಬೇಕಾದರೆ, ಏನು ಮಾಡಬೇಕು ಎಂದು ಹೇಳುತ್ತೇನೆ. ಮನುಷ್ಯನ ಪ್ರವೃತ್ತಿಯನ್ನು ಫಲಕಾರಿಯಾಗಿ ಶಾಸನದ ಮೂಲಕ ತೊಡೆದು ಹಾಕುವುದಕ್ಕೆ ಸಾಧ್ಯವಿಲ್ಲ.

ಆ ಕಾಲದಲ್ಲಿ ಹಾಗೆ ಇತ್ತು, ಬಹುಶಃ ಈ ಕಾಲದಲ್ಲಿ ತಾವೂ ಕೂಡ ಒಪ್ಪಲಿಕ್ಕಿಲ್ಲ ಎಂದು ತಿಳಿದುಕೊಳ್ಳುತ್ತೇನೆ. ಯಾರಾದರೂ ಹೆಂಡ ಕುಡಿದರೆ ಅಥವಾ ಸುರಾಪಾನ ಮಾಡಿ, ತಿರುಗಾಡಿದರೆ ಅಂಥವನನ್ನು ಹಿಡಿದು ಕಬ್ಬಿಣವನ್ನು ಕಾಯಿಸಿ ಹೆಂಡದ ಮುದ್ರೆಯ ಮೊಹರನ್ನು ಹಣೆಗೆ ಒತ್ತಿ ಸಮಾಜದಲ್ಲಿ ಭ್ರಷ್ಟನನ್ನಾಗಿ ಮಾಡಬೇಕು. ಹಾಗೆ ಮಾಡಿ ಸುರ ಧ್ವಜ ಮುದ್ರೆ ಒತ್ತಿ ಕಳುಹಿಸಿದರೆ, ಅವರು ಕುಡಿಯುವುದನ್ನು ಬಿಡುತ್ತಾರೆ ಎಂದು ಹೇಳುತ್ತೇನೆ, ಅಂಥ ಕಠಿಣವಾದ ಕ್ರಮವನ್ನು ಈವೊತ್ತಿನದಿವಸ ಸರ್ಕಾರ ಕೈಗೊಳ್ಳುತ್ತದೋ ಇಲ್ಲವೋ ಗೊತ್ತಿಲ್ಲ ಇಂಥ ಕ್ರಮವನ್ನು .ಕೈಗೊಳ್ಳುವುದಿದ್ದರೆ ಎಷ್ಟು ಜನ ಮಂತ್ರಿಗಳ ಹಣೆಯಮೇಲೆ, ಎಂ.ಎಲ್.ಎ. ಗಳ ಹಣೆಯ ಮೇಲೆ ಸಮಾಜದ ನಾಯಕರುಗಳ ಹಣೆಯ ಮೇಲೆ ಸುರ ಧ್ವಜವನ್ನು ಒತ್ತಿ ಸಮಾಜದಲ್ಲಿ ಬಹಿಷ್ಕಾರ ಮಾಡಿ ಬಿಡಬೇಕೋ ನನಗೆ ಗೊತ್ತಿಲ್ಲ. ಇಂಥ ಕ್ರಮವನ್ನು ತೆಗೆದುಕೊಳ್ಳಬೇಕಾಗಿದ್ದರೆ ನಾನು ನನ್ನ ಸಂಪೂರ್ಣ ಬೆಂಬಲವನ್ನು ಕೊಡುತ್ತೇನೆ. ಮೊನ್ನೆ ಪ್ರಜಾವಾಣಿ ಛೂಬಾಣದಲ್ಲಿ ಬಂದ ಲೇಖನವನ್ನು ಓದಿದ್ದೇನೆ .ಗುಲ್ಬರ್ಗದಲ್ಲಿ ನಡೆದ ನಿಶಾ ಪ್ರಕರಣ ಎಂದು ಬಂದಿದೆ, ಇದು ಎಷ್ಟು ಸತ್ಯವೋ ಸುಳ್ಳೋ ಗೊತ್ತಿಲ್ಲ. ಯಾರೂ ಈ ಬಗ್ಗೆ ವಿವರಣೆ ಕೊಟ್ಟಿಲ್ಲ, ಮೇಲಿನ ಸಭೆಯಲ್ಲೂ ಕೊಟ್ಟಿಲ್ಲ. ಇಂಥ ಪ್ರಕರಣ ನಡೆದರೆ, ಅಂಥವರನ್ನು ಮಂತ್ರಿಮಂಡಲದ ಹೊರಗೆ ಹಾಕುವುದು ಅಷ್ಟೇ ಅಲ್ಲ, ಅವರಿಗೆ ಸುರ ಧ್ವಜವನ್ನು ಹಣೆಗೆ ಒತ್ತಿ ಅವರನ್ನು ಇಡೀ ರಾಜ್ಯದಲ್ಲಿ ಮೆರವಣಿಗೆ ಮಾಡುವ ಧೈರ್ಯ ಸರ್ಕಾರಕ್ಕೆ ಇದೆಯೇ ? ಹಿಂದೆ ನಮ್ಮ ದೇಶದಲ್ಲಿ ಎಲ್ಲಾ ಕಡೆಗಳಲ್ಲೂ ಕೂಡ ಪ್ರಾಹಿಬಿಷನ್ ಇತ್ತು. ಪ್ರಾಹಿಬಿಷನ್ ಇದ್ದಾಗ ಇದರ ಬಗ್ಗೆ ಅನೇಕ ಬಾರಿ ಚರ್ಚೆಯನ್ನು ಕೂಡ ಮಾಡಿದ್ದೇವೆ. ಈ ಮದ್ಯಪಾನ ನಿಷೇಧ ಶಾಸನ ಯಾವ ರೀತಿ ಜಾರಿಗೆ ಬಂತು ಅದನ್ನು ಪರಿಶೀಲನೆ ಮಾಡುವುದಕ್ಕೆ ಹಿಂದೆ ಟಾಂಟೆ ಹಾಯ ಕೋರ್ಟಿನ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿದರು. ಆ ಸಮಿತಿಯವರು ವಿಚಾರಣೆ ನಡೆಸಿದಾಗ ಅನೇಕ ಮಂದಿ ಅಲ್ಲಿಗೆ ಹೋಗಿ ಸಮಿತಿಯವರ ಮುಂದೆ ಪಾನ ನಿಷೇಧ ಇರಲೇಬೇಕು. ಇದನ್ನು ರದ್ದು ಮಾಡಬಾರದು ಎಂದು ಹೇಳಿದರು. ಪಾನ ನಿರೋಧ ಇರಲೇಬೇಕು ಎಂದು ವಾದಿಸಿದ ಒಂದು ತಂಡ, ನಿಜವಾಗಿ ಇದರಿಂದ ಲಾಭ ಪಡೆಯುತ್ತಿದ್ದಂಥವರು. ಪಾನ ನಿರೋಧ, ಇದ್ದರೆ, ಇಲ್ಲಿಸಿಟ್ ಲಿಕ್ಕರ್, ಕಳ್ಳಭಟ್ಟಿ ಸಾರಾಯಿ ಮಾಡಿ ಊರಿನವರಿಗೆ ವಿಷಪೂರಿತ ಮದ್ಯ ಕುಡಿಸಿ, ತಯಾರು ಮಾಡುವವರು, ಮಾರಾಟ ಮಾಡುವವರು ಮತ್ತು ಸಾಗಿಸುವವರು ಅನುಕೂಲಮಾಡಿಕೊಳ್ಳುತ್ತಿದ್ದರು. ಇಂಥ ಒಂದು ವಾತಾವರಣ ಸೈನ್ಯದ ಕಾಲದಲ್ಲಿ ನಿರ್ಮಾಣವಾಗಿತ್ತು. ಆದ್ದರಿಂದ ಸೈನ್ಯದ ಮುಖಾಂತರ ಪಾನನಿರೋಧ ಇರಲೇಬೇಕು ಎಂದು ಹೇಳುತ್ತಿದ್ದರು. ಅವರ ದೃಷ್ಟಿಯಿಂದ ಪಾನನಿರೋಧ ಇರಬೇಕು ಅಥವಾ ಹೋಗಬೇಕು ಎಂದು ನಾನು ಹೇಳುತ್ತಾ ಇಲ್ಲ. ಪಾನನಿರೋಧ ಇರಬೇಕು ಎಂದು ಹೇಳುವವರು ಇಂಥ ಒಂದು ತಂಡದ ಮುಖಾಂತರ ಇದರ ವಿರುದ್ಧವಾಗ ಬಹಳ ದೊಡ್ಡ ಪ್ರಚಾರ ಮತ್ತು ಹೋರಾಟವನ್ನು ನಡೆಸಲಿಕ್ಕೆ ಪ್ರಯತ್ನ ಮಾಡಿದ್ದರು. ಆವೊತ್ತು ಪಾನನಿರೋಧ ಇದ್ದ ಕಾಲದ ಹಳ್ಳಿಗಳಲ್ಲಿ ಹಾಗೂ ಸಣ್ಣ ಸಣ್ಣ ಪಟ್ಟಣಗಳಲ್ಲಿ ಯಾವ ರೀತಿ ನಡೆಯುತ್ತಿತ್ತು ಎನ್ನುವುದು ಸ್ವಪ್ನದಲ್ಲಿ ನೈಟ್ ಮೇರ್ ಕಂಡ ಹಾಗೆ ಇತ್ತು. ಮಂಗಳೂರು ಕಡೆ ತಂತಿ ಕಂಬಕ್ಕೆ ಬಡಿದರೆ, ಸಾಕು ಒಳಗಿನಿಂದ ಬಾಟಲಿ ಹೊರಗೆ ಬರುತ್ತಿತ್ತು ಎಂದು ಹೇಳುತ್ತಿದ್ದರು. ಸಣ್ಣ ಸಣ್ಣ ಬೀದಿಯಲ್ಲಿ ತೂತು ಬಿದ್ದಿದ್ದರೆ ಅದರ ಒಳಗೆ ಬಾಟಲಿ ಅಡಗಿಸಿ ಇಡುತ್ತಿದ್ದರು. ಕುಡುಕರು ಬರುವವರೆಗೆ ಕಾದಿದ್ದು ಅನಂತರ ವ್ಯಾಪಾರ ಮಾಡುತ್ತಿದ್ದರು, ಈ ರೀತಿ ಅನೇಕ ತರಹ ಹಿಂದೆ ನಡೆಯುತ್ತಿತ್ತು. ಕೊಳ್ಳೆ ಹೊಡೆಯುವ ಕುಡುಕರ ಪ್ರವೃತ್ತಿ ಹೆಚ್ಚಾಗಿತ್ತು. ಇದನ್ನು ನಾವು ರಸ್ತೆಗಳಲ್ಲಿ ನೋಡಿದ್ದೇವೆ ಮತ್ತು ಅನುಭವಿಸಿದ್ದೇವೆ. ಆದ್ದರಿಂದ ಈಗ ಪಾನ ನಿರೋಧವನ್ನು ತಂದು ಮದ್ಯಪಾನವನ್ನು ತೊಡೆದು ಹಾಕುವುದಕ್ಕೆ ಖಂಡಿತವಾಗಿ ಆಗುವುದಿಲ್ಲ. ಒಂದು ರೀತಿಯ ಪ್ರಚೋದನೆ ಕೊಟ್ಟ ಹಾಗೆ, ಪ್ರೋತ್ಸಾಹ ಕೊಟ್ಟ ಹಾಗೆ ಆಗಿದೆ ಎಂದು ಅನುಭವದಿಂದ ತಿಳಿದುಕೊಂಡಿದ್ದೇನೆ. ಒಂದೇ ಒಂದು ಲಾಭ ಎಂದರೆ, ಸರ್ಕಾರಕ್ಕೆ ಬರುವಂಥ ವರಮಾನ ಹೋಗಿ ಕೆಲವು ಮಂದಿ ಕಳ್ಳಬಟ್ಟಿ ಮಾಡುವವರಿಗೆ, ಆ ಈ ಕಡೆ ತೆಗೆದುಕೊಂಡು ಹೋಗುವವರಿಗೆ ಕಳ್ಳಬಟ್ಟಿ ಹಿಡಿಯುವ ಪೋಲೀಸರಿಗೆ ಒಂದೊಂದು ಪೋಲೀಸ್ ಸ್ಟೇಷನ್‌ನಲ್ಲಿ ಮಾಮೂಲು ನಿಗಧಿಯಾಗಿದೆ ಮಾಮೂಲು ಸಲ್ಲುತ್ತಿದೆಯೇ ಹೊರತು ಸರ್ಕಾರಕ್ಕೆ ಬರುವ ವರಮಾನ ಹೋಯಿತು, ಪೊಲೀಸ್ ಸಿಬ್ಬಂದಿಗೆ ವರಮಾನ ಆಯಿತು. ದುಷ್ಟರ ಹಾವಳಿ ರಾಜ್ಯದ ಹೆಚ್ಚಾಯಿತು, ಮದ್ಯಪಾನ ಮಾಡಿದವರು ರಸ್ತೆಯಲ್ಲಿ ಬಂದಾಗ ಜನಗಳು ಅಡ್ಡಾಡುವುದು ಕಷ್ಟವಾಗಿದೆ. ಇಂಥ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಒಂದರಲ್ಲಿ ಅಲ್ಲ ಬೇರೆ ರಾಜ್ಯಗಳಲ್ಲೂ ಕೂಡ ಬಂತು. ಆದ್ದರಿಂದ ಮದ್ಯಪಾನ ನಿರೋಧ ಶಾಸನ ಜಾರಿಗೆ ತಂದದ್ದರಿಂದ ಸರ್ಕಾರಕ್ಕೆ ಒಂದು ಕಡೆ ನಷ್ಟ, ಇನ್ನೊಂದು ಕಡೆ ದುಷ್ಟ ಶಕ್ತಿಗಳ ಪ್ರೋತ್ಸಾಹ, ಮತ್ತೊಂದು ಕಡೆ ಸಮಾಜಕ್ಕೆ ಇಷ್ಟು ಹಾನಿ. ಅನೇಕ ಮಂದಿ ಇದನ್ನು ಕಲಿತು ಜೀವ ಕಳೆದುಕೊಂಡಿದ್ದಾರೆ. ಒಳ್ಳೆಯ ವೈದ್ಯಕೀಯ

(ಶ್ರೀ ಬಿ. ವಿ. ಕಕ್ಕಿಲಾಯ)

ತಜ್ಞರಾದಂಥ ಡಾಕ್ಟರುಗಳ ಅಭಿಪ್ರಾಯ ಏನೆಂದರೆ, ಇದರಲ್ಲಿ ಆಲ್ಕೋಹಾಲ್‌ನ ವಿಷ ದ್ರವ್ಯದ ಪ್ರಮಾಣ ಮಿತಿಗಿಂತಲೂ ಹೆಚ್ಚಾಗಿರುವುದರಿಂದ ಮೆದುಳು ಕೆಟ್ಟುಹೋಗುತ್ತದೆ. ನರ್ವಸ್ ಸಿಸ್ಟಂ ಬ್ರೇಕ್ ಡೌನ್ ಆಗುತ್ತದೆ. ಹೀಗಾಗಿ ಅವರು ಜೀವಂತ ಉಳಿದರೂ ಕೂಡ ವಿಚಾರಶಕ್ತಿ ಇರುವುದಿಲ್ಲ. ಇದನ್ನು ೩—೪ ವರ್ಷ ಪಾನ ಮಾಡಿದರೆ ನಾಲ್ಕು ವರ್ಷದಲ್ಲಿ ಜೀವಂತವಾಗಿದ್ದರೂ ಜೀವಚ್ಛವದಂತೆ ಇರುತ್ತಾರೆ ಎನ್ನುವ ಅಭಿಪ್ರಾಯವನ್ನು ಅನೇಕ ತಜ್ಞರು ಕೊಟ್ಟಿದ್ದಾರೆ.

ಮದ್ಯಪಾನವನ್ನು ತೊಡೆದು ಹಾಕಬೇಕು ಎಂದು ಹೇಳುತಿದ್ದಾರೆ. ಆದರೆ ವಿಧೇಯಕದಿಂದ ಅದನ್ನು ಮಾಡುವುದಕ್ಕೆ ಆಗುವುದಿಲ್ಲವೆಂದು ನನ್ನ ಖಚಿತವಾದ ಅಭಿಪ್ರಾಯ. ಯೂರೋಪ್ ದೇಶಗಳಲ್ಲಿ ಆಲ್ಕೊಹಾಲು ಕುಡಿಯುವುದರಿಂದ ಅವರ ಸ್ಥಾನ ನಮಗಿಂತ ಕಡಿಮೆ ಇಲ್ಲ. ಅಲ್ಲಿ ಪಾನವಿರೋಧದ ಕಾನೂನು ಇಲ್ಲ. ಅಲ್ಲಿ ಎಲ್ಲರೂ ಕುಡುಕರು, ಎಲ್ಲರೂ ಕುಡಿದು ಬೀದಿಯಲ್ಲಿ ಬೀಳುತ್ತಿದ್ದಾರೆ, ಅವರ ಸಮಾಜ ಕೆಟ್ಟುಹೋಗಿದೆ ಎಂದು ಹೇಳುವುದಕ್ಕೆ ಬರುವುದಿಲ್ಲ. ಅವರು ಯಾವರೀತಿಯಿಂದ ಪಾನ ಮಾಡುವುದನ್ನು ಹಿಡಿತದಲ್ಲಿ ಇಟ್ಟುಕೊಳ್ಳುತ್ತಾರೆ ಎಂದು ಸರ್ಕಾರದವರು ಪರಿಶೀಲನೆಮಾಡಬೇಕು ಮತ್ತು ಗಮನಿಸಬೇಕು. ಒಂದೊಂದು ದೇಶದಲ್ಲಿ ಒಂದೊಂದು ರೀತಿಯಲ್ಲಿ ದುಶ್ಚಟಗಳನ್ನು ಹತೋಟಿಯಲ್ಲಿ ಇಟ್ಟಿದ್ದಾರೆ. ದುಶ್ಚಟಗಳನ್ನು ತೆಗೆದು ಹಾಕಲು ಕ್ರಮ ಕೈಕೊಳ್ಳುತ್ತಾರೆ. ಅದಕ್ಕೆ ವಿದ್ಯಾ ಸಂಸ್ಥೆಗಳು ಇವೆ, ಪ್ರಚಾರಾಂಗಗಳು ಇವೆ ಅವುಗಳ ಮೂಲಕ ದುಶ್ಚಟದ ವಿರುದ್ಧವಾಗಿ ಸಮಾಜದಲ್ಲಿ ತೀವ್ರವಾದ ಪ್ರಚಾರ ಕೈಗೊಳ್ಳುತ್ತಾರೆ ಎನ್ನುವುದನ್ನು ನೋಡಬೇಕು. ನಾನು ಸ್ವಲ್ಪ ಸಮಯದ ಹಿಂದೆ ಸೋವಿಯಟ್ ಯೂನಿಯನ್, ಬಲ್ಗೇರಿಯಾ ಪೋಲೆಂಡ್ ಈ ದೇಶಗಳಿಗೆ ಹೋಗಿದ್ದೆ. ಆದರೆ ಅಮೇರಿಕಾಕ್ಕೆ ಹೋಗಲಿಲ್ಲ. ಅಲ್ಲಿನ ಸ್ಥಿತಿ ಕಾಣುವ ಸುಯೋಗ ಇಲ್ಲಿಲ್ಲ. ಅಲ್ಲಿ ಹೋದಾಗ ನಾನು ಕಂಡದರಲ್ಲಿ ಒಂದೇ ಒಂದು ಉದಾಹರಣೆಯನ್ನು ಹೇಳುತ್ತೇನೆ. ಅಲ್ಲಿ ಡ್ರೈವರ್ ಬೆಳಿಗ್ಗೆ ೭ ಗಂಟೆಗೆ ಬಂದು ಕಾರಿನಲ್ಲಿ ಕೂತುಕೊಂಡ ಎಂದರೆ ಸಾಯಂಕಾಲ ರಾತ್ರಿ ಎಷ್ಟೇ ಹೊತ್ತು ಆಗಲಿ ಪ್ಯಾಸಂಜರ್ ಮನೆಗೆ ಬಿಟ್ಟು ಅಥವಾ ಅವರ ಸ್ಥಳಕ್ಕೆ ಬಿಟ್ಟು ತನ್ನ ಮನೆಗೆ ಹೋದಮೇಲೆ ಸಂಪೂರ್ಣವಾಗಿ ಎಷ್ಟೇ ಕುಡಿದರೂ ಕುಡಿಯಬಹುದು. ಕೆಲಸದ ಮೇಲೆ ಇರುವಾಗ ಪಾಯಿಂಟ್ ಒಂದು ಪರ್ಸೆಂಟ್ ಆಲ್ಕೋಹಾಲ್ ಕಂಡರೂ ಕೂಡ ಅವರಿಗೆ ತೀವ್ರವಾದ ದಂಡವನ್ನು ವಿಧಿಸುವ ಕಾನೂನ ಇದೆ. ಕಡ್ಡಾಯವಾಗಿ ಎಲ್ಲರೂ ಕೂಡ ಅದನ್ನು ಜಾರಿಗೆತರುತ್ತಾರೆ. ಹೀಗೆ ಅನೇಕ ನೌಕರರು, ಅಧ್ಯಾಪಕರು, ದುಡಿಯುವವರು ಎಲ್ಲರಿಗೂ ಕಾನೂನು ಅನ್ವಯಿಸುತ್ತದೆ. ದುಡಿಯುವ ಸಮಯದಲ್ಲಿ ಆಲ್ಕೋಹಾಲ್ ಕಂಟೆಂಟ್ ಇರಬಾರದು, ಕುಡಿದು ಕೆಲಸಕ್ಕೆ ಹೋಗಬಾರದು ಎಂದು ಕಡ್ಡಾಯವಾದ ನಿಯಮವನ್ನು ಜಾರಿಗೆ ತಂದಿರುತ್ತಾರೆ. ಕುಡಿದು ಮನೆಗೆ ಹೋಗುವಾಗ ಮಿತಿಮೀರಿ ಕುಡಿದ ಎಂದರೆ ಅವನ ಹೆಂಡತಿ ಮಕ್ಕಳು, ತಂದೆತಾಯಿ ಅವನ ಸಂಸಾರದವರು ಅವನನ್ನು ಪೋಲೀಸರ ಕಸ್ಟಡಿಗೆ ಕೊಡುತ್ತಾರೆ. ಅಂತಹ ಕುಡುಕರನ್ನು ತೆಗೆದುಕೊಂಡುಹೋಗಿ ೨೪ ಗಂಟೆಗಳ ಕಾಲ ಏರ್‌ಕಂಡಿಷನ್ ಮನೆಯಲ್ಲಿ ಇಡುತ್ತಾರೆ ಅದು ಇಳಿದಮೇಲೆ ಬಿಡುತ್ತಾರೆ. ೩ ಸಲ ಇದೇರೀತಿ ವರ್ತನೆ ಮಾಡಿದರೆ ಆಮೇಲೆ ಸಮಾಜದಲ್ಲಿ ಅವನಿಗೆ ಸ್ಥಾನವಿಲ್ಲ ಕೆಲಸ ಕೂಡ ಕಳೆದುಕೊಳ್ಳುತ್ತಾನೆ. ಇಂಥ ನಿಯಮವನ್ನು ಆ ದೇಶದಲ್ಲಿ ತಂದಿದ್ದಾರೆ. ಆ ರೀತಿ ನಮ್ಮ ಸರ್ಕಾರದವರು ಮಾಡಬೇಕು ಎಂದು ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇಲ್ಲಿ ಕೆಲವು ಏರ್ ಕಂಡಿಷನ್ ಆಫೀಸುಗಳು ದೊಡ್ಡ ದೊಡ್ಡ ಅಧಿಕಾರಿಗಳಿಗೆ ಇವೆ. ಆಫೀಸರ ಪಕ್ಕದ ಆಂಟಿ ರೂಮ್‌ನಲ್ಲಿ ಬಾಟಲ್‌ಗಳು ಪಲ್ಲಂಗ ಎಲ್ಲಾ ಸಿದ್ಧಪಡಿಸಿರುತ್ತಾರೆ. ಅಂಥ ಅಧಿಕಾರಿಗಳನ್ನು ಮನೆಗೆ ಕಳಿಸಿ ಎಂದು ಕೇಳುತ್ತೇನೆ. ಅಂಥ ಅಧಿಕಾರಿಗಳನ್ನು ಮನೆಗೆ ಕಳುಹಿಸಿದರೆ ಖಂಡಿತವಾಗಿ ಈ ಪಾನನಿರೋಧದ ಬಗ್ಗೆ ಜನತೆಯಲ್ಲಿ ಒಳ್ಳೆಯ ಅಭಿಪ್ರಾಯ ಬಂದು ದುಶ್ಚಟ ಹೋಗುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೆ. ಈ ತತ್ವವನ್ನು ಸಮಾಜದ ನಾಯಕರು ಮಂತ್ರಿಗಳು ಎಂದು ಹೇಳುವವರು ಆಡಳಿತ ಸೂತ್ರವನ್ನು ವಹಿಸಿಕೊಂಡಿರತಕ್ಕಂಥವರು ಒಳ್ಳೆಯ ಉದಾಹರಣೆಯನ್ನು ನಮ್ಮ ಜನತೆಗೆ ಕೊಡಲಿಕ್ಕೆ ಸಹಾಯವಾಗುತ್ತದೆ. ಹಿಂದೆ ಪಾನನಿರೋಧ ಶಾಸನ ಇದ್ದಾಗ ಬೆಂಗಳೂರು ನಗರದ ಮಟ್ಟಿಗೆ ಇರಲಿಲ್ಲ. ಬೇರೆ ಎಲ್ಲಾ ಕಡೆ ಇತ್ತು. ತಮ್ಮಲ್ಲಿ ಕೇಳಿಕೊಳ್ಳುತ್ತೇನೆ ಪಾನನಿರೋಧ ತರುವುದಕ್ಕೆ ಅನುಕೂಲ ಇಲ್ಲ ಯಾತಕ್ಕೆಂದರೆ ಸರ್ಕಾರಕ್ಕೆ ೨೧. ೩೦ ಕೋಟಿ ರೂಪಾಯಿ ಇದರಿಂದ ಆದಾಯ ಬರುತ್ತದೆ ಇನ್ನೂ ಜಾಸ್ತಿ ಆಗಬಹುದು, ಪಾನನಿರೋಧ ಜಾರಿಗೆತಂದು ಸರ್ಕಾರಕ್ಕೆ ಬರತಕ್ಕ ವರಮಾನವನ್ನು ವ್ಯರ್ಥಮಾಡಬೇಡಿ ಎಂದು ಹೇಳುವುದು ನನ್ನ ವೈಯಕ್ತಿಕ ಅಭಿಪ್ರಾಯವಲ್ಲ. ತಮ್ಮಲ್ಲಿ ಆದರೂ ಕೂಡ ಒಂದು ವಿನಂತಿಮಾಡಿಕೊಳ್ಳುತ್ತೇನೆ ೬ ತಿಂಗಳ ಅಥವಾ ಒಂದು ವರ್ಷದ ಮಟ್ಟಿಗೆ ಬೆಂಗಳೂರು ನಗರದಲ್ಲಿ ಬಹಳ ಕಡ್ಡಾಯವಾಗಿ ಪ್ರೊಹಿಬಿಷನ್ ಜಾರಿಮಾಡಿ. ಬೆಂಗಳೂರು ನಗರದಲ್ಲಿ ಪ್ರೊಹಿಬಿಷನ್ ಜಾರಿಮಾಡುವುದು ಅಷ್ಟೇ ಅಲ್ಲ ಉನ್ನತ.

ಅಧಿಕಾರಿಗಳು, ಮಂತ್ರಿಗಳು ನನ್ನನ್ನೂ ಸೇರಿಸಿಕೊಂಡು ಎಂ.ಎಲ್.ಎ. ಯಾರೇ ಆಗಲಿ ಇವರು ಎಲ್ಲಿ ಪಾನ ನಿರೋಧ ಶಾಸನ ಜಾರಿಗೆ ತಂದಮೇಲೆ ಅದನ್ನು ಆತ ಮುರಿದಿದ್ದಾನೆ ಎಂದು ತಮ್ಮ ಗಮನಕ್ಕೆ ಬಂದರೆ ಬೆಂಗಳೂರು ನಗರದಿಂದ ಅವರನ್ನು ಬ್ಯಾನಿಷ್ ಮಾಡಿ ಹೊರಕ್ಕೆ ಹಾಕಿ ೫-೬ ತಿಂಗಳು ಬೇರೆ ಕಡೆ ಇರಲಿ. ಕುಡಿಯುವುದರ ದುಶ್ಚಟದ ವಿರುದ್ಧವಾಗಿ ತೀವ್ರ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವುದು ಜಾರಿಗೆ ಬರಲಿ. ಇನ್ನೊಂದು ಸೂಚನೆ ಯಾರು ಯಾರು ದೊಡ್ಡ ದೊಡ್ಡ ಅಧಿಕಾರಿಗಳು ಇದ್ದಾರೆ, ಕುಡುಕತನಕ್ಕೆ ಬೀಳುತ್ತಾರೆ ಅಂಥವರ ಸಂಬಳವನ್ನು ಯಾವರೀತಿ ಪ್ರೈಮರಿ ಸ್ಕೂಲ್ ಟೀಚರ್ಸ್ ಅವರ ಸಂಬಳವನ್ನು ಚೆಕ್ ಅಥವಾ ಮನಿಆರ್ಡರ್ ಮೂಲಕ ನೇರವಾಗಿ ಅವರಿಗೆ ಕಳುಹಿಸುತ್ತಾರೆ ಅದೇರೀತಿ ಅವರ ಚೆಕ್ಕನ್ನು ನೇರವಾಗಿ ಅವರ ಸಂಸಾರದವರಿಗೆ ಕಳುಹಿಸಿ. ಅವರ ಸಂಬಳ ಅವರ ಕೈಯ್ಯಲ್ಲಿ ಕೊಡಬೇಡಿ. ಕುಡಿದು ಮನೆಗೆ ಬಂದರೆ ಅವರನ್ನು ಮನೆಯ ಹೊರಗೆ ಮಲಗಿಸಿ, ನಿಮ್ಮ ಕಡೆ ನಾವು ಇದ್ದೇವೆ ಎಂದು ಅವರ ಸಂಸಾರದವರಿಗೆ ಹೇಳಿ. ಈ ರೀತಿ ಸಮಾಜದಲ್ಲಿ ಕುಡುಕರಿಗೆ ಒಳ್ಳೆಯ ಭಾವನೆ ಹುಟ್ಟುವ ರೀತಿಯಲ್ಲಿ ಕಾರ್ಯ ಕ್ರಮಗಳನ್ನು ಹಾಕಿ ಕೊಂಡು ಕೆಲವು ವರ್ಷಗಳು ಸಾಧನೆಮಾಡಿದರೆ ಇದನ್ನು ನಿಲ್ಲಿಸಬಹುದು. ಈ ರೀತಿಯಿಂದ ಮಾಡಬೇಕು ಬರೀ ಪಾನನಿರೋಧ ಜಾರಿಗೆ ತಂದರೆ ಯಾವರೀತಿಯಿಂದಲೂ ಪ್ರಯೋಜನವಾಗುವುದಿಲ್ಲ ಎಂದು ಹೇಳಿ ಈ ನಿರ್ಣಯವನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತೇನೆ.

‡ ಶ್ರೀಮತಿ ರೇಣುಕಾ ರಾಜೇಂದ್ರನ್ (ಬಾಗೇಪಲ್ಲಿ).—ಸನ್ಮಾನ್ಯ ಉಪಾಧ್ಯಕ್ಷರೇ "ಸಮಾಜವಾದದ ಮೂಲಕ ಗಾಂಧೀ ತತ್ವವನ್ನು ಆಚರಣೆಗೆ ತರುವ ದೃಷ್ಟಿಯಿಂದ ಪಾನನಿರೋಧವನ್ನು ಜಾರಿಗೊಳಿಸುವುದ ರಿಂದಾಗುವ ನಷ್ಟವನ್ನು, ಪರ್ಯಾಯ ವ್ಯವಸ್ಥೆ ಮಾಡಿ ಹೆಚ್ಚಿನ ತೆರಿಗೆಗಳನ್ನು ವಿಧಿಸುವ ಮೂಲಕ ತುಂಬಿಸಿ ರಾಜ್ಯಾದ್ಯಂತ ಸಮಗ್ರ ಪಾನನಿರೋಧವನ್ನು ಜಾರಿಗೊಳಿಸಬೇಕೆಂದು ಈ ಸಭೆಯವರು ಶಿಫಾರಸು ಮಾಡುತ್ತಾರೆ" ಎನ್ನುವ ನಿರ್ಣಯ ನಮ್ಮ ಮುಂದೆ ಇದೆ. ಇದರ ಬಗ್ಗೆ ನನ್ನ ವಿರೋಧವನ್ನು ವ್ಯಕ್ತ ಪಡಿಸುತ್ತಾ ಕೆಲವು ವಿಷಯಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ರಾಜ್ಯದ ಒಟ್ಟು ಆದಾಯ ೪೦೦ ಕೋಟಿ ರೂಪಾಯಿ. ಈ ೪೦೦ ಕೋಟಿ ರೂಪಾಯಿನಲ್ಲಿ ೪೦ ಕೋಟಿ ರೂಪಾಯಿಗಳು ನಮ್ಮ ಎಕ್ಸೈಜ್ ಡಿಪಾರ್ಟ್‌ಮೆಂಟ್‌ನಿಂದ ಬರುತ್ತಿದೆ. ಪಾನನಿರೋಧವನ್ನು ಜಾರಿಗೆ ತಂದದ್ದೇ ಆದರೆ ೪೦ ಕೋಟಿ ರೂಪಾಯಿ ನಮಗೆ ನಷ್ಟವಾಗುತ್ತದೆ. ಆ ನಷ್ಟವನ್ನು ತುಂಬಿಸುವುದಕ್ಕೋಸ್ಕರ ಕುಡಿಯುವವರು ಮಾತ್ರ ಕೊಡುತ್ತಾ ಇರತಕ್ಕ ತೆರಿಗೆಯನ್ನು ಕುಡಿಯದೆ ಇರುವವರ ಮೇಲೆ ಹೊರಿಸಿದಂತಾಗುತ್ತದೆ. ಪ್ರತಿಯೊಬ್ಬ ಪ್ರಜೆಯೂ ಎಂದರೆ ತಲೆಗೆ ೧೪ ರೂಪಾಯಿ ಪ್ರಕಾರ ತೆರಿಗೆಯನ್ನು ಕೊಡಬೇಕಾಗಿ ಬರುತ್ತದೆ ಇದು ದೊಡ್ಡ ಹೊರೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಮಾಜವಾದ ಥ್ರೂ ಗಾಂಧೀಸಮ್ ಎಂದು ಇವರು ಹೇಳಿದ್ದಾರೆ. ಗಾಂಧಿಸಮ್ ಏನು ಹೇಳುತ್ತದೆ, ಕುಡಿಯುವುದು ಬೇಡ ಎಂದು ಹೇಳುತ್ತದೆ. ಅದು ಕೆಟ್ಟದು ಎಂದು ಹೇಳುತ್ತದೆ. ಆದರೆ ಕುಡಿಯುವುದು ತಪ್ಪು ಎಂದು ಕಾನೂನು ಬದ್ಧವಾಗಿ ಹೇಳುವುದು ಬೇಡ ಎಂದು ನಾನು ಸೂಚಿಸುತ್ತೇನೆ. ಇದನ್ನು ಜಾರಿಗೆ ತಂದದ್ದೆ ಆದರೆ ನಿರಪರಾಧಿಗಳು ಅದಂಥ, ಒಂದು ಮಗು, ನಾಳೆ ನಾಳಿದ್ದು ಸಾಯುವ ಸ್ಥಿತಿಯಲ್ಲಿರುವ ಮುದುಕರಿಗೂ ಸಹ ತೆರಿಗೆ ಬೀಳುತ್ತದೆ. ಇದನ್ನು ಸಮಾಜವಾದ ಎಂದು ಸದಸ್ಯರು ಹೇಳಿದ್ದಾರೆ. ಈ ವಿಷಯದ ಬಗ್ಗೆ ನಾವು ಕೂಲಂಕಷವಾಗಿ ಸಮಾಲೋಚನೆ ಮಾಡಬೇಕು. ಸಮಾಜವಾದಕ್ಕೂ ಪಾನನಿರೋಧಕ್ಕೂ ಸಂಬಂಧ ಕಲ್ಪಿಸುವುದು ಬೇಡ, ಹಾಗೆಯೇ ಮಹಾತ್ಮ ಗಾಂಧಿಯವರ ಹೆಸರನ್ನು ಇಲ್ಲಿ ಉಪಯೋಗಿಸುವುದು ಬೇಡ, ಮತ್ತು ಈಗ ಉಪಯೋಗಿಸುವುದು ಅಷ್ಟು ಚೆನ್ನಾಗಿ ಕಾಣುವುದಿಲ್ಲ ಎಂದು ನನಗನಿಸುತ್ತದೆ.

11-00 A.M.

ಇಲ್ಲಿ ೧೮ ಜನರು ಇಂತಹ ಒಂದು ನಿರ್ಣಯವನ್ನು ಕಳುಹಿಸಿದ್ದಾರೆ. ಹಾಗೆ ಕಳುಹಿಸಿರುವವರು ತಮ್ಮ ದಿನ ನಿತ್ಯ ಜೀವನದಲ್ಲಿ ಇದನ್ನು ಎಷ್ಟುಮಟ್ಟಿಗೆ ಅನುಸರಿಸಿಕೊಂಡು ಬರುತ್ತಿದ್ದಾರೆ ಎಂದು ನಾನು ಅವರನ್ನು ಕೇಳಬೇಕಾಗಿದೆ. ಎಲ್ಲರೂ ಪ್ರೀಚ್ ಮಾಡಬಹುದು. ಆದರೆ ಪ್ರಾಕ್ಟೀಸ್‌ನಲ್ಲಿ ಇದನ್ನು ಹೇಗೆ ಆಚರಣೆಗೆ ತರುತ್ತಿದ್ದಾರೆ ಎಂದು ನಾನು ಕೇಳುತ್ತೇನೆ. ಅವರ ಜೀವನದಲ್ಲಿ ಇದನ್ನು ಯಾವ ರೀತಿ ಅಳವಡಿಸಿಕೊಂಡು ಹೋಗುತ್ತಿದ್ದಾರೆ ಎನ್ನುವುದನ್ನು ತಿಳಿಯಬೇಕಾಗಿದೆ. ಕಾನೂನಿನಿಂದ ಮನುಷ್ಯನನ್ನು ಸನ್ಯಾಸಿಯನ್ನಾಗಿ ಮಾಡಲು ಸಾಧ್ಯವಿಲ್ಲ. ಕಾನೂನು ಮಾಡುವಾಗ ಆ ವಿಷಯದ ಬಗ್ಗೆ ಮೊದಲು ನಮಗೆ ಆತ್ಮ ವಿಶ್ವಾಸ ಇರಬೇಕು. ಈ ವಿಷಯದಲ್ಲಿ ನನಗೆ ಆತ್ಮ ವಿಶ್ವಾಸವಿಲ್ಲ. ವೈಯ್ಯಕ್ತಿಕವಾಗಿ ಈ ವಿಚಾರದಲ್ಲಿ ಮೊದಲು ನಂಬಿಕೆ ಇರಬೇಕು. ನಂಬಿಕೆ ಇಲ್ಲದವರು ಇದರ ಬಗ್ಗೆ ಭಾಷಣ ಮಾಡುವುದರಿಂದೇನೂ ಪ್ರಯೋಜನವಿಲ್ಲ. ಬಡವರು ಮಾತ್ರ ಕುಡಿಯುತ್ತಾರೆ ಎಂಬುದು ಸುಳ್ಳು. ಹೆಂಡಕ್ಕೂ ಹರಿಜನರಿಗೂ ಸಂಬಂಧ ಕಲ್ಪಿಸುವುದು ತಪ್ಪು. ಕುಡಿತ ಜಾತಿ ಮತ್ತು ಅಂತಸ್ತಿಗೆ ಸಂಬಂಧಪಟ್ಟದ್ದು ಅಲ್ಲ, ಎಲ್ಲ ಜಾತಿಯವರೂ ಎಲ್ಲ ವರ್ಗದವರೂ ಕುಡಿಯುತ್ತಾರೆ. ಇಷ್ಟವಿರುವವರೆಲ್ಲಾ ಕುಡಿಯುತ್ತಾರೆ. ಹರಿಜನರಿಗೇ

(ಶ್ರೀಮತಿ ರೇಣುಕಾ ರಾಜೇಂದ್ರನ್)

ಇದರಲ್ಲಿ ಸಂಬಂಧ ಕಲ್ಪಿಸುವುದು ನನಗಂತೂ ಅರ್ಥವಾಗುವುದಿಲ್ಲ. ಕೂಲಿ ಮಾಡುವ ಜನರಿಗೆ ಕುಡಿತ ಬೇಕೇ ಬೇಕು. ಅವರಿಗೆ ಇದರ ಅವಶ್ಯಕತೆ ಇದೆ. ಅವರು ತಮ್ಮ ಆಯಾಸ ಪರಿಹರಿಸಿಕೊಳ್ಳಲು ಒಂದು ಮಿತಿಯಲ್ಲಿ ಕುಡಿಯುತ್ತಾರೆ. ಕೂಲಿ ಜನರನ್ನು ನಾನು ಕೇಳಿದಾಗ ಅವರೂ ಕೂಡ ಇದೇ ಅಭಿಪ್ರಾಯ ಹೇಳಿದರು. ಬೆಳಗಿಂದ ಸಾಯಂಕಾಲದವರೆಗೆ ಕೆಲಸ ಮಾಡುತ್ತ ಬಂದಾಗ ಸ್ವಲ್ಪಮಟ್ಟಿನ ಕುಡಿತ ಮಾಡು ವುದರಿಂದ ಅವರ ಆಯಾಸ ಪರಿಹಾರವಾಗುತ್ತದೆ ಎಂದು ನಂಬಿದ್ದಾರೆ. ಕುಡಿಯುವವರಿಗೆ ಸಮಾಜದಲ್ಲಿ ಗೌರವ ಇಲ್ಲ ಎಂಬುದು ಸುಳ್ಳು, ಅನೇಕ ರಾಜಕಾರಣಿಗಳೂ, ಹಿರಿಯ ಅಧಿಕಾರಿಗಳೂ ಹಾಗೂ ಸಂಭಾವಿತರೂ ಕುಡಿಯುತ್ತಾರೆ. ಕುಡಿಯುವುದು ಕೆಟ್ಟದ್ದು ಎಂದು ಬೇಕಾದರೆ ಪ್ರಚಾರ ಮಾಡೋಣ; ಆದರೆ ಕುಡಿಯುವುದು ತಪ್ಪು ಎಂದು ಕಾನೂನು ಮಾಡಿದರೆ ಅದು ಅಪ್ರಯೋಜಕವಾಗುತ್ತದೆ.

ಕೊನೆಯದಾಗಿ ಒಂದು ಮಾತು, ನಾನು ಹುಟ್ಟು ಕಾಂಗ್ರೆಸ್ಸಿನವಳು. ಕಾಂಗ್ರೆಸ್ ಸದಸ್ಯರಿಗೆ ಪಾನನಿರೋಧದಲ್ಲಿ ನಂಬಿಕೆ ಇರಬೇಕು ಎನ್ನುವ ಕಡ್ಡಾಯ ಈಗ ಇಲ್ಲ. ಆದ್ದರಿಂದ ನನ್ನ ನಿಲುವು ಪಕ್ಷದ ಅಭಿಪ್ರಾಯಕ್ಕೆ ವಿರೋಧವಾಗಿಲ್ಲ. ಒಟ್ಟಿನಲ್ಲಿ ನಾನು ಈ ನಿರ್ಣಯವನ್ನು ಸಂಪೂರ್ಣವಾಗಿ ವಿರೋಧ ಮಾಡುತ್ತೇನೆ ಮತ್ತು ಇಷ್ಟು ಮಾತನಾಡಲು ಅವಕಾಶ ಕೊಟ್ಟದ್ದಕೆ ಅಧ್ಯಕ್ಷರನ್ನು ವಂದಿಸಿ ನನ್ನ ಮಾತು ಗಳನ್ನು ಮುಗಿಸುತ್ತೇನೆ.

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಮಾನ್ಯ ಅಧ್ಯಕ್ಷರೇ, ನಮ್ಮ ಮಿತ್ರರಾದ ಶ್ರೀಮಾನ್ ಜಯಪ್ರಕಾಶನಾರಾಯಣರವರು ಪಾನನಿರೋಧವನ್ನು ಕಡ್ಡಾಯವಾಗಿ ಜಾರಿಗೆ ತರಬೇಕು ಎಂದು ಇಲ್ಲಿ ಒಂದು ನಿರ್ಣಯವನ್ನು ತಂದಿದ್ದಾರೆ. ಇವರ ಜೊತೆಗೆ ಇನ್ನೂ ೧೮ ಜನರೂ ಇದನ್ನು ಅನುಮೋದನೆ ಮಾಡಿದ್ದಾರೆ. ಈಗತಾನೆ ಮಾನ್ಯ ಸದಸ್ಯರಾದ ಶ್ರೀಮತಿ ರೇಣುಕಾ ರಾಜೇಂದ್ರನ್‌ರವರು ಒಂದು ಮಾತು ಹೇಳಿದರು, ಇಲ್ಲಿ ೧೮ ಜನರು ಒಂದು ನಿರ್ಣಯ ತಂದಿದ್ದಾರಲ್ಲಾ ಇವರಲ್ಲಿ ಎಷ್ಟು ಜನ ಇದನ್ನು ತಮ್ಮ ಜೀವನದಲ್ಲಿ ಆಚರಣೆಗೆ ತಂದಿದ್ದಾರೆ ಎಂದು. ಇದನ್ನು ಎಲ್ಲರೂ ಒಪ್ಪತಕ್ಕದ್ದೇ. ನಾನು ಈ ತತ್ವದಲ್ಲಿ ನಂಬಿಕೆಯುಳ್ಳ ಒಬ್ಬ ಮನುಷ್ಯ. ಇದರಲ್ಲಿ ಯಾವುದೇ ವಿಧವಾದ ಭಿನ್ನಾಭಿಪ್ರಾಯವೂ ಇಲ್ಲ. ಹಿಂದೆ ಮಹಾತ್ಮಾ ಗಾಂಧಿಯವರು ಈ ದೇಶದಲ್ಲಿ ಸ್ವಾತಂತ್ರ್ಯವನ್ನು ತಂದರು, ಎಲ್ಲರೂ ವೇದಿಕೆಗಳ ಮೇಲೆ ಭಾಷಣಗಳನ್ನು ಮಾಡಿದ್ದಾರೆ. ಆದರೆ ಈ ನಿರ್ಣಯದಂತೆ ಕಾರ್ಯರೂಪದಲ್ಲಿ ಪಾನ ನಿರೋಧವನ್ನು ಜಾರಿಗೆ ತರುವುದರಲ್ಲಿ ನಮ್ಮ ಸರಕಾರ ವಿಫಲವಾಗಿದೆ. ಇದರಲ್ಲಿ ಬರೀ ಹರಿಜನರೇ ಕುಡಿಯುತ್ತಾರೆ ಎಂದು ಅವರಿಗೆ ಸಂಪರ್ಕ ಬೆಳೆಸುವುದನ್ನು ನಾನು ಒಪ್ಪುವುದಿಲ್ಲ. ಈಗ ಎಲ್ಲರೂ ಕುಡಿಯುತ್ತಿದ್ದಾರೆ. ಕುಡಿಯುವರೇ ನನ್ನಲ್ಲಿ ಬಂದು ಹೇಳಿದ್ದಾರೆ ಇಂದು ಕುಡಿಯುವರಿಗೆ ರೇಟು ಕೂಡ ಜಾಸ್ತಿಯಾಗುತ್ತಾ ಬರುತ್ತಿದೆ ಎಂದು. ಎಲ್ಲ ಜಾತಿಯವರೂ ಈಗ ಕುಡಿಯಲು ಆರಂಭ ಮಾಡಿದ್ದಾರೆ ಇದಕ್ಕಾಗಿ ನಾನು ತಿಮ್ಮ ಮೂಲಕ ಹೇಳುವುದು ಇದರ ಬಗ್ಗೆ ನಿಷ್ಠೆ ಇಟ್ಟುಕೊಂಡಿರುವವರು ಮತ್ತು ಈ ತತ್ವವನ್ನು ಇಟ್ಟು ಕೊಂಡು ಪಾನ ನಿರೋಧವನ್ನು ಜಾರಿಗೆ ತರದೇ ಇದ್ದರೆ ನಾನು ನನ್ನ ಸ್ಥಾನವನ್ನಾದರೂ ಬಿಡುತ್ತೇನೆ ಎಂದು ಹೇಳಿದ ಆದರ್ಶರಲ್ಲಿ ಹಿಂದೆ ಇಲ್ಲಿ ಮಂತ್ರಿಗಳಾಗಿದ್ದ ಶ್ರೀಮತಿ ಯಶೋಧರಾ ದಾಸಪ್ಪನವರು ಒಬ್ಬರು. ಇವರು ತಮ್ಮ ಅಧಿಕಾರವನ್ನೇ ಇದಕ್ಕಾಗಿ ತ್ಯಾಗಮಾಡಿದರು ಇವರು ನಿಜವಾದ ಗಾಂಧೀ ವಾದಿಗಳು. ಮತ್ತು ಇವರ ಸಂಸಾರದವರು ಎಲ್ಲರೂ ಗಾಂಧೀಯವರ ಜೊತೆಯಲ್ಲಿ ಇದ್ದವರು. ಇಂದ ಸಮಾಜದಲ್ಲಿ ಇಂತಹ ಜನರು ಸಿಗುವುದೇ ಕಷ್ಟ. ತತ್ವವನ್ನು ಒಪ್ಪಿಕೊಂಡರೂ ಅದನ್ನು ಕೃತಿಗೆ ಇಳಿಸಲು ಇದುವರೆಗೂ ಯಾರಿಗೂ ಆಗಲಿಲ್ಲ. ಹಿಂದೆ ಪಾನ ನಿರೋಧದ ತತ್ವಕ್ಕೆ ಅಂಟಿಕೊಂಡವರು ನನಗೆ ತಿಳಿದಂತೆ ಶ್ರೀಮತಿ ಯಶೋಧರಾ ದಾಸಪ್ಪನವರು ಮತ್ತು ಶ್ರೀ ಬಿ. ರಾಚಯ್ಯನವರು. ಆದರೆ ಶ್ರೀಮತಿ ಯಶೋಧರಾ ದಾಸಪ್ಪನವರು ಅಧಿಕಾರವನ್ನು ತ್ಯಾಗ ಮಾಡಿ ಅವರು ಈ ತತ್ವಕ್ಕೆ ತಲೆಬಾಗಿದರು ಆದರೆ ಶ್ರೀಮಾನ್ ಬಿ. ರಾಚಯ್ಯನವರು ಮಾತ್ರ ಅಧಿಕಾರದಲ್ಲೇ ಇದ್ದರು. ಸಾಮಾನ್ಯವಾಗಿ ಇದು ಕುಡಿತದಿಂದ ಆಗತಕ್ಕ ಪರಿಣಾಮವೇನು ಅದನ್ನು ತಪ್ಪಿಸಲು ಸರಿಯಾದ ಪರಿಹಾರಕ್ರಮಗಳೇನು ಮಾಡಬೇಕು ಎನ್ನುವುದನ್ನು ಹುಡುಕುವುದರಲ್ಲಿ ಅನೇಕ ಪ್ರಯತ್ನಗಳು ವಿಫಲವಾಗಿವೆ. ಈ ಪ್ರಸಂಗವನ್ನು ವಿಚಾರ ಮಾಡಿ ನೋಡಿದರೆ ಎಷ್ಟು ಜನ ಈ ತತ್ವಕ್ಕೆ ಅಂಟಿಕೊಂಡು ಇದನ್ನು ಪಾಲಿಸಿಕೊಂಡು ಬರುತ್ತಿದ್ದಾರೆ ಎಂದರೆ ಕಳೆದ ೨೫ ವರ್ಷಗಳಿಂದಲೂ ಬಹುಶಃ ನನಗೆ ಅನಿಸಿರುವುದು ಒಬ್ಬರು ಮಾತ್ರ. ಶ್ರೀಮತಿ ಯಶೋಧರಾ ದಾಸಪ್ಪನವರು ಇದನ್ನು ಕೃತಿಗೆ ಇಳಿಸಲು ಪ್ರಯತ್ನ ಮಾಡುತ್ತಿದ್ದಾರೆ. ಮತ್ತೆ ಇನ್ನೊಬ್ಬರು ಅಧಿಕಾರದಲ್ಲಿದ್ದವರು ಶ್ರೀ ಟಿ. ಸಿದ್ದಲಿಂಗಯ್ಯನವರು. ಅವರು ಸಚಿವರಾಗಿದ್ದಾಗ ಕಾಪರ್ ವೈರ ಪ್ರಕರಣದಲ್ಲಿ ಆಪಾದನೆ ಬಂತು ಎಂದು ಅವರು ತಮ್ಮ ಅಧಿಕಾರಸ್ಥಾನಕ್ಕೆ ರಾಜೀನಾಮೆ ಕೊಟ್ಟು ಹೊ
ರ

ಬಂದರು. ಅವರು ಜನತೆಯ ನಂಬಿಕೆಯನ್ನು ಕಳೆದುಕೊಂಡು ಅವರು ಹೇಳಿದಂತಹ ಕೆಲಸಗಳನ್ನು ಮಾಡಲು ಸರಿಯಾಗಿ ಸಮರ್ಥನೆ ಮಾಡಲು ಅವಕಾಶವಿಲ್ಲದಿದ್ದರೆ, ಅಧಿಕಾರದಲ್ಲಿರಬಾರದು ಎನ್ನುವ ಒಂದು ತತ್ವಕ್ಕೆ ಅಂಟಿಕೊಂಡು ಅವರು ಅಧಿಕಾರದಲ್ಲಿದ್ದರೆ ತಪ್ಪಾಗುತ್ತದೆ ಎಂದು ಹೊರಗೆ ಬಂದರು.

ಇನ್ನೊಂದು ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಪಾನನಿರೋಧವನ್ನು ಸರಕಾರ ಕಡ್ಡಾಯವಾಗಿ ಜಾರಿಗೆ ತರಬೇಕು, ತರತಕ್ಕ ಶಕ್ತಿ ಸರಕಾರಕ್ಕೆ ಇದೆ. ಇದನ್ನು ತರಲು ನಂಬಿಕೆಯುಳ್ಳವರು ಸರಕಾರದಲ್ಲಿದ್ದಾರೆ, ಆದರೂ ಇದನ್ನು ಇದುವರೆಗೆ ಏಕೆ ತರಲಿಲ್ಲ ಎನ್ನುವ ಒಂದು ಶಂಕೆ ನಮಗೆ ಬರುತ್ತಿದೆ. ಸ್ವಾತಂತ್ರ್ಯ ಬಂದು ಸುಮಾರು ೨೫ ವರ್ಷಗಳಾದರೂ ಆಡಳಿತಕ್ಕೆ ಬಂದಿರುವ ಸರಕಾರ ಜನತೆಗೆ ಏನು ಆಶ್ವಾಸನೆ ಕೊಟ್ಟು ಬಂದಿದ್ದಾರೋ ಅದನ್ನು ಪ್ರಾಮಾಣಿಕವಾಗಿ ದೇಶದಲ್ಲಿ ಜಾರಿಗೆ ತರಲು ಯತ್ನ ಮಾಡಬೇಕು. ಸಾಮಾನ್ಯ ಜನರಿಗೆ ಅನುಕೂಲವಾಗುವಂತೆ ಮಾದರಿಯಾಗಿ ಒಂದು ನಿರ್ಣಯವನ್ನು ಈ ದೇಶದಲ್ಲಿ ತರಬೇಕು. ಇಂದು ಪಾನ ನಿರೋಧವನ್ನು ಜಾರಿಗೆ ತರದೇ ಇರುವುದರಿಂದ ಇದರ ಪರಿಣಾಮ ಏನಾಗಿದೆ ಎನ್ನುವುದಕ್ಕೆ ನಾನು ಕೆಲವು ನಿದರ್ಶನಗಳನ್ನು ಕೊಡಬಹುದು. ಇಂದು ಎಲ್ಲೆಲ್ಲೂ ಹೆಂಡದ ಅಂಗಡಿಗಳು ಜಾಸ್ತಿಯಾಗುತ್ತಾ ಬರುತ್ತಿವೆ. ಅದೂ ಕೂಡ ಎಲ್ಲಿ ದೇವಸ್ಥಾನಗಳು ಇವೆಯೋ ಅದರ ಮುಂದುಗಡೆಯಲ್ಲೇ ಹೆಂಡದ ಅಂಗಡಿಯನ್ನು ತೆರೆಯಲು ಲೈಸನ್ಸ್ ಕೊಟ್ಟಿದ್ದಾರೆ, ಇಲ್ಲೇ ದೊಡ್ಡದಾಗಿ ಬೀರು, ಬ್ರಾಂದಿ ಇತ್ಯಾದಿ ಮಾದಕ ದ್ರವ್ಯಗಳನ್ನು ಯಾವ ಭಯವೂ ಇಲ್ಲದೇ ಮಾರುತ್ತಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ಕಕ್ಕಿಲಾಯರವರು ಹೇಳಿದಂತೆ ಹೆಣ್ಣು ಮಕ್ಕಳು ಇಂದು ರಸ್ತೆಯಲ್ಲಿ ಹೋಗುವುದೇ ಕಷ್ಟವಾಗಿದೆ. ಇವರ ವಾದವನ್ನು ನಾನೂ ಪುಷ್ಟೀಕರಿಸುತ್ತೇನೆ. ದಿನ ನಿತ್ಯವೂ ಇದನ್ನು ನಾವು ನೋಡುತ್ತಲೇ ಬರುತ್ತಿದ್ದೇವೆ. ಇನ್ನೊಂದು ಸಣ್ಣ ಉದಾಹರಣೆ ಇಲ್ಲಿ ಹೇಳುತ್ತೇನೆ. ಒಂದು ದಿನ ಬಿ.ಟಿ.ಎಸ್. ಬಸ್ಸಿನಲ್ಲಿ ಇಬ್ಬರು ಚೆನ್ನಾಗಿ ಕುಡಿದುಬಂದಿದ್ದರು. ಇವರ ಜೊತೆ ಕುಡಿಯದೇ ಇರುವವರೂ ಬಂದಿದ್ದರು. ಕುಡಿದವರು ಮಿತ್ತೇರಿ ಇಲ್ಲದ ರಂಪ ಮಾಡುತ್ತಿದ್ದರು. ಹೀಗೆ ಬಸ್ಸಿನಲ್ಲಿ ರಂಪ ಮಾಡುವುದು ಸರಿಯಲ್ಲ ಎಂದು ಅಲ್ಲೇ ಇದ್ದ ಇನ್ನೊಬ್ಬರು ಅವರಿಗೆ ಬುದ್ಧಿ ಹೇಳಿದರು. ಇವರು ಸರಕಾರಕ್ಕೆ ಸುಮಾರು ಹತ್ತು ಕೋಟಿಯಷ್ಟು ಟ್ಯಾಕ್ಸ್ ಕೊಡುತ್ತಿದ್ದಾರೆ. ಇವರನ್ನು ಅವಹೇಳನ ಮಾಡಲು ಹೋಗಬೇಡಿ ಎಂದು ಅಲ್ಲಿ ವಾಕ್ಯಾರ್ಥ ಮಾಡಲು ಹೊರಟರು. ಮಂತ್ರಿಗಳು, ಮಾಜೀ ಮಂತ್ರಿಗಳು ಎಂ.ಎಲ್.ಎ.ಗಳು, ಮಾಜೀ ಎಂ.ಎಲ್.ಎ. ಗಳು ಹೀಗೆ ಎಲ್ಲರೂ ಇದನ್ನು ಸರಿಯಾಗಿ ಬಿಡಿಸಲು ತಕ್ಕ ಪ್ರಯತ್ನ ಮಾಡಲಿಲ್ಲ ಎಂದು ತಿಳಿದುಕೊಂಡಿದ್ದೇನೆ ಎಲ್ಲರೂ ಗಾಂಧಿವಾದಿಗಳೇ, ಯಾರೂ ಇದರ ಬಗ್ಗೆ ವಿರೋಧ ಮಾಡುವುದಿಲ್ಲ ಆದರೆ ಇದರಲ್ಲಿ ನಂಬಿಕೆ ಮಾತ್ರ ಅವರಲ್ಲಿಲ್ಲ.

ಇಂದು ಪೋಲೀಸ್ ಸ್ಟೇಷನ್‌ನಲ್ಲಿ ಕಳವಾದ ಮಾಲು ಬೇಕಾದಷ್ಟು ಬಿದ್ದಿರುತ್ತದೆ. ಆ ಮಾಲನ್ನು ಎಲ್ಲಿಂದ ಕದ್ದಿದ್ದು ಎಂಬುದನ್ನು ತಿಳಿಯಲು ಪೋಲೀಸರು ಕಳ್ಳತನ ಮಾಡಿದವರ ಬಾಯನ್ನು ಬಿಡಿಸಬೇಕಾದರೆ ಅವರಿಗೆ ಹೆಚ್ಚಿನ ರೀತಿಯಲ್ಲಿ ಕುಡಿಸುತ್ತಾರೆ. ಅವರು ಕುಡಿದು ಪ್ರಜ್ಞೆ ತಪ್ಪಿದಾಗ ಅವರ ಬಾಯನ್ನು ಬಿಡಿಸುತ್ತಾರೆ. ಅದೇ ರೀತಿ ನಮ್ಮ ಸರ್ಕಾರದ ಅಧಿಕಾರಿಗಳು ಪಾನ ನಿರೋಧದ ನೀತಿಗೆ ವಿರೋಧವಾಗಿದ್ದಾರೆ. ಎಷ್ಟೋ ಜನ ಅಧಿಕಾರಿಗಳು ಇಂದು ಸೆಂಚುರಿ ಕ್ಲಬ್, ಬೌರಿಂಗ್ ಇನ್‌ಸ್ಟಿಟ್ಯೂಟ್, ಅಶೋಕ ಹೋಟೆಲ್ ಮುಂತಾದ ಕಡೆಗಳಿಗೆ ಹೋಗುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅಧಿಕಾರಿಗಳು ಸ್ವಂತ ದುಡ್ಡಿನಿಂದ ಕುಡಿಯುತ್ತಾರೆಯೋ ಹೇಗೆ ?

ಶ್ರೀ ಪಾಟೀಲ್‌ನಾಗರಾಜ್.—ಸೆಂಚುರಿ ಕ್ಲಬ್, ಬೌರಿಂಗ್ ಇನ್‌ಸ್ಟಿಟ್ಯೂಟ್ ಮತ್ತು ಅಶೋಕ ಹೋಟೆಲ್‌ಗಳಿಗೆ ಹೋಗಿ ಕುಡಿಯತಕ್ಕಂಥ ಅಧಿಕಾರಿಗಳು ಏನಿದ್ದಾರೆ, ಅವರು ಬೇರೆ ರೀತಿಯಿಂದ ಬಂದ ದುಡ್ಡಿನಿಂದ ಕುಡಿಯುತ್ತಾರೆ ಎಂಬುವನ್ನು ನೀವು ಒಪ್ಪಿದ್ದೀರಿ, ನಾವೂ ಒಪ್ಪಬೇಕಾಗುತ್ತದೆ. ಇಲ್ಲದಿದ್ದರೆ ಅವರು ಜೀವನ ಮಾಡುವುದಾದರೂ ಹೇಗೆ ? ಇಂದು ಸರ್ಕಾರದವರು ಪಾನನಿರೋಧವನ್ನು ಯಶಸ್ವಿಯಾಗಿ ಜಾರಿಗೆ ತರದಿರುವುದರಿಂದ, ಮದ್ಯವನ್ನು ತಯಾರು ಮಾಡತಕ್ಕಂಥ ಅನೇಕ ಕಂಪೆನಿಗಳು ಇಂದು ರಾಜ್ಯದಲ್ಲಿ ಸ್ಥಾಪನೆಗೊಂಡಿವೆ. ಬೆಂಗಳೂರಿನಲ್ಲಿಯೇ ಅನೇಕ ಕಂಪೆನಿಗಳು ಇಂದು ಇವೆ. ಅವು ಬ್ರಾಂದಿ, ವಿಸ್ಕಿಯನ್ನು ತಯಾರು ಮಾಡಿ ಸೈನ್ಯದಲ್ಲಿರುವ ಯೋಧರಿಗೂ ಕಳಿಸಿಕೊಡುತ್ತಿವೆ. ಇದನ್ನು ನಿಲ್ಲಿಸುವುದಕ್ಕೆ ಈ ಸರ್ಕಾರಕ್ಕೆ ದಕ್ಷತೆ ಇದೆಯೇ ಎಂದು ಕೇಳುತ್ತೇನೆ. ಇಂದು ಈ ಬ್ರೂಯರಿಗಳವರು ಸರಿಯಾಗಿ ಲೆಕ್ಕ ಇಡದೆ ತಿಂಗಳಿಗೆ ಸುಮಾರು ೫ ಲಕ್ಷ ರೂಪಾಯಿಗಳವರೆಗೆ ಸಂಪಾದನೆ ಮಾಡುತ್ತಾರೆ. ಅವೆಲ್ಲಾ ಕಪ್ಪು ಹಣದ ಲೆಕ್ಕಕ್ಕೆ ಹೋಗುತ್ತಿದೆ. ಒಂದು ಕಡೆ ಈ ಮನೆಯ ೧೫ ಜನ ಮಾನ್ಯ ಸದಸ್ಯರು ಪಾನನಿರೋಧವನ್ನು ಜಾರಿಯಲ್ಲಿ ತರಬೇಕು ಎಂದು ನಿರ್ಣಯವನ್ನು ತಂದಿದ್ದರೆ, ಮತ್ತೊಂದು ಕಡೆ ಸರ್ಕಾರದವರು ಹೆಂಡ, ವಿಸ್ಕಿ, ಬ್ರಾಂದಿ ಮುಂತಾದವನ್ನು ತಯಾರು ಮಾಡುವವರಿಗೆ ಲೈಸೆನ್ಸ್ ಕೊಡುತ್ತಿದ್ದಾರೆ. ಇದನ್ನು

(ಶ್ರೀ ವಾಟಾಳ್ ನಾಗರಾಜ್)

ನೋಡಿದರೆ ಇವರದ್ದು ಕೇವಲ ಒಣ ಘೋಷಣೆಯಾಗಿದೆ ಎಂದು ಹೇಳುತ್ತೇನೆ. ಇನ್ನೊಂದು ಗುರುತರವಾದ ವಿಷಯವೆಂದರೆ, ನಾನು ಯಾರನ್ನೂ ಮನನೋಯಿಸಬೇಕೆಂದು ಹೇಳುತ್ತಿಲ್ಲ, ಒಂದು ಪತ್ರಿಕೆಯಲ್ಲಿ ಬಂದಿರುವಂತಹ ವಿಷಯವನ್ನು ಮಾತ್ರ ಹೇಳುತ್ತಿದ್ದೇನೆ. ಮಂಗಳೂರಿನಿಂದ ಹೊರಡುವ ಆಶಾವಾದಿ ಎಂಬ ಪತ್ರಿಕೆಯಲ್ಲಿ ಏನು ವರದಿಯಾಗಿದೆ ಎಂದರೆ, ಸ್ಟೇಟ್ ಸಚಿವರೊಬ್ಬರು ಇತ್ತೀಚೆಗೆ ಬೆಳಗಾಂಗೆ ಹೋಗಿದ್ದಾಗ ಅಲ್ಲಿಯ ಪೋಲೀಸ್ ಸೂಪರಿಂಟೆಂಡೆಂಟ್ ಆದ ಶ್ರೀ ಕಾರ್ತಿಕೇಯನ್ ಅವರು ಬಂದು ಸೆಲ್ಯೂಟ್ ಹೊಡೆದಾಗ, ನಿಶೆಯ ಮತ್ತೇರಿದ್ದ ರಾಜ್ಯ ಸಚಿವರಿಗೆ ಯಾವ ಅಧಿಕಾರಿ ಬಂದಿದ್ದಾರೆ ಎಂಬುದು ಗೊತ್ತಾಗದೆ ಕಣ್ಣನ್ನು ಬೇರೆ ಕಡೆಗೆ ಹಾಯಿಸಿದರು ಎಂಬುದಾಗಿ ಅದರಲ್ಲಿ ವರದಿಯಾಗಿದೆ. ನಿಷ್ಪಕ್ಷಪಾತ ಅಧಿಕಾರಿಗಳಲ್ಲಿ ಶ್ರೀಮಾನ್ ಕಾರ್ತಿಕೇಯನ್ ಅವರು ಸಹ ಒಬ್ಬರು ಎಂದು ಹೇಳುತ್ತಾರೆ.

ಶ್ರೀ ಶಿವಣ್ಣ ಭೀಮಪ್ಪ:—(ಹಣಕಾಸಿನ ಶಾಖೆಯ ರಾಜ್ಯ ಸಚಿವರು): ಲಾಟರಿ ಡ್ರಾ ಸಲುವಾಗಿ ನಾನೇ ಬೆಳಗಾಂಗೆ ಹೋಗಿದ್ದು. ಸಂಬಂಧಪಟ್ಟ ಅಧಿಕಾರಿಗಳು ಸಹ ಇಲ್ಲಿಯೇ ಇದ್ದಾರೆ. ಆದರೆ ಮಾನ್ಯ ಸದಸ್ಯರು ಹೇಳುತ್ತಿರುವುದು ತಪ್ಪಿದೆ.

ಶ್ರೀ ವಾಟಾಳ್‌ನಾಗರಾಜ್.—ನಾನು ನಿಮ್ಮ ಮೇಲೆ ಅಪಾದನೆ ಮಾಡಲಿಲ್ಲ. ಪತ್ರಿಕೆಯಲ್ಲಿರುವುದನ್ನು ಹೇಳಿದೆ ಅಷ್ಟೆ.

MR. DEPUTY SPEAKER:—Whatever appears in the newspapers may not be authentic.

ಶ್ರೀ ವಾಟಾಳ್ ನಾಗರಾಜ್:—ನಾನು ಯಾರ ಹೆಸರನ್ನೂ ಇಲ್ಲಿ ಎತ್ತುವುದಿಲ್ಲ. ತಮ್ಮ ಅಪ್ಪಣೆಯನ್ನು ಪಡೆದೇ ಪತ್ರಿಕೆಯಲ್ಲಿರುವ ವಿಷಯವನ್ನು ಹೇಳಿದೆ ಅಷ್ಟೆ. ಶ್ರೀಮಾನ್ ಶಿವಣ್ಣನವರ ಬಗ್ಗೆ ನನಗೆ ಅಪಾರವಾದ ನಂಬಿಕೆ ಇದೆ. ಬೆಳಗಾಂಗೆ ಹೋಗಿದ್ದು ನಾನೇ ಎಂದು ಅವರು ಹೇಳಿದರು. ಅವರ ಬಗೆ ನಾನು ವಾದ ಮಾಡುವುದಕ್ಕೆ ಹೋಗುವುದಿಲ್ಲ. ಇನ್ನೊಬ್ಬರು ಸ್ಟೇಟ್ ಸಚಿವರು ಕಲ್ಬುರ್ಗಿಗೆ ಹೋದಾಗ ಏನು ನಡೆಯಿತು ಎಂಬುದು ಮೇಲ್ಮನೆಯಲ್ಲಿ ಪ್ರಸ್ತಾಪವಾಗಿದೆ. ಇವೊತ್ತು ಪಾನನಿರೋಧದ ಬಗ್ಗೆ ಏನು ಮಾತನಾಡುತ್ತಿದ್ದಾರೆ, ಅದು ಕೇವಲ ಫ್ಲೋರ್‌ಕಲ್ಲಿನ ಮೇಲೆ ತಲೆ ಚಚ್ಚಿಕೊಳ್ಳುವ ಹಾಗೆ ಆಗಿದೆ. ಇದು ಕೇವಲ ಘೋಷಣೆಯಾಗಿದೆಯೇ ವಿನಾ ಕಾರ್ಯರೂಪದಲ್ಲಿ ತರುವುದಕ್ಕೆ ಈ ಸರ್ಕಾರಕ್ಕೆ ಸಾಧ್ಯವಿಲ್ಲವಾಗಿದೆ. ಮಾನ್ಯ ಆಡಳಿತ ಕಾಂಗ್ರೆಸ್ಸಿನ ಕಾರ್ಯದರ್ಶಿಗಳಾದ ಶ್ರೀಮಾನ್ ಗುಂಡೂರಾವ್ ಅವರು ಇಲ್ಲಿಯೇ ಇದ್ದಾರೆ. ಅವರನ್ನು ಕೇಳಿಕೊಳ್ಳುವುದೇನೆಂದರೆ, ಕಾಂಗ್ರೆಸ್ ಪಕ್ಷಕ್ಕೆ ಸೇರಿಕೊಳ್ಳುವವರು ಪಾನನಿರೋಧಕ್ಕೆ ಬದ್ಧನಾಗಿರುತ್ತೇನೆಂದು ಹೇಳಿ ಸೇರಿಕೊಳ್ಳಬೇಕಾಗಿದ್ದೆ ಎನ್ನುವ ಕಲಂವಿಸಿದೆ. ಆ ಒಂದು ಕಲಂ ಅನ್ನು ಕಿತ್ತು ಹಾಕಬೇಕೆಂದು ಕೇಳಿಕೊಳ್ಳುತ್ತೇನೆ. ಆ ರೀತಿ ಆ ಕಲಂನ್ನು ಕಿತ್ತು ಹಾಕಿದರೆ ನಿಮಗೂ ಗೌರವ, ನಿಮ್ಮ ಪಕ್ಷದ ಸದಸ್ಯರಿಗೂ ಗೌರವ. ನಾನೇನು ಯಾರ ಮೇಲೂ ಚಾರ್ಜ್ ಮಾಡುತ್ತಿಲ್ಲ. ನಾನು ಈ ಮಾತನ್ನು ಹೇಳುತ್ತಿರುವುದು ಏತಕ್ಕೆಂದರೆ, ನಾವು ಇಂದು ಸಮಾಜವಾದದ ಯುಗದಲ್ಲಿ ಹೋಗುತ್ತಿದ್ದೇವೆ. ಆದ್ದರಿಂದ ಪಾನನಿರೋಧವನ್ನು ಯಶಸ್ವಿಯಾಗಿ ಜಾರಿಗೆ ತರಬೇಕಾಗಿದೆ. ಆದರೆ ಅದನ್ನು ಜಾರಿಗೆ ತರದೆ ಇಂದು ಸರ್ಕಾರದವರು ಪ್ರತಿ ಹಳ್ಳಿಯಲ್ಲಿಯೂ ಹೆಂಡದ ಅಂಗಡಿಗಳನ್ನು ತೆರೆಯುತ್ತಿದ್ದಾರೆ. ಎಷ್ಟೋ ಹಳ್ಳಿಗಳಲ್ಲಿ ಕುಡಿಯುವ ನೀರಿನ ಬಾವಿಗಳಲ್ಲಿ ರಸ್ತೆಗಳಿಲ್ಲ: ಆದರೆ ಹೆಂಡದ ಅಂಗಡಿಗಳು ಮಾತ್ರ ಇವೆ. ಇದರ ಜೊತೆಗೆ ಈ ರಾಜ್ಯದಲ್ಲಿ ಲಾಟರಿ ಟಿಕೇಟ್‌ಗಳನ್ನು ಬೀದಿ ಬೀದಿಯಲ್ಲಿಯೂ ಮಾರಾಟ ಮಾಡುತ್ತಿದ್ದಾರೆ. ಕುದುರೆ ರೇಸ್‌ಗಾಗಿ ಆ ಜಾಗವನ್ನು ೫೦ ವರ್ಷದ ಗುತ್ತಿಗೆಗೆ ಕೊಟ್ಟಿದ್ದಾರೆ. ಇದೆಲ್ಲಾ ಸಮಾಜವಾದವೇ ಎಂದು ತಮ್ಮನ್ನು ಕೇಳುತ್ತೇನೆ. ಈ ಸರ್ಕಾರದವರು ಸಾಮಾನ್ಯ ಜನತೆಗೆ ಕೊಟ್ಟಿರುವ ಆಶ್ವಾಸನೆಗಳಾದರೂ ಏನು? ಆದರೆ ಕಾರ್ಯತಃ ಮಾಡುತ್ತಿರುವುದಾದರೆ ಏನು? ಲಾಟರಿ, ಜೂಜು ಮತ್ತು ಕುಡಿತಗಳಿಗೆ ಅವಕಾಶ ಕೊಟ್ಟಿರುವುದು. ಒಟ್ಟಿನಲ್ಲಿ ಈಗ ತಂದಿರುವ ನಿರ್ಣಯದ ಬಗ್ಗೆ ನನಗೆ ಅಪಾರವಾದಂಥ ಸಮ್ಮತಿ ಇದೆಯೇ ಹೊರತು, ಇದನ್ನು ಜಾರಿಗೆ ತರುವುದಕ್ಕೆ ನಿಮ್ಮ ಕೈಯಲ್ಲಿ ಆಗುವುದಿಲ್ಲ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

MR. DEPUTY SPEAKER:—The time allotted for this resolution was one hour thirty minutes. It is already over. Is it the desire of the House to extend the time by half-an-hour more?

HON. MEMBERS:—Yes.

MR. DEPUTY SPEAKER:—The time is extended by half-an-hour.

† ಶ್ರೀ ಎಚ್. ಬಿ. ಕೆಂಚೇಗೌಡ (ಕೃಷ್ಣರಾಜನಗರ).—ಮಾನ್ಯ ಸಭಾಧ್ಯಕ್ಷರೇ, ಈ ಪಾನನಿರೋಧದ ವಿಚಾರವಾಗಿ ಶ್ರೀಮತಿ ರೇಣುಕಾರಾಜೇಂದ್ರನ್ ಅವರು ಏನು ಕೆಲವು ವಿಚಾರಗಳನ್ನು ಹೇಳಿದರೋ ಅದನ್ನು ನಾನು ಒಪ್ಪುತ್ತೇನೆ. ಈಗ ನಮ್ಮಲ್ಲಿ ಏನಾಗಿದೆ ಎಂದರೆ, ಯಾರು ಯಾರು ಜನತಾ ಪ್ರತಿನಿಧಿಗಳಾಗಿ ಅಧಿಕಾರಕ್ಕೆ ಬರುತ್ತಾರೋ ಅಥವಾ ಅಧಿಕಾರದಲ್ಲಿ ಇದ್ದಾರೋ ಅವರುಗಳು ನುಡಿದಂತೆ ನಡೆಯುತ್ತಿಲ್ಲ. ಇದರಿಂದಲೇ ಕಾನೂನುಗಳು ಜಾರಿಯಲ್ಲಿ ಬರುವುದಕ್ಕೆ ಅವಕಾಶವಾಗುತ್ತಿಲ್ಲ. ಮತ್ತು ಬಹಳ ಹಾನಿಯಾಗುವುದಕ್ಕೂ ಅವಕಾಶವಾಗುತ್ತಿದೆ. ಎಲ್ಲರಿಗೂ ಗೊತ್ತಿರುವಂತೆ ಪಾನನಿರೋಧದ ವಿಷಯ ಇರುಳು ಕಂಡ ಬಾವಿಗೆ ಹಗಲು ಬೀಳುವಂತೆ ಆಗಿದೆ. ಪಾನನಿರೋಧವನ್ನು ಜಾರಿಯಲ್ಲಿ ತರಬೇಕೆಂದು ಯಾರು ಹೇಳುತ್ತಾರೋ ಅವರು ಮೊದಲು ಅದನ್ನು ಅನುಸರಿಸಬೇಕು. ಈಗ ಕುಡಿಯುವುದು ಒಂದು ಫ್ಯಾಷನ್ ಆಗಿಬಿಟ್ಟಿದೆ. ದೊಡ್ಡವರು ಕುಡಿಯುವುದನ್ನು ಅಭ್ಯಾಸವಾಗಿ ಇಟ್ಟುಕೊಂಡು, ಕೆಳಮಟ್ಟದಲ್ಲಿರುವವರು ಕುಡಿಯಬಾರದು ಎಂದು ಹೇಳಿದರೆ ಅದು ಎಷ್ಟರಮಟ್ಟಿಗೆ ಕಾರ್ಯಗತವಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ.

ಹಿಂದಿನ ಸರ್ಕಾರದವರು ಪಾನನಿರೋಧ ಜಾರಿಯಲ್ಲಿದ್ದುದನ್ನು ಏತಕ್ಕೆ ತೆಗೆದುಹಾಕಿದರು ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಉನ್ನತಮಟ್ಟದಲ್ಲಿರುವವರು ಮತ್ತು ದೊಡ್ಡವರು ಎಲ್ಲರೂ ಕುಡಿಯುವುದನ್ನು ಕಲಿತಮೇಲೆ ಪಾನನಿರೋಧವನ್ನು ಏತಕ್ಕೆ ಜಾರಿಯಲ್ಲಿ ಇಟ್ಟುಕೊಳ್ಳಬೇಕು ಎಂದು ಅದನ್ನು ತೆಗೆದುಹಾಕಿದರು ಎಂದು ಹೇಳಿದರು. ಈಗ ಅಧಿಕಾರಕ್ಕೆ ಬಂದಿರತಕ್ಕ ಶಾಸಕರಾಗಲೀ, ಅಥವಾ ಮಂತ್ರಿಗಳಾಗಲೀ ಅವರಿಗೆ ಈ ಅಧಿಕಾರ ಸ್ವಂತ ಸ್ವತ್ತು ಅಲ್ಲ, ಮತ್ತು ಈ ಅಧಿಕಾರ ನಮ್ಮ ತಂದೆತಾಯಿಗಳ ಸ್ವತ್ತೂ ಅಲ್ಲ. ಜನತೆಯ ವೋಟಿನಿಂದ ನಮಗೆಲ್ಲರಿಗೂ ಈ ಒಂದು ಅಧಿಕಾರ ಮತ್ತು ಸ್ಥಾನಮಾನ ಸಿಕ್ಕಿದೆ. ಈ ಅಧಿಕಾರವನ್ನು ದುರುಪಯೋಗ ಮಾಡಿಕೊಂಡು ಸ್ವೇಚ್ಛಾರೀತಿಯಲ್ಲಿ ವರ್ತಿಸಬಾರದು. ಕುಡಿಯುವುದನ್ನು ಮತ್ತು ಕ್ಯಾಬರೇ ಡ್ಯಾನ್ಸಿಗೆ ಹೋಗುವುದನ್ನು ಸಂಪೂರ್ಣವಾಗಿ ನಿಲ್ಲಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಈ ರೀತಿ ಮಾಡದೇಹೋದರೆ ನಾವು ಜನಗಳಿಗೆ ಮೋಸಮಾಡಿದ ಹಾಗಾಗುತ್ತದೆ. ಆದ್ದರಿಂದ ಈ ಬಗ್ಗೆ ಶಾಸನಸಭಾ ಸದಸ್ಯರು ಮತ್ತು ಮಂತ್ರಿಗಳು ಒಂದು ನಿರ್ಧಾರವನ್ನು ತೆಗೆದುಕೊಂಡು ಅದರಿಂದ ಆಗತಕ್ಕ ಹಾನಿಯನ್ನು ತಪ್ಪಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಮತ್ತು ಶಾಸಕರಾಗಲೀ ಮಂತ್ರಿಗಳಾಗಲೀ ಯಾರಾದರೂ ಕುಡಿಯತಕ್ಕಂಥಾ ಅಭ್ಯಾಸವಿದ್ದರೆ ಅವರೆಲ್ಲರೂ ಮೊದಲು ಅದನ್ನು ಬಿಡಬೇಕು. ಆಗ ನಾವು ನೇರವಾಗಿ ಬುದ್ಧಿವಾದವನ್ನು ಹೇಳಬಹುದು. ಅದನ್ನು ಮೊದಲು ನಾವು ಅನುಸರಿಸದಿದ್ದರೆ ಪ್ರಯೋಜನ ಏನು ? ಈಗ ಸಮಾಜದಲ್ಲಿ ಏನಾಗಿದೆ ಎಂದರೆ ಯಾರು ಕುಡಿಯುವುದನ್ನು ಮತ್ತು ಕ್ಯಾಬರೇ ಡ್ಯಾನ್ಸಿಗೆ ಹೋಗುವುದನ್ನು ಕಲಿತಿಲ್ಲವೋ ಅವರಿಗೆ ಸ್ವಲ್ಪ ಕಡಿಮೆ ಬೆಲೆ. ಅವನು ಹಳೆಯ ತರಹದ ಮನುಷ್ಯ ಅವನಿಗೆ ಮಾಡರನ್ ಲೈಫೇ ಗೊತ್ತಿಲ್ಲ, ಅವನಿಗೆ ಜೀವನದ ಸವಿಯೇ ಗೊತ್ತಿಲ್ಲ, ಅವನು ಸಮಾಜದಲ್ಲಿರುವುದಕ್ಕೆ ಲಾಯಕ್ಕಿಲ್ಲ ಎನ್ನುವ ಭಾವನೆ ಜನಗಳಲ್ಲಿ ಬಂದಿದೆ. ತ್ರಿಕರಣ ಶುದ್ಧಿಯಿಂದ ನಿಷ್ಠೆಯಿಂದ ದೇಶಸೇವೆಯನ್ನು ಮಾಡುವುದಕ್ಕೆ ಯಾರು ಕಂಕಣ ಬದ್ಧರಾಗಿದ್ದಾರೆಯೋ ಅವರಿಗೆ ದೇಶಸೇವೆಯನ್ನು ಮಾಡುವುದಕ್ಕೆ ಅವಕಾಶವಿಲ್ಲ. ಮಹಾತ್ಮ ಗಾಂಧಿಯವರು ಪಾನನಿರೋಧವನ್ನು ಜಾರಿಗೆ ತರುವುದಕ್ಕೆ ಬಹಳ ನಿಷ್ಠೆಯಿಂದ ಪ್ರಯತ್ನ ಮಾಡಿದರು. ಅದರಿಂದ ಕುಡಿಯುವವರ ಸಂಖ್ಯೆ ಸ್ವಲ್ಪ ಕಡಿಮೆಯಾಗಿದೆ. ಒಳ್ಳೆಯ ಆಹಾರ ದೊರೆಯದೆ ಕುಡಿತದಿಂದ ಮಕ್ಕಳಿಗೆ ಬಟ್ಟೆಯನ್ನು ಒದಗಿಸದೇ ಅವರು ನಿಕೃಷ್ಟರಾಗುತ್ತಾರೆ ಎನ್ನುವ ದೃಷ್ಟಿಯಿಂದ ಮಹಾತ್ಮಾ ಗಾಂಧೀಜಿಯವರು ಪಾನನಿರೋಧವನ್ನು ಜಾರಿಗೆ ತರಲು ಆಶೆಪಟ್ಟರು. ಆದರೆ ಈಗ ನಮ್ಮ ಸರ್ಕಾರದವರು ಅದನ್ನು ಅನುಸರಿಸುತ್ತಾ ಇಲ್ಲ. ನಮ್ಮ ದೇಶಕ್ಕೆ ಒಳ್ಳೆಯದು ಆಗಬೇಕಾದರೆ, ನಮ್ಮ ಜನತೆಗೆ ಒಳ್ಳೆಯದು ಆಗಬೇಕಾದರೆ ಈಗ ಉನ್ನತ ಅಧಿಕಾರದಲ್ಲಿರುವವರು ಮೊದಲು ಕುಡಿಯುವುದನ್ನು ಬಿಟ್ಟು, ಕಟ್ಟುನಿಟ್ಟಾಗಿ ಪಾನನಿರೋಧವನ್ನು ಜಾರಿಗೆ ತರಬೇಕೆಂದು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಮಾದೇಗೌಡ (ಬನ್ನೂರು).—ಮಾನ್ಯ ಸಭಾಧ್ಯಕ್ಷರೇ ಇವೊತ್ತು ಈ ಸಭೆಯ ಮುಂದೆ ಮಂಡಿಸತಕ್ಕ ಪಾನನಿರೋಧವನ್ನು ಜಾರಿಗೊಳಿಸಬೇಕೆಂಬ ನಿರ್ಣಯವನ್ನು ನಾನು ಸಂಪೂರ್ಣವಾಗಿ ಹೃತ್ಪೂರ್ವಕವಾಗಿ ಸಮರ್ಥಿಸಿ ಅದಕ್ಕೆ ನನ್ನ ವೈಯಕ್ತಿಕವಾದ ಬೆಂಬಲವನ್ನು ಸೂಚಿಸುತ್ತಾ ಈ ಒಂದು ಸೂಚನೆಯನ್ನು ತಂದಿರುವುದರ ಔಚಿತ್ಯ ಏನು ಎಂದು ನಾನು ಪ್ರಶ್ನೆ ಮಾಡಬೇಕಾಗಿದೆ. ಈ ಸದನದಲ್ಲಿ ಮಂಡಿಸತಕ್ಕ ನಿರ್ಣಯದ ವಿಚಾರದಲ್ಲಿ ಬಹುಶಃ ಅಷ್ಟು ಸಮರ್ಥತೆಯಿಂದ ವಿಚಾರಪೂರಿತವಾಗಿ ಯಾರೂ ಮಾತನಾಡಲಿಲ್ಲ ಎಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ನಾನು ಪತ್ರಿಕೆಗಳಲ್ಲಿ ಓದಿದೆ,

(ಶ್ರೀ ಕೆ. ಮಾದೇಗೌಡ)

ರಾಜ್ಯದ ಹೆಸರನ್ನು ಕರ್ನಾಟಕ ಎಂದು ಬದಲಾಯಿಸಲು ಸರ್ಕಾರದವರು ಬಹಳ ಮಹತ್ವವನ್ನು ಕೊಟ್ಟು ಆಬಗ್ಗೆ ಪಾರ್ಟಿಯಲ್ಲಿ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಆದರೆ ಅದಕ್ಕಿಂತಲೂ ಇನ್ನೂ ಉನ್ನತವಾದ ಮಹತ್ವವಾದ ವಿಚಾರಗಳು ಪಾರ್ಟಿಯಲ್ಲಿ ತೀರ್ಮಾನ ತೆಗೆದುಕೊಳ್ಳತಕ್ಕ ವಿಷಯಗಳು ಇದ್ದುವು. ಸಮಾಜವಾದವನ್ನು ಒಪ್ಪಿ, ಸಮಾಜವಾದವನ್ನು ಆಚರಣೆಗೆ ತರತಕ್ಕಂಥಾ ಸರ್ಕಾರವನ್ನು ಹೊಂದಿರತಕ್ಕ ನಮ್ಮ ದೇಶದಲ್ಲಿ ಪಾನನಿರೋಧವನ್ನು ಜಾರಿಗೆ ತರದೆ ಸಮಾಜವಾದದ ಹೆಸರಿನಲ್ಲಿ ಸರ್ಕಾರ ನಡೆಸತಕ್ಕವರು ದೇಶದ ಅಪರಾಧಿಗಳು ಎಂದು ನಾನು ಒತ್ತಾಯಪೂರ್ವಕವಾಗಿ ಹೇಳಬಯಸುತ್ತೇನೆ. ಜನಗಳಿಗೆ ತಾಪತ್ರಯವನ್ನು ಜಾಸ್ತಿ ಮಾಡಿ ನಾವು ಸಮಾಜವಾದವನು ಜಾರಿಗೆ ತರುತ್ತೇವೆ ಎಂದು ಹೇಳಿದರೆ ಅದು ಯಾವ ಸರ್ಕಾರಕ್ಕೂ ಅರ್ಹವಾದದ್ದಲ್ಲ. ಬಹುಶಃ ಯಾವ ಸರ್ಕಾರವೇ ಆಗಲೀ ಪಾನನಿರೋಧ ವನ್ನು ಜಾರಿಗೆ ತರದೆ, ಸಮಾಜವಾದವನ್ನು ಉದ್ಧಾರಮಾಡುತ್ತೇವೆ ಎಂದು ದೃಢಮನಸ್ಸುಳ್ಳವರಾಗಿದ್ದರೆ ಅದು ಬಹುಶಃ ಅವರ ಮನೋದೌರ್ಬಲ್ಯ ಎಂದು ನಾವು ಹೇಳಬೇಕಾಗುತ್ತದೆ. ಮತ್ತು ಅದು ಮೌಢ್ಯತೆಯ ಪರಮಾವಧಿ ಎಂದು ಹೇಳದೇ ವಿಧಿಯಿಲ್ಲ. ನಮ್ಮ ಮಾನ್ಯ ಸ್ನೇಹಿತರಾದ ಶ್ರೀ ವಾಟಾಳ್ ನಾಗರಾಜ್ ಅವರು ಹೇಳಿದರು ಒಬ್ಬರು ಸಚಿವರು ಒಂದು ಸಂದರ್ಭದಲ್ಲಿ ತಮ್ಮ ಸಚಿವ ಪದವಿಯನ್ನೇ ತ್ಯಾಗ ಮಾಡಿರತಕ್ಕಂಥಾ ಸಂದರ್ಭ ಕೂಡ ಉಂಟಾಗಿದೆ ಎಂದು. ಇದೇ ಸಂದರ್ಭದಲ್ಲಿ ಮತ್ತೊಬ್ಬ ಸಚಿವರೂ ಕೂಡ ಬಹುಶಃ ಅವರ ಪದವಿಯನ್ನು ತ್ಯಜಿಸುವುದಕ್ಕೆ ಇಷ್ಟಪಡದೆ ಅವರ ತಾಲ್ಲೂಕಿನಲ್ಲಾದರೂ ಪಾನನಿರೋಧವನ್ನು ಆಚರಣೆ ತರತಕ್ಕಂಥಾ ಅವಕಾಶವನ್ನು ಪ್ರಭಾವಯುತವಾಗಿ ಕಲ್ಪಿಸಿಕೊಂಡು ಅಲ್ಲಿ ಪಾನನಿರೋಧವನ್ನು ಜಾರಿಗೆ ತಂದರು. ಆದ್ದರಿಂದ ಪಾನನಿರೋಧದಲ್ಲಿ ಪ್ರಾಮಾಣಿಕರಾಗಿ ಆಸಕ್ತ ರಾಗಿರುವಂತಹವರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಏತಕ್ಕೆ ಪಾನನಿರೋಧವನ್ನು ಆಚರಣೆಗೆ ತರುವುದಕ್ಕೆ ಪ್ರಯತ್ನ ಮಾಡಬಾರದು ಎಂದು ನಾನು ಪ್ರಶ್ನೆ ಮಾಡಬೇಕಾಗಿದೆ. ನಾನಾದರೂ ಕೂಡ ಮತ್ತೊಮ್ಮೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಒಂದು ಕುಡಿತದ ಮೂಲಕ ಆದಾಯದಿಂದ ಸಮಾಜವಾದವನ್ನು ಉದ್ಧಾರ ಮಾಡುವುದಕ್ಕೆ ಅವಕಾಶ ಮಾಡಬೇಡಿ. ಕುಡಿತದ ಆದಾಯದಿಂದ ವೆಚ್ಚ ಮಾಡಿ ಜನಗಳ ಹಿತದೃಷ್ಟಿಯನ್ನು ಕಾಪಾಡುವುದು ಒಂದು ಕಡೆ ಪಾನನಿರೋಧವನ್ನು ಸಡಿಲಿಸಿ ಜನಗಳನ್ನು ಕುಡಿಸಿ ಕುಡಿಸುವುದು ಒಂದು ಕಡೆ. ಇಂಥಾ ಒಂದು ನೀತಿಯನ್ನು ಅನುಸರಿಸುವುದು ಬಹುಶಃ ಒಳ್ಳೆಯದಲ್ಲ ಎಂದು ಕಾಣುತ್ತದೆ. ಪಾನನಿರೋಧದಿಂದ ಸರ್ಕಾರದ ಬೊಕ್ಕಸಕ್ಕೆ ಆದಾಯ ಕಡಿಮೆ ಆದರೂ ಪರವಾಯಿಲ್ಲ. ಆದರೆ ಅದರಿಂದ ಸಮಾಜದ ಉದ್ಧಾರವಾಗುತ್ತದೆ ಎಂದು ನಾನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಇದು ಒಂದು ಬರೀ ಬೂಟಾಟಿಕೆ ಸೂಚನೆಯಾಗಬಾರದು. ಪಾನನಿರೋಧವನ್ನು ಆಚರಣೆಗೆ ತರುವುದು ಅಂಥಾ ಕಷ್ಟದ ಕೆಲಸವೇನೂ ಅಲ್ಲ. ನಿಮ್ಮ ಪಾರ್ಟಿಯಲ್ಲಿ ಒಳ್ಳೆಯ ನುರಿತ ಅನುಭವಿಗಳು ಕೆಲವರು ಇದ್ದಾರೆ. ಆದ್ದರಿಂದ ತಾವುಗಳೆಲ್ಲರೂ ಈ ಬಗ್ಗೆ ತಮ್ಮ ಪಕ್ಷದಲ್ಲಿ ಚರ್ಚೆ ಮಾಡಿ ಬಹುಶಃ ಕರ್ನಾಟಕ ಎಂಬ ಹೆಸರನ್ನು ಇಡುವ ವಿಷಯದಲ್ಲಿ ಯಾವರೀತಿ ಪ್ರಯತ್ನ ಪಟ್ಟರೋ ಅದೇ ರೀತಿಯಲ್ಲಿ ಈ ವಿಷಯದಲ್ಲಿಯೂ ಪ್ರಯತ್ನ ಪಟ್ಟು ನಮ್ಮ ದೇಶದಲ್ಲಿ ಪಾನನಿರೋಧವನ್ನು ಜಾರಿಗೆ ತರಬೇಕು ಎಂದು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

11-30 A.M.

† SRI D. B. KALMANKAR (Afzalpur).—Sir, while welcoming the resolution put before this august House, I want to make some observation. Sir, if we see Part IV of the Directive Principles, then we will come to know as to what is our ideal, where we must proceed and what should be our direction. Article 37 says: "The provisions contained in this part shall not be enforceable by any court, but the principles laid therein are nevertheless fundamental in the governance of the country and it shall be the duty of the State to apply these principles in making laws. Then I will quote article 47. "The State shall regard the raising of the level of nutrition and the standard of living of its people and the improvement of public health as among its primary duties and, in particular, the State shall

endeavour to bring abaut prohibition of the consumption except for medicinal purposes of intoxicating drinks and of drugs which are injurious to health.

I have read this because, as I said at the outset, our idealism is to bring in democratic socialism in this country; our idealism is that we must create that society in this country wherein the society will be free from all evils. It is said in article 37 that the Directive Principles are not enforceable in a court of law. Nevertheless it has been stated that they will be fundamental principles gorverning the activities of the State But as against these principles what we find to day is, we are going in the opposite direction. Today we are only after material prosperity. But material prosperity alone is not the end of democracy or the end of socialism. Socialism speaks in terms of bringing up the level of standard of life; it speaks in terms of uplift of spiritual, moral, economic and other aspects of life. We are not only to attain that material propserity but also to raise the culture of our country which is something unique in this world. Even according to Dharma Sastrs and its four purposes, one of the purposes is Moksha or salvation. So, that being the case, we want a society in this country which will be unique in this aspect. But what do we find today? We had prohibition in 1967-except in Gulbarga, Raichur and Bangalore, all over the State and now we have reversed that procedure. Today the prohibition is abolished. The excise revenue today is second to the Sales tax. In 1964 65, the excise revenue was Rs. 3,73 lakhs, in 1971-72 it was 19.10 crores and it is going to be Rs. 28 crores next year. That shows with what rapdity we are going in for the influence of drinks. On the one hand, we want the life to be improved. Today we are making this unwanted liquor available to the poor havenots. It is the contradiction of our declared policy. We do not mind even if we forego some revenue; we have other other ways to make up; let us make that revenue by resorting to direct taxation measures, there are affluent of the society who have started companies. According to Wanchoo's Commission Report, there is an unaccounted money which exceeds more than 700 crores. This black money has been invested in the establishment of Cinema houses. So we can make up our revenues by resorting to direct taxation measures. This party has gone before the people with a manifesto that they will banish poverty or Garibi Hatao. If we want to banish poverty there are ways to do it; not at the cost of poor; not at the cost of moral turpitude or at the cost of our ancient virtues and ancient traditions. So, we have to resort to other means to banish poverty. Mahathma Gandhi wanted that this country should be free from all such evils. We claim to be the followers of Gandhiji. We have taken pledge that we will not take up to drinks. But in actual practice our own people are found indulging in all these dirty things. How can we tell the people to give up liquor drinks? Unless we do away with these things, it is not possible to better the society.

(SRI D. B. KALMANKAR)

I hope our Chief Minister who has done a nice thing yesterday in naming the State as Karnataka and the credit should go to him alone, would take a further step in the interests of the down-trodden the teaming millions, that he should accept this resolution for prohibition and bring credit to our State as the first state to have brought in prohibition in such a short period. With these words, I thank the Chair.

SRI S. M. SEERANALI CHANDRASEKHER.—I have been allotted one hour today to speak on the resolution.

MR. DEPUTY SPEAKER.—The hon. member should know the Rules of Procedure.

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದಂತಹ ಶ್ರೀ ಜಯಪ್ರಕಾಶ್ ನಾರಾಯಣರವರು ಮತ್ತು ಇತರ ಸದಸ್ಯರು ಇಲ್ಲಿ ಒಂದು ನಿರ್ಣಯವನ್ನು ಮಂಡನೆ ಮಾಡಿದ್ದಾರೆ. ಅದು ಪಾನನಿರೋಧವನ್ನು ಜಾರಿಗೆ ತರಬೇಕೆಂದು ಹೇಳುವಂತಹ ನಿರ್ಣಯ. ಮೊಟ್ಟ ಮೊದಲನೆಯದಾಗಿ ನಾನು ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುವುದೇನೆಂದರೆ, ನೀವು ಇದನ್ನು ಬರೇ ಚರ್ಚೆ ಮಾಡುವುದಕ್ಕೋಸ್ಕರ ಇಲ್ಲಿ ತಂದಿರುವುದಾದರೆ ನಾನು ಇದರಲ್ಲಿ ಚರ್ಚೆಮಾಡಲು ಮಾತ್ರ ಭಾಗವಹಿಸುತ್ತೇನೆ. ನೀವು ಇದನ್ನು ನಿಷ್ಠೆಯಿಂದ ಚರ್ಚೆ ಮಾಡಿ ಅದಕ್ಕೆ ಕಟ್ಟುಬೀಳುವುದಾದರೆ ಅಥವಾ ಈ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳುವುದಿಲ್ಲವೆಂದು ಹೇಳುವುದಾದರೆ ನಿಮ್ಮ ನಿರ್ಣಯಕ್ಕೆ ನಾನು ಸಹ ಬೆಂಬಲವನ್ನು ಕೊಡುತ್ತೇನೆ. ಇಲ್ಲದಿದ್ದರೆ ನಿಮ್ಮ ನಿರ್ಣಯಕ್ಕೆ ನಾನು ಸಂಪೂರ್ಣವಾಗಿ ವಿರೋಧವನ್ನು ವ್ಯಕ್ತಪಡಿಸಿ, ಈ ತರದ ನಾಟಕವನ್ನು ಆಡಿ ಆಷಾಢಭೂತಿತನವನ್ನು ತೋರಿಸಬೇಡಿ ಎಂದು ಹೇಳಬೇಕಾಗುತ್ತದೆ. ಇದು ಕೋಟಿ ಕೋಟಿ ಜನರನ್ನು ಉದ್ಧಾರ ಮಾಡತಕ್ಕಂತಹ ವಿಚಾರ. ಕೇವಲ ಚರ್ಚೆಗೋಸ್ಕರ ಮಂಡಿಸುವುದಾದರೆ ಅದಕ್ಕಿಂತಲೂ ನಾಚಿಕೆಗೇಡಿನ ವಿಷಯ ಬೇರೊಂದು ಇಲ್ಲವೆಂದು ಹೇಳುತ್ತೇನೆ. ಇಂತಹ ನಾಟಕವನ್ನು ಏಕೆ ನೀವು ಮಾಡುತ್ತಿದ್ದೀರಿ? ಇಂತಹ ಗೋಮುಖವ್ಯಾಘ್ರ ನೀತಿ ಏಕೆ ನಿಮಗೆ? ನಿಮಗೆ ನಿಷ್ಠೆ ಇದ್ದರೆ, ಈ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳುವುದಿಲ್ಲವೆಂದರೆ, ನಮ್ಮ ಪಕ್ಷದ ಬೆಂಬಲ ಇದಕ್ಕೆ ಇದೆ. ಅದಲ್ಲದೆ ಕೇವಲ ಚರ್ಚೆಗೋಸ್ಕರ ಇಲ್ಲಿ ಮಂಡಿಸಿದ್ದಾದರೆ ಎಂದರೆ ಅದಕ್ಕೆ ಬೆಂಬಲ ಕೊಡಲು ನಾವು ತಯಾರಿಲ್ಲ. ಇದನ್ನು ಅಷ್ಟು ಲಘುವಾಗಿ ತಾವು ಭಾವಿಸಬಾರದು.

ಈ ಪಾನ ನಿರೋಧ ವಿಚಾರದಲ್ಲಿ ನಮ್ಮ ಅನೇಕ ಸದಸ್ಯರು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಇಲ್ಲಿ ಒಂದಂತೂ ಸ್ಪಷ್ಟವಾಗಿದೆ. ಇವತ್ತು ಈ ಹಾದಿಯಲ್ಲಿ ಹೋದಂತಹ ಜನ ಏನಿದ್ದಾರೆ. ಅವರ ಪ್ರಗತಿಗೆ ಇದರಿಂದ ತೊಂದರೆಯಾಗಿದೆಯೆಂಬುದು ನಿರ್ವಿವಾದವಿಚಾರ. ಈ ಬಡ ಜನರು ಅವರ ಮಕ್ಕಳು ಹಳ್ಳಿಗಳಲ್ಲಿ ಏನಿದ್ದಾರೆ ಅವರಿಗೆ ಈ ಮದ್ಯಪಾನದ ದೆಸೆಯಿಂದ ಏಳಿಗೆಯನ್ನು ಸಾಧಿಸಲಾಗಲಿಲ್ಲ. ಈ ಸಂದರ್ಭದಲ್ಲಿ ಮಹಾತ್ಮ ಗಾಂಧೀಜಿಯವರ ಹೆಸರು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ೨೫ ವರ್ಷಗಳಿಂದಲೂ ಗಾಂಧೀಜಿಯವರ ಹೆಸರು ಹೇಳಿಕೊಂಡು ಬಂದಂತಹ ಜನರು ಇವತ್ತು ಏನು ಮಾಡಿದ್ದಾರೆಂಬುದು ಇಡೀ ರಾಷ್ಟ್ರಕ್ಕೆ ರುಜುವಾತಾಗಿದೆ. ಇವತ್ತು ಕುಡಿಯತಕ್ಕವರು ಬಹಳ ಮಂದಿ ಇದ್ದಾರೆ. ಹಾಗೆ ಕುಡಿಯತಕ್ಕವರು ಕೆಟ್ಟವರು ಎನ್ನುವುದನ್ನು ಯಾರೂ ಒಪ್ಪುವುದಕ್ಕಾಗುವುದಿಲ್ಲ.

ಏಕೆಂದರೆ ಕುಡಿಯುವವರಲ್ಲಿ ಬಹಳ ಬಡವರು ಇರುತ್ತಾರೆ. ಆದರೆ ಒಬ್ಬ ಕುಡಿಯುತ್ತಾನೆ ಅಂದ ಮಾತ್ರಕ್ಕೆ ಅವನು ಕೆಟ್ಟವನು ಅವನನ್ನು ದೂರಮಾಡಿ ನಿಕೃಷ್ಟವಾಗಿ ಕಾಣುತ್ತಿದ್ದರೆ ಅದು ಸುಸಂಸ್ಕೃತವಾದ ಮಾರ್ಗವಲ್ಲ. ಹಾಗೆಯೇ ಇದರ ಬಗ್ಗೆ ಏನು ಹೇಳಿದ್ದಾರೆಂಬುದನ್ನು ಪುರಾಣಗಳಲ್ಲಿ ನೋಡಬಹುದು. ಮಾನ್ಯ ಸಚಿವರಾದ ಶ್ರೀ ಬಸವಲಿಂಗಪ್ಪನವರು ಇಷ್ಟರಲ್ಲೇ ಸಿಕಂದರಾಬಾದಿಗೆ ಹೋಗುವ ವಿಚಾರವೂ ಇದೆ. ಪುರಾಣದಲ್ಲಿ ಸುರರು ಮತ್ತು ಅಸುರರು ಎಂಬುದಾಗಿ ಬರುತ್ತದೆ. ನಿನ್ನೆ ದಿವಸ ನಾನು ಮೆನೇಸ್ ಆಫ್ ಹಿಂದೂ ಇಂಪೆರಿಯಲಿಜಂ ಎಂಬ ಒಂದು ಪುಸ್ತಕವನ್ನು ನೋಡಿದೆ. ಅದರಲ್ಲಿ ಈ ವಿಚಾರವಾಗಿ ಬಹಳ ಚೆನ್ನಾಗಿ ಹೇಳಿದ್ದರು. ಯಾರು ಸುರವನ್ನು ಸೇವಿಸುತ್ತಾರೋ ಅವರು ಸುರ ಎಂದು ಹೇಳುತ್ತಾರೆ, ಸುರವನ್ನು ಸೇವಿಸದೇ ಇರುವವರು ಅಸುರರು. ಕೊನೆಗೆ ಬರುತ್ತಾ ಬರುತ್ತಾ ಅಸುರರು ಎನ್ನುವವರು ರಾಕ್ಷಸರೆಂದೆನಿಸಿಕೊಂಡರು ಹಿಂದೆ ಸುರರು ಕುಡಿಯುವವರಾಗಿದ್ದರೂ ಅವರನ್ನು ದೇವತೆಗಳೆಂದು ಕರೆಯುತ್ತಿದ್ದರು.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಸುರರು ದೇವತೆಗಳ ಕಾಲದಲ್ಲಿ ಸುರವನ್ನು ಸೇವಿಸುತ್ತಿದ್ದರು. ಅಂದಮೇಲೆ ಕುಡಿಯುವರಲ್ಲಿ ಈಗ ದೇವತೆಗಳ ಮಟ್ಟದಲ್ಲಿ ಕೆಲವರು ಇರಬಹುದು ಕುಡಿಯದೇ ಇರುವವರಲ್ಲಿ ಒಳ್ಳೆಯ ಅಸುರರಾಗಿ, ರಾಕ್ಷಸರಾಗಿ ಕಠೋರವಾದ ಅನುಭವ ಇದ್ದವನೂ ಇರಬಹುದು. ಇಂಥಾದ್ದರಲ್ಲಿ ಇವನು ಒಳ್ಳೆಯವನೋ, ಕೆಟ್ಟವನೋ ಎಂಬುದನ್ನು ತೀರ್ಮಾನಮಾಡುವುದಕ್ಕಾಗುವುದಿಲ್ಲ. ಜರ್ಮನಿಯಲ್ಲಿ ಏನು ಮಾಡುತ್ತಾರೆಂದರೆ, ಕಾಲೇಜ್ ಮತ್ತು ಹಾಸ್ಟಲುಗಳ ಹತ್ತಿರ ಬೀರ್ ಇಟ್ಟಿರುವುದರಿಂದ, ಅಲ್ಲಿ ಬಹಳ ಜನರು ಅದನ್ನು ಕುಡಿಯುತ್ತಾ ಇರುತ್ತಾರೆ. ಅದು ಚಳಿ ದೇಶಕ್ಕೆ ಬೇಕಾಗಿರುತ್ತದೆ. ನಮ್ಮ ದೇಶಕ್ಕೆ ಅದು ಬೇಕಾಗಿರುವುದಿಲ್ಲ. ಆದ್ದರಿಂದ ತಾವು ಏನು ಕಂಡಿತದ ಬಗ್ಗೆ ಒಂದು ಕಲ್ಪನೆಯನ್ನು ಈ ರಾಜ್ಯದಲ್ಲಿಟ್ಟಿದ್ದೀರಿ ಅದರ ಬಗ್ಗೆ ಪುನರ್ವಿಮರ್ಶೆಮಾಡಬೇಕು. ಹಾಗೆಯೇ ಕುಡಿತದಿಂದ ಆಗಿರತಕ್ಕ ಕೇಡು ಹಾಗೂ ಏನು ಕಷ್ಟವನ್ನು ನಮ್ಮ ಜನರಿಗೆ ತಂದಿಟ್ಟಿದೆ ಎನ್ನುವುವನ್ನು ನೋಡಬೇಕು. ಹೈಕ್ಲಾಸ್ ಕುಡಿಯುವವರ ಬಗ್ಗೆ ನಾನು ಏನೂ ಹೇಳುವುದಿಲ್ಲ. ಬಡವರ ಬಗ್ಗೆ ಕುಡಿತದಿಂದ ಎಷ್ಟರಮಟ್ಟಿಗೆ ಕೇಸುಗಳನ್ನು ಹಾಕುತ್ತಾರೆಂಬುದನ್ನು ಹೇಳುತ್ತೇನೆ. ಹಿಂದೆ ಬೆಂಗಳೂರಿನಲ್ಲಿ ಮಾಸ್ಟರ್ ಹಿರಣಯ್ಯ ಮಿತ್ರಮಂಡಲಿಯವರು ಇದರ ಬಗ್ಗೆ ಒಂದು ನಾಟಕವನ್ನು ಪ್ರದರ್ಶನ ಮಾಡಿದ್ದರು. ಬಹಳ ಚೆನ್ನಾಗಿ ಕುಡಿತದ ಬಗ್ಗೆ ಅವರು ವಿಚಾರಮಾಡಿದ್ದರು

ಶ್ರೀ ಕೋಣಂದೂರು ಲಿಂಗಪ್ಪ.—ಬಡವರನ್ನು ಹಾಗೂ ಕಾರ್ಮಿಕರನ್ನು ಯಾರು ಶೋಷಣೆ ಮಾಡುತ್ತಾರೋ ಅವರು ಇವತ್ತಿನ ದಿವಸ ರಾಕ್ಷಸರು. ಯಾರು ಅವರಿಗೆ ಸಹಾಯ ಮಾಡುತ್ತಾರೋ ಅವರು ದೇವತೆಗಳು. ಬಡವರನ್ನು ಹೇಗಾದರೂ ಮಾಡಿ ತುಳಿಯಬೇಕೆಂದು ಹೇಳುವ ಜನರು ಯಾರು ಇದ್ದಾರೋ ಅವರು ಅಸುರರು. ಇದರ ಬಗ್ಗೆ ಉದಾರವಾದ ಕಲ್ಪನೆ ನಿಮಗಿಲ್ಲ. ಒಟ್ಟಿನಲ್ಲಿ ಪ್ರೊಹಿಬಿಷನ್ ಕಾನೂನುಗಳನ್ನು ಜಾರಿಗೆ ತಂದಿಲ್ಲ ಪಾನ ಮಾಡುವುದು ನಿಲ್ಲಲಿಲ್ಲ. ಮಂತ್ರಿಗಳಲ್ಲಿ ಕೆಲವರು ಅದೇ ವರ್ಗಕ್ಕೆ ಸೇರಿದವರೆಂದರೆ ತಪ್ಪಾಗಲಾರದು. ಕಾಂಗ್ರೆಸ್ಸಿನಲ್ಲಿ ಎರಡು ವರ್ಗಗಳಿಗೂ ಇದು ಅನ್ವಯಿಸುತ್ತದೆಂದು ನಾನು ಹೇಳಿದ್ದೇನೆ. ಇದನ್ನು ಸ್ಫಟಿಕದಂತೆ ಸ್ಪಷ್ಟವಾಗಿ ತಿಳಿದುಕೊಂಡು ಕುಡಿತದಿಂದಾಗುವ ಕೇಡನ್ನು ನಿವಾರಿಸುವುದಕ್ಕೆ ಉಗ್ರವಾದ ಕಾರ್ಯಕ್ರಮವನ್ನು ಕೈಗೊಳ್ಳತಕ್ಕ ಬಗ್ಗೆ ಸರ್ಕಾರದ ನಿಲುವನ್ನು ಸ್ಪಷ್ಟಪಡಿಸಬೇಕು.

ಶ್ರೀ ಮಲ್ಲಿಕಾರ್ಜುನಸ್ವಾಮಿ.—ಈ ದೇಶದಲ್ಲಿ ಅಸುರರೇ ಜಾಸ್ತಿ ಇದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಅವರೇ ಅಧಿಕಾರಕ್ಕೆ ಬಂದು ಕುಳಿತ್ತಿದ್ದಾರೆ. ಕಡೆಯದಾಗಿ ಈ ನಿರ್ಣಯವನ್ನು ಮಂಡಿಸಿರುವ ನನ್ನ ಸ್ನೇಹಿತರು ಅದನ್ನು ವಾಪಸ್ಸು ತೆಗೆದುಕೊಳ್ಳದೆ ಹಾಗ್ಗೆಯೇ ಬಿಡಬೇಕು. ಓಟಿಗೆ ಹಾಕಬೇಕೆಂದು ಸರ್ಕಾರದಲ್ಲಿ ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು.—ಶ್ರೀ ನಾಯ್ಡು ಅವರು ಅವರ ಭಾಷಣವನ್ನು ಎರಡು ನಿಮಿಷಗಳಲ್ಲಿ ಮುಗಿಸಬೇಕು.

† ಶ್ರೀ ಕೆ. ಎಂ. ದೊರೆಸ್ವಾಮಿನಾಯ್ಡು (ಬೇತಮಂಗಲ).—ಮಾನ್ಯ ಅಧ್ಯಕ್ಷರೇ, ಈಗ ನಿಮ್ಮ ಮುಂದಿರುವ ಖಾಸಗೀ ನಿರ್ಣಯಂದ ಬಗ್ಗೆ ನಾನು ನನ್ನ ಅನುಮೋದನೆಯನ್ನು ಕೊಡುತ್ತ ಕೆಲವು ಸೂಕ್ತ ಸಲಹೆಗಳನ್ನು ಕೊಡಲಿಚ್ಛಿಸುತ್ತೇನೆ. ಈ ಪಾನ ನಿರೋಧದಿಂದ ಆಗತಕ್ಕ ಅನಹೋಗುಗಳನ್ನು ತಮ್ಮ ಮುಂದೆ ಇಡುವುದಕ್ಕೆ ಅಪೇಕ್ಷೆಪಡುತ್ತೇನೆ. ಈ ಪಾನ ನಿರೋಧವನ್ನು ಜಾರಿಗೆ ತರಬೇಕೆಂದು ಪೂಜ್ಯ ಮಹಾತ್ಮ ಗಾಂಧೀಜಿಯವರು ತಮ್ಮ ಜೀವನವನ್ನೇ ಮುಡುಪಾಗಿಟ್ಟು, ಅನೇಕ ಕಾರ್ಯಕ್ರಮಗಳನ್ನು ಕೈಗೊಂಡರು. ಉಪವಾಸ, ಸತ್ಯಾಗ್ರಹಗಳನ್ನು ಮಾಡಿದರು. ಕಾಂಗ್ರೆಸ್ಸಿನವರಲ್ಲಿ ಅನೇಕರು ಇದಕ್ಕಾಗಿ ತನು ಮನ, ಧನಗಳನ್ನು ಮುಡುಪಾಗಿಟ್ಟರು. ಆದರೆ ಪಾನ ನಿರೋಧದ ಕಾನೂನನ್ನು ಹೇಗೆ ... ಸಿದರೆಂಬುದು ಪ್ರತಿಯೊಬ್ಬರಿಗೂ ಗೊತ್ತಿದೆ. ಇದು ಏಕೆ ಯಶಸ್ವಿಯಾಗಿಲ್ಲವೆಂಬುದನ್ನು ಹೇಳುತ್ತೇನೆ. ... ನಿರೋಧಕ್ಕೆ ಇವರು ತಂದಂಥ ಕ್ರಮ ತಪ್ಪು. ಆದರೆ ಪಾನ ನಿರೋಧ ಒಳ್ಳೆಯದು. Half hearted decision of the Government is the reason, for this. The machinery of the Government is also responsible. ಗೋವಾದಲ್ಲಿ ನಡೆದ ಎ.ಐ. ... ಯಲ್ಲಿ ಇದರ ಬಗ್ಗೆ ಒಂದು ನಿರ್ಣಯ ಮಾಡಿದರು. ಅದು ಏನಾಯಿತು? ಇದರ ಬಗ್ಗೆ ತೇಕ್ ಕಮಿಟಿಯ ವರದಿಯನ್ನು ಏನು ಮಾಡಿದರು? ಇದೆಲ್ಲ ಆದರೂ ಪಾನನಿರೋಧಕ್ಕಾಗಿ ಇವರು ... ಕ್ರಮ ಸರಿಯಾಗಿಲ್ಲ. ಬಹಳ ವಿಷಾಧಕರ. ಸುಮಾರು ೨೫ ವರ್ಷಗಳಿಂದಲೂ ಈ ಪಾನನಿರೋಧವನ್ನು ಜಾರಿಗೆ ತರಲಿಲ್ಲ. ಇದರ ಬಗ್ಗೆ ಮಾನ್ಯ ಜಿ.ಪಿ. ರಾಜರತ್ನಂ ಅವರು ಹೇಳಿದ ವಿಷಯ ಈಗ ... ಅರ್ಥವಾಗುತ್ತದೆ. ಈ ಪಾನ ನಿರೋಧವನ್ನು ಜಾರಿಗೆ ತರುವಂಥ ಕಾರ್ಯದಲ್ಲಿ ಹಿಂದೆ ಅನೇಕ ... ಅನೇಕ ರಾಜಕೀಯ ಪಕ್ಷಗಳ ಮೂಲಕ ಲಾವಣಿಗಳನ್ನು ಹಾಡಿಸುತ್ತಿದ್ದರು. ಪದಗಳನ್ನು ... ದ್ದರು. ಹಿಂದಿನ ಸರ್ಕಾರ ಇದರ ಬಗ್ಗೆ ಟೆಂಪರೆನ್ಸ್ ಕಮಿಟಿಯನ್ನು ರಚನೆಮಾಡಿದ್ದರು.

(ಶ್ರೀ ಕೆ. ಎಂ. ದೊರೆಸ್ವಾಮಿನಾಯ್ಡು)

ಆದರೂ ಇದರ ಬಗ್ಗೆ ಇನ್ನೂ ಆಕ್ಟ್ ಆಗಲಿಲ್ಲ. ನಮ್ಮ ಸರ್ಕಾರಕ್ಕೆ ಬರುತ್ತಿರುವ ೨೫ ಕೋಟಿ ರೂಪಾಯಿಗಳ ಸುರಲಕ್ಷ್ಮಿ ಈಗ ಏರುತ್ತಿದೆಯೆಂದು ಕೆಲವರು ಹೇಳುತ್ತಾರೆ. ಅದು ಈಗ ಕಡಿಮೆಯಾಗುತ್ತಿದೆಯೆಂದು ಮತ್ತೆ ಕೆಲವರು ಹೇಳುತ್ತಿದ್ದಾರೆ. ನಿತ್ಯೋಪಯೋಗಕ್ಕೆ ಬೇಕಾದ ವಸ್ತುಗಳ ಮೇಲೆ ಅನಾವಶ್ಯಕವಾಗಿ ತೆರಿಗೆ ಹಾಕುವುದನ್ನು ತಪ್ಪಿಸಿ, ಲಕ್ಸುರಿ ಗೂಡ್ಸ್ ಮೇಲೆ ತೆರಿಗೆ ಹಾಕಿದರೆ ಆಗ ಮಾತ್ರ ಮಿತವ್ಯಯ ಸಾಧಿಸಬಹುದು. ಅದೂ ಅಲ್ಲದೆ ಇದಕ್ಕೆ ಬದಲಾಗಿ ಚಿಲ್ಡ್ರನ್ ಟ್ಯಾಕ್ಸ್ ಬೇಕಾದರೆ ಹಾಕಿ. ಯಾರಿಗೆ ಹೆಚ್ಚು ಮಕ್ಕಳು ಆಗುತ್ತವೋ ಅಂತಹವರಿಗೆ ಟ್ಯಾಕ್ಸ್ ಹಾಕುತ್ತೇವೆಂದು ಮಾಡಿ. ಅದರ ಜೊತೆಗೆ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಸಹ ಇದರ ಬಗ್ಗೆ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಹಣ ಬೊಕ್ಕಸದಲ್ಲಿ ಕಡಿಮೆಯಾದಾಗ, ಒಂದು ವೇಳೆ ರಾಜ್ಯಪಾಲರವರು ಮತ್ತೆ ಸೇಲ್ಸ್‌ಟ್ಯಾಕ್ಸನ್ನು ತಂದರೆ, ಅದೇ ರೀತಿಯಲ್ಲಿ ಸೂಪರ್ ಟ್ಯಾಕ್ಸ್ ಎಂಬುದನ್ನು ನೀವು ತೆಗೆದುಕೊಂಡು ಬನ್ನಿ. ಸುರಲಕ್ಷ್ಮಿ ಯಾವುದು ಇದೆಯೋ ಅದು ಕೇವಲ ಈ ಬಾಬಿನಿಂದ ಬರಬೇಕಾಗುತ್ತದೆ. ಬೇರೆ ಬಾಬುಗಳಿಂದ ಬಡ ಜನಗಳಿಂದ ಹೆಚ್ಚಿಗೆ ತೆರಿಗೆ ಹಾಕಿ ಅದನ್ನು ವಸೂಲುಮಾಡಿ ಸರ್ಕಾರದ ಬೊಕ್ಕಸವನ್ನು ತುಂಬಬೇಡಿ. ಏಕೆಂದರೆ ಅನೇಕ ಬಡ ಜನರು ತಂತಮ್ಮ ಮನೆ ಮಠಗಳನ್ನು ಮಾರಿಕೊಂಡಿದ್ದಾರೆ ಆದ ರಿಂದ ಸರ್ಕಾರದ ಬೊಕ್ಕಸವನ್ನು ಸರಿಯಾಗಿ ಮಾಡುವುದರ ನಿಮ್ಮ ಕಾರ್ಯಕ್ರಮದಲ್ಲಿ ಚಿಲ್ಡ್ರನ್ ಟಾಕ್ಸ್, ಸೇಲ್ಸ್ ಟ್ಯಾಕ್ಸ್, ಫ್ಯಾಮಿಲಿ ಪ್ಲಾನಿಂಗ್ ಇವೆಲ್ಲವನ್ನೂ ಒಂದು ಪಾರ್‌ಫ್ಲುಟಿಂಗ್‌ನಲ್ಲಿ ಎದುರಿಸಬೇಕಾಗುತ್ತದೆ. ಈ ಪಾನ ನಿರೋಧದ ಕಾನೂನನ್ನು ಪುನರ್ವಿಮರ್ಶೆಮಾಡಿ ಇದನ್ನು ಹೇಗಾದರೂ ಜಾರಿಗೆ ತರಬೇಕೆಂದು ಹೇಳುತ್ತೇನೆ. ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

‡ ಶ್ರೀ ಎಚ್. ಬಿ. ಚನ್ನಪ್ಪ (ಮಾಗಡಿ) :—ಮಾನ್ಯ ಸಭಾಪತಿಯವರೇ : ಈಗ ನಮ್ಮ ಸಭೆ ಮುಂದೆ ಮಂಡಿಸಿರತಕ್ಕ ರೆಸಲ್ಯೂಷನ್ ಏನಿದೆ ಅದನ್ನು ನಾನೂ ವಿರೋಧಿಸುತ್ತೇನೆ ಆದರೆ ಇಲ್ಲಿಯವರೆಗೂ ಏನೇನು ಅನ್ಯಾಯಗಳು ನಡೆದಿವೆ ಎಂಬುದನ್ನು ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಹಿಂದೆ ಇದ್ದ ಸರ್ಕಾರ ರಾಜ್ಯದಲ್ಲಿ ಈ ಪಾನನಿರೋಧವನ್ನು ಸಂಪೂರ್ಣವಾಗಿ ಜಾರಿಗೆ ತರಬೇಕೆಂಬ ಉದ್ದೇಶದಿಂದ ಸರ್ಕಾರಕ್ಕೆ ಈ ಬಾಬಿನಿಂದ ಬರತಕ್ಕ ವರಮಾನ ನಿಂತು ಹೋಗುವುದರಿಂದ ಆ ವರಮಾನವನ್ನು ಸರಿಗಟ್ಟಿಕೊಳ್ಳತಕ್ಕ ಬಗ್ಗೆ ಮಾರಾಟ ತೆರಿಗೆಯನ್ನು ಜನರ ಮೇಲೆ ಹೇರಿದರು. ಆದರೆ ವಾಸ್ತವಾಂಶ ನೋಡುವುದರಲ್ಲಿ ಜನರು ಕುಡಿಯುವುದನ್ನು ಬಿಡಲಿಲ್ಲ. ಇದು ಇನ್ನೂ ಜಾಸ್ತಿಯಾಯಿತು. ಒಬ್ಬರನ್ನು ನೋಡಿ ಮತ್ತೊಬ್ಬರು ಕುಡಿಯುವುದಕ್ಕೆ ಪ್ರಾರಂಭಮಾಡಿದರು. ಪಾನನಿರೋಧವನ್ನು ಜಾರಿಗೆ ತಂದ ಮೇಲೆ ಇದು ರಾಜ್ಯದಲ್ಲಿ ಕಡಮೆಯಾಗುವುದರ ಬದಲು ಅಧಿಕವಾಗುವುದಕ್ಕೆ ಪ್ರಾರಂಭವಾಯಿತು. ಮನೆ ಮನೆಗಳಲ್ಲೂ ವನಗಳಲ್ಲೂ ಕಳ್ಳಬಟ್ಟಿ ಸಾರಾಯಿ ತಯಾರಿ ಜಾಸ್ತಿಯಾಯಿತು ಹೀಗಾಗಿ ಸರ್ಕಾರಕ್ಕೆ ಈ ಬಾಬಿನಿಂದ ಬರುತ್ತಿದ್ದ ವರಮಾನ ಒಂದು ಕಡೆ ತಪ್ಪಿದ್ದಲ್ಲದೆ ಇನ್ನೊಂದು ಕಡೆ ಅನೇಕರು ಇದನ್ನು ಕುಡಿದು ನಾನಾ ಕಾಯಿಲೆಗಳನ್ನು ತಂದುಕೊಂಡರು ಆದ್ದರಿಂದ ಇದನ್ನು ಕಾನೂನಿನ ಮೂಲಕ ನಿಲ್ಲಿಸುತ್ತೇವೆಂದರೆ ಸಾಧ್ಯವಿಲ್ಲ ಜನರಿಗೆ ಇದನ್ನು ಕುಡಿದರೆ ಹಾನಿಯಾಗುತ್ತದೆಂಬುದು ಮನವರಿಕೆಯಾದರೆ ಆಗ ಅವರೇ ಕೈ ಬಿಡುತ್ತಾರೆ ಈ ದಿವಸ ಯಾರು ಯಾರು ಕುಡಿಯುವುದನ್ನು ಅಭ್ಯಾಸಮಾಡಿಕೊಂಡಿದ್ದಾರೆ, ಅವರಿಗೆ ಮುಖ್ಯವಾಗಿ ಇದು ನಮಗೆ ಗೌರವ ಮರ್ಯಾದೆಗಳನ್ನು ತರತಕ್ಕದ್ದಲ್ಲ ಮತ್ತು ಇದರಿಂದ ನಮ್ಮ ಆರೋಗ್ಯ ಹಾಳಾಗುತ್ತದೆ ಎಂಬ ಅಂಶ ಅವರ ಮನಸ್ಸಿಗೆ ನಾಟದ ವಿನಾ ಏನೂ ಮಾಡಿದರೂ ಜನರು ಕುಡಿಯುವುದನ್ನು ಬಿಡುವುದಿಲ್ಲ. ಆದರೆ ಇದರಲ್ಲಿ ಒಂದು ವಿಷಯ ಏನೆಂದರೆ ತೀರಾ ಕೆಳದರ್ಜೆಯಲ್ಲಿರತಕ್ಕ ಜನರು ಮತ್ತು ಈ ದಿವಸ ಯಾರು ದಿನವೆಲ್ಲಾ ಕಷ್ಟಪಟ್ಟು ದುಡಿಯುತ್ತಿದ್ದಾರೆ ಅಂಥ ಕಷ್ಟಸಹಿಷ್ಣು ಜನರಿಗೆ ಕುಡಿಯುವುದು ಒಂದು ಬಿಟ್ಟರೆ ಅವರಿಗೆ ಬೇರೇನೂ ಮನರಂಜನೆ ಇರುವುದಿಲ್ಲ. ಮೇಲಾಗಿ ಅವರಿಗೆ ದಿನವೆಲ್ಲಾ ದುಡಿದಿರತಕ್ಕ ಮೈನೋವಿಗೆ ಅವರು ಕುಡಿಯದಿದ್ದರೆ ವಿಧಿ ಇಲ್ಲ, ಅಂಥ ಒಂದು ಮೈನೋವಿನ ಪರಿಹಾರ ಇದರಿಂದಾಗುತ್ತದೆಂದು ಅವರು ಈ ದಿವಸ ಹೆಂಡ ಸಾರಾಯಿ ಕುಡಿಯುವುದನ್ನು ಜಾರಿಯಲ್ಲಿಟ್ಟುಕೊಂಡಿದ್ದಾರೆ. ಇಂಥ ಸನ್ನಿವೇಶ ಇರುವಾಗ ಇದನ್ನು ಕಾನೂನಿನ ಮೂಲಕ ರದ್ದು ಮಾಡುವುದಕ್ಕಾಗುವುದಿಲ್ಲ. ಮನಸ್ಸಿನ ಪರಿವರ್ತನೆಯಿಂದ ಸಾಧ್ಯವಾಗಬೇಕೇ ವಿನಾ ಇದಕ್ಕೆ ಬೇರೆ ಮಾರ್ಗಗಳೇ ಇರುವುದಿಲ್ಲ. ಹಿಂದೆ ಮಹಾತ್ಮಾ ಗಾಂಧೀಜಿಯವರು ಕೂಡ ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಹೋಗಿದ್ದಾಗ, ಅಲ್ಲಿ ಅವರು ಕೂಡ ಒಂದೆರಡಾವರ್ತಿ ಕುಡಿದಿದ್ದರಂತೆ. ಆದರೆ ನಾನು ಕುಡಿಯುವುದಿಲ್ಲ ಎಂದು ತಾಯಿಗೆ ವಚನ ಕೊಟ್ಟಿದ್ದೆನಲ್ಲಾ ಎಂಬುದನ್ನು ಜ್ಞಾಪಿಸಿಕೊಂಡು ಅವರ ಮನಸ್ಸನ್ನು ಪರಿವರ್ತನೆ ಮಾಡಿಕೊಂಡಿದುದರಿಂದ ಅವರು ಅದನ್ನು ಕೈಬಿಟ್ಟರು. ಆದ್ದರಿಂದ ಈ ದಿವಸ ಎಲ್ಲೆಲ್ಲಿ ರಾಜ್ಯದಲ್ಲಿ ಕೂಲಿಗಾರ ಜನರಿದ್ದಾರೋ ಅಲ್ಲಿ ಸರ್ಕಾರದವರು ಆ ಜನರ ಮನೋ ಪರಿವರ್ತನೆ ಆಗುವಂತೆಮಾಡುವುದಕ್ಕೆ ರಾಮಮಂದಿರಗಳನ್ನು ಕಟ್ಟಿಸಿ ಭಜನೆ ಮತ್ತು ಕಥಾ

ಕಾಲಕ್ಷೇಪಗಳನ್ನು ನಡೆಸುವುದಕ್ಕೆ ಏರ್ಪಾಡನ್ನು ಮಾಡುವುದು ಒಂದೇ ಮಾರ್ಗ ಅಲ್ಲದೆ ಕೆಲವು ಚಿತ್ರಗಳ ಮೂಲಕ ಕುಡಿತದಿಂದ ಆಗತಕ್ಕ ಹಾನಿಗಳೇನೇನು ಎಂಬುದನ್ನು ಅವರಿಗೆ ಪ್ರದರ್ಶನ ಮಾಡಿಸಿ ಅವರ ಮನೋಭಾವಗಳು ಪರಿವರ್ತನೆ ಆಗುವಂತೆ ಮಾಡಬೇಕು. ಹಿಂದೆ ಇದನ್ನು ಒಂದು ತಾಲ್ಲೂಕಿನಲ್ಲಿ ಜಾರಿಯಲ್ಲಿಟ್ಟು ಇನ್ನೊಂದು ತಾಲ್ಲೂಕಿನಲ್ಲಿ ಕುಡಿತವನ್ನು ರದ್ದು ಮಾಡಿದರು, ಆದರಿಂದ ಜನರಿಗೆ ನಾನಾ ರೀತಿಯಲ್ಲಿ ಕಷ್ಟ ನಷ್ಟಗಳಾದವು ಬಹಳ ಜನರು ಅನ್ಯಾಯವಾಗಿ ಅಪರಾಧಗಳಿಗೊಳಗಾದರೂ ಇದನ್ನೆಲ್ಲಾ ಮನಗಂಡೇ ಹಿಂದಿದ್ದ ಸರ್ಕಾರ ಮತ್ತೆ ಇದನ್ನು ಜಾರಿಗೆ ತಂದರು. ಆದರೆ ಈ ದಿವಸ ಇದನ್ನು ತಡೆಗಟ್ಟತಕ್ಕ ಸೋಗಿನಲ್ಲಿ ಸರ್ಕಾರ ಮತ್ತೆ ಜನರ ಮೇಲೆ ತೆರಿಗೆ ಹಾಕಬೇಕೆಂದು ಕೆಲವರೇನು ಇಲ್ಲಿ ಹೇಳಿದ್ದಾರೆ. ಅದಕ್ಕೆ ನಾನು ಬದ್ಧ ವಿರೋಧಿ ಒಪ್ಪುವುದಿಲ್ಲ. ಜನರು ಇದನ್ನು ಕಟುವಾಗಿ ವಿರೋಧಿಸುತ್ತಾರೆ. ಒಂದೇ ಬಾಬಿನ ವಿಷಯಕ್ಕೆ ಜನರ ಮೇಲೆ ಎರಡಾವರ್ತಿ ತೆರಿಗೆ ಹಾಕುವುದು ನ್ಯಾಯವಾದ್ದೂ ಅಲ್ಲ. ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

‡ ಶ್ರೀ ಕೆ. ಶ್ರೀರಾಮುಲು ಗಾಂಧಿನಗರ:—ಮಾನ್ಯ ಅಧ್ಯಕ್ಷರೇ: ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿದಕ್ಕಾಗಿ ತಮಗೆ ನನ್ನ ಮೊದಲನೆ ವಂದನೆಗಳು. ಈ ವಿಚಾರದಲ್ಲಿ ಈಗಾಗಲೇ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಕಾಂಗ್ರೆಸ್ಸಿನ ಪ್ರತಿನಿಧಿಗಳಾಗಿ, ಕ್ರಿಯಾ ಸಮಿತಿಯ ಸದಸ್ಯರಾಗಿರತಕ್ಕ ಕಾಂಗ್ರೆಸ್ ಜನರು ಮದ್ಯವನ್ನು ಕುಡಿಯಬಾರದು ಅಂತ ಹೇಳುವುದಷ್ಟೇ ಅಲ್ಲ. ಕುಡಿಯುತಕ್ಕ ಹೌಸಿನಲ್ಲೂ ಕೂಡ ನಾವಿರಬಾರದು ಎಂಬುದು ನಮ್ಮ ತತ್ವ ಈ ಹಿಂದೆ ನಡೆದ ಚುನಾವಣೆಯಲ್ಲಿ ಜನರಿಗೆ ಕುಡಿತವನ್ನು ರದ್ದು ಮಾಡುತ್ತೇವೆಂದು ಹೇಳಿ ವಚನವನ್ನು ಕೊಟ್ಟು ಆರಿಸಿ ಬಂದಿರತಕ್ಕ ಜನರು ನಾವು ಹಾಗಿರುವಾಗ ಇಲ್ಲಿ ಯಾರಾದರೂ ಈ ದಿವಸ ಇದಕ್ಕೆ ವಿರೋಧವಾಗಿ ವಾದ ಮಾಡಿದರೆ ಅವರು ಕಾಂಗ್ರೆಸ್ ಸದಸ್ಯರೇ ಅಲ್ಲ ಎಂದು ನಾನು ಹೇಳುತ್ತೇನೆ. ಮೇಲಾಗಿ ಯಾರೋ ಒಬ್ಬ ಸದಸ್ಯರು ಈ ನಿರ್ಣಯವನ್ನು ತಂದಿರತಕ್ಕವರೂ ಕೂಡ ಕುಡುಕರೇ ಎನ್ನುವ ರೀತಿ ಹೇಳಿದರು ನಾನು ಆ ಮಾತನ್ನು ಕೇಳಿ ಬಹಳ ನೊಂದಿದ್ದೇನೆ. ಏನೋ ತಿಳಿಯದವರು ಹಾಗೆ ಮಾತನಾಡಿದ್ದಾರೆ ಎಂದು ಅದನ್ನು ಅಷ್ಟು ಸುಲಭವಾಗಿ ನಾನು ಕೈಬಿಡತಕ್ಕವನಲ್ಲ. ಕಾರ್ಮಿಕರ ಮತ್ತು ಮುನಿಸಿಪಾಲಿಟಿಯಲ್ಲಿ ಇರತಕ್ಕ ಹರಿಜನರಿಗೆ ಕುಡಿಯಲೇಬೇಕೆಂದು ನೀವು ಈ ಪದ್ಧತಿಯನ್ನು ಇಟ್ಟುಕೊಂಡಿದ್ದೀರಿ. ಸರ್ಕಾರಕ್ಕೆ ಈ ದಿವಸ ಈ ಹರಿಜನರಿಂದ ೨೮ ಕೋಟಿ ರೂ. ವರಮಾನ ಬರುತ್ತದೆ ಇರಲಿ ಇದನ್ನು ಮುಂದುವರಿಸೋಣ ಅನ್ನತಕ್ಕ ಜನ ನಾವಲ್ಲ. ನಮ್ಮದು ಅಂತ ಕಾಂಗ್ರೆಸ್ ಅಲ್ಲ ಇದರಿಂದ ಬರತಕ್ಕ ೨೫ ಕೋಟಿ ರೂಪಾಯಿಗಳ ಉತ್ಪಾದನೆ ನಿಂತರೆ ಅದನ್ನು ಪಡೆಯಲು ಇನ್ನೂ ಅನೇಕ ಮಾರ್ಗಗಳಿದೆ. ಖಂಡಿತವೇ ಇರಲ್ಲಿ ಅನ್ನತಕ್ಕ ವಾದ ಮಾಡುವ ಕಾಲ ಈಗಿಲ್ಲ ಇಂಥ ವಾದಗಳನ್ನು ನಾನು ಒಪ್ಪುವುದಿಲ್ಲ. ನಾನ ಈ ನಿರ್ಣಯವನ್ನು ತೀರ್ಮಾನ ಮಾಡಲು ಮತಕ್ಕೆ ಹಾಕಬೇಕೆಂದು ಒತ್ತಾಯ ಮಾಡುತ್ತೇನೆ.

12 NOON

‡ ಶ್ರೀ ಎಸ್. ಹಮೀದ್‌ಷಾ (ಶಿವಾಜಿನಗರ) :—ಮಾನ್ಯ ಅಧ್ಯಕ್ಷರೇ, ಮಾನ್ಯ ಜಯಪ್ರಕಾಶ ನಾರಾಯಣರವರು ಮಂಡಿಸಿರುವ ನಿರ್ಣಯವನ್ನು ಅನುಮೋದಿಸುತ್ತಾ ಎರಡು ಮಾತುಗಳನ್ನು ಹೇಳುತ್ತೇನೆ. ಮಹಾತ್ಮ ಗಾಂಧಿಯವರನ್ನು ಒಂದು ಸಾರಿ ಗೋಡ್ಸೆ ಕೊಂದ ನಾವು ಪಾನದ ಒಂದೊಂದು ಡ್ರಾಪ್ ಕೂಡ ಒಂದೊಂದು ಗುಂಡು ಎಂದು ತಿಳಿದಿದ್ದೇವೆ. ಪಾನ ಮಾಡಲು ಅವಕಾಶ ಕೊಟ್ಟಿರುವುದರಿಂದ ಇಂದು ಗಾಂಧಿ ತತ್ವಕ್ಕೆ ಒಂದೊಂದು ಗುಂಡು ಹಾರಿಸುತ್ತಿದ್ದೇವೆ. ಗಾಂಧಿಯವರನ್ನು ಒಂದೇ ಸಲ ಗೋಡ್ಸೆ ಸಾಯಿಸಿದ ಗಾಂಧಿ ತತ್ವವನ್ನು ಇಂದು ನಾವು ಅನುಸರಿಸುವುದಾಗಿ ಹೇಳುತ್ತಿದ್ದೇವೆ. ಭಾರತದಲ್ಲಿ ರಂವ ಮುಸ್ಲಿಮರಲ್ಲಿ ನಾನೂ ಒಬ್ಬ ಮುಸ್ಲಿಂ ಸೇಂದಿ ಸಾರಾಯಿ ಇದೆಲ್ಲಾ ನಿಷಿದ್ಧವಾದುದು. ಆದುದರಿಂದ ಯಾರೇ ಆಗಲಿ ತಿಳಿವಳಿಕೆ ಇಲ್ಲದೆ ಕುಡಿದು ಹಾಳಾಗುವವರಿಗೆ ಅವರು ಕುಡಿಯದಂತೆ ನೋಡಿಕೊಂಡು ಉತ್ತಮವಾದ ರೀತಿಯಲ್ಲಿ ಬದುಕಲು ಸಹಾಯ ಮಾಡುವುದು ಅವರ ಆದ್ಯಕರ್ತವ್ಯ. ನಾನೂ ಹಾಗೆ ಮಾಡುತ್ತೇನೆ. ಎಲ್ಲರೂ ಬೆಳಿಗ್ಗೆ ಸ್ನಾನಮಾಡಿ ಗಾಂಧಿ ಟೋಪಿ ಹಾಕುವರು, ಸಾಯಂಕಾಲ ಅದೇ ಟೋಪಿ ಶೇಂದಿ ಟೋಪಿಯಾಗುವುದು. ದೇವರ ಜೀವನಹಳ್ಳಿಯಲ್ಲಿ ಎರಡು ಕಡೆ ಇಲ್ಲಿ ಸಿಟ್ ಲಿಕ್ಕರ ಷಾಪುಗಳಿವೆ, ರೈಡ್ ಮಾಡಿ ಎಂದು ಈ ದಿವಸ ಬೆಳಿಗ್ಗೆ ಡಿ. ಸಿ. ಪಿ. ಗೆ ಫೋನ್ ಮಾಡಿದೆ; ಒಂದು ಕಡೆ ಇಲ್ಲಿಸಿಟ್ ಲಿಕ್ಕರ್ ಇನ್ನೊಂದು ಕಡೆ ಸರಕಾರಿ ಲಿಕ್ಕರ್. ಇದು ಸರಿಯಲ್ಲ. ಆದುದರಿಂದ ಸರಿಯಾದ ಕಾನೂನು ತಂದು ಕುಡಿತವನ್ನು ನಿಲ್ಲಿಸಬೇಕು. ಬೊಕ್ಕಸಕ್ಕೆ ಹಣ್ಣವಿಲ್ಲವೆಂದು ಹೇಳುತ್ತೀರಿ. ಬೇಕಾದರೆ ಒಪೊಬರಿಗೆ ೧೦ ಪೈಸೆ ತೆರಿಗೆ ಹಾಕಿದರೆ ಒಪ್ಪಬಹುದು, ಅವರ ಕುಡಿತಕ್ಕೆ ಅವಕಾಶ ಮಾಡುವುದನು ಒಪ್ಪುವುದಕ್ಕಾಗುವುದಿಲ್ಲ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

‡ ಶ್ರೀ ಬಿ. ಬಸವಲಿಂಗಪ್ಪ (ನಗರಾಡಳಿತ ಶಾಖೆಯ ಮಂತ್ರಿಗಳು):—ಮಾನ್ಯ ಸಭಾಗತಿಗಳೇ ಮಾನ್ಯ ಸದಸ್ಯರಾದ ಶ್ರೀ ಜಯ ಪ್ರಕಾಶ ನಾರಾಯಣರವರು ಒಂದು ಮಹತ್ತರವಾದ ಗೊತ್ತುವಳಿಯನ್ನು ತಂದಿದ್ದಾರೆ. ಅದರ ಒಂದು ಸಫಲತೆ ಮತ್ತು ಉದ್ದೇಶದ ಬಗ್ಗೆ ಯಾರಿಗೂ ಭಿನ್ನಾಭಿಪ್ರಾಯವಿಲ್ಲ ಈ ಬಗ್ಗೆ ಸಾರ್ವಜನಿಕ ಕ್ಷೇತ್ರದಲ್ಲಿ ಖಚಿತವಾದ ಅಭಿಪ್ರಾಯವಿದೆ ಆದರೆ ಸರಕಾರದ ಪರವಾಗಿ ಉತ್ತರ ಕೊಡುವಾಗ ನಾನು ಮಂತ್ರಿಯಾಗಿ ಉತ್ತರ ಕೊಡಬೇಕು, ಆದುದರಿಂದ ಕೊಡುತ್ತೇನೆ. ಆದರೆ ಹಾಗೆ ಹೇಳಿದಮಾತ್ರಕ್ಕೆ ನನಗೆ ಈ ಒಂದು ತತ್ವದಲ್ಲಿ ನಂಬಿಕೆಯಿಲ್ಲ ಎಂದು ಅರ್ಥವಾಗುವುದಿಲ್ಲ ನಾವು ಯಾವತ್ತೂ ನಂಬಿಕೆ ಇಟ್ಟುಕೊಂಡಿದ್ದೇವೆ ಅದನ್ನು ಯಾವ ಕಾಲಕ್ಕೆ ಯಾವ ರೀತಿ ಜಾರಿಗೆ ತರಬೇಕು ಹೇಗೆ ಮಾಡಬೇಕು. ಎಂಬ ವಿಷಯ ಸರಕಾರದ ಆಲೋಚನೆ ಮಾಡುತ್ತಿದೆ. ಈ ಪಾನ ನಿರೋಧದ ಅನುಭವ ಎಲ್ಲರಿಗೂ ಇದೆ. ನಿರೋಧ ಮಾಡಿದಾಗ ಏನಾಯ್ತು ಎಂಬ ಅನುಭವವಿದೆ. ನಿರೋಧವನ್ನು ತೆಗೆದಾಗ ಏನಾಯ್ತು ಎಂಬ ಅನುಭವವು ಇದೆ. ಪಾನ ರದ್ದು ಮಾಡಿದಾಗ ರಾಜ್ಯದಾದ್ಯಂತ ಅನೇಕವಾಗಿ ಕಳ್ಳಭಟ್ಟಿ ಸಾರಾಯಿ ತಯಾರಾಗಿ ಅವ್ಯವಹಾರ ಸಾಕಷ್ಟು ನಡೆದಿದೆ, ಇದರ ಬಗ್ಗೆ ಈ ಸಭೆಯಲ್ಲಿ ಹತ್ತಾರು ವರ್ಷ ಚರ್ಚೆಯಾಗಿದೆ. ಹಿಂದೆ ನಿರೋಧವಿದ್ದಾಗ ಅದನ್ನು ತೆಗೆದು ಹಾಕಬೇಕು ಆದರಿಂದ-ಅಧಿಕಾರಿಗಳು ಲಂಚಕೋರರಾಗಿರುವರು ಎಂಬ ಬೇಡಿಕೆ ಬಂತು. ಏನೇ ಆಗಲಿ ಪಾನನಿರೋಧವನ್ನು ಮುಂದುವರಿಸುವುದು ಕರ್ತವ್ಯವಾಗಿತ್ತು. ಮಾನ್ಯ ಮಿತ್ರರಾದ ದಿಗಂಬರರಾವ್ ಅವರು ಅರ್ಟಿಕಲ್ ೩೭ರ ವಿಚಾರ ಪ್ರಸ್ತಾಪಿಸಿದ್ದಾರೆ. ೪೭ನೇ ಆರ್ಟಿಕಲ್ ವಿಚಾರ ಕೂಡ ಪ್ರಸ್ತಾಪಿಸಿದ್ದಾರೆ ಇದರಲ್ಲಿ ಭಿನ್ನಾಭಿಪ್ರಾಯವಿಲ್ಲ. ನಾವು ಡೈರೆಕ್ಟಿವ್ ಪ್ರಿನ್ಸಿಪಲ್ಸ್ ಪ್ರಕಾರ ನಿಷ್ಠೆಯಿಂದ ಸ್ವಾತಂತ್ರ್ಯ ಬಂದಾಗಿನಿಂದ ಮತ್ತು ರಾಜ್ಯಾಂಗ ಜಾರಿಗೆ ಬಂದಾಗಿನಿಂದ ನೀತಿಯನ್ನು ಜಾರಿಗೆ ತರಲು ಪ್ರಯತ್ನಿಸಿದ್ದೇವೆ. ಸರಿಯಾಗಿ ಅದನ್ನು ಜಾರಿಗೆ ತಂದಿದ್ದರೆ ಸಮಸ್ಯೆ ಪೂರ್ಣವಾಗಿ ಬಗೆಹರಿಯುತ್ತಿತ್ತು. ಡೈರಕ್ಟಿವ್ ಪ್ರಿನಸಿಪಲ್ಸ್‌ನಲ್ಲಿ ಅಷ್ಟಾಗಿ ನಂಬಿಕೆ ಇಲ್ಲವೆಂದು ನಿಷ್ಠೆಯಿಲ್ಲದೆ ಅಧಿಕಾರದಲ್ಲಿ ಅಥವ ಮಂತ್ರಿ ಮಂಡಲದಲ್ಲಿ ಇದ್ದುದರಿಂದ ರಾಜ್ಯಾಂಗವನ್ನು ಸೃಷ್ಟಿ ಮಾಡಿದವರ ಉದ್ದೇಶವೇನಿತ್ತೋ ಅದು ಇಂದು ಸಫಲವಾಗಿಲ್ಲ ಪಾನನಿರೋಧವನ್ನು ಜಾರಿಗೆ ತಂದ ಮೇಲೆ ಕೆಲವು ಕಾಲದ ನಂತರ ಹಿಂದೆ ಮುಖ್ಯಮಂತ್ರಿಗಳಾಗಿದ ನಿಜಲಿಂಗಪ್ಪನವರು ಅಧಿಕಾರದಲ್ಲಿದ್ದಾಗ ಪಾನನಿರೋಧವನ್ನು ತೆಗೆದು ಹಾಕಬೇಕೆಂದು ನಿರ್ಧಾರ ಮಾಡಿದರು. ಮಹಾತ್ಮ ಗಾಂಧಿಯವರ ತತ್ವವನ್ನು ಅಭ್ಯಾಸ ಮಾಡಿದವರು ಮತ್ತು ಅವರ ಅನುಯಾಯಿಗಳೆಂದು ಹೇಳುತ್ತಿದ್ದರು. ಅಂಥವರು ಮುಖ್ಯಮಂತ್ರಿಗಳಾಗಿದ್ದಾಗ ಪಾನ ನಿರೋಧವನ್ನು ರದ್ದು ಮಾಡಬೇಕೆಂದು ತೀರ್ಮಾನ ಮಾಡಿರುವುದು ದುರದೃಷ್ಟಕರ. ಆಗ ನಾನು ಈ ಸಭೆಯಲ್ಲಿರಲಿಲ್ಲ. ನಾನು ಸಮಾಜ ಕಾರ್ಯ ಕರ್ತನಾಗಿದ್ದಾಗಿ ಹೆಂಡದ ಅಂಗಡಿಯ ಮುಂದೆ ನಿಜಲಿಂಗಪ್ಪನವರ ಫೋಟೋ ಇಟ್ಟಿದುದನ್ನು ನೋಡಿದ್ದೇನೆ. ಹಿಂದಿನವರು ಅನ್ಯಾಯ ಮಾಡಿದರು, ನೀವು ಕುಡಿಯುವಲು ಅವಕಾಶ ಮಾಡಿಕೊಟ್ಟಿರಿ, ಇದ್ದಕ್ಕೆ ಗೌರವ ತೋರಿಸಲು ನಿಮಗೆ ಒಂದು ಬಾಟಲು ಹುಯ್ಯುತ್ತೇವೆ. ಎಂದು ಕುಡಿಯುವರು ಅವರ ಚಿತ್ರದ ಮೇಲೆ ಹುಯ್ದಿರುವುದನ್ನು ನೋಡಿದ್ದೇನೆ. ಕುಡಿಯುವವರಿಗೆ ಕುಡಿತದಲ್ಲಿ ನಿಷ್ಠೆಯಿರುವವರಿಗೆ ಒಂದು ಬಾಟಲು ಸುರಿದರೆ ತಮಗೆ ಆದರಿಂದ ನಷ್ಟ ಎಂಬ ಗಮನವಿಲ್ಲ. ಹೀಗೆ ಸುರಿದಿರುವುದನ್ನು ನೋಡಿರುವುದಲ್ಲದೆ ಕೇಳಿದ್ದೇನೆ. ನೀತಿನಿಯಮಗಳಲ್ಲಿ ಧರ್ಮ ನಿಷ್ಠೆ ಇಲ್ಲದಿರುವಾಗ ಇಂಥ ಕೆಲಸವಾಗುವುದು ಈಗೇನು ಮಾಡಬೇಕೆಂಬುದನ್ನು ಜನರು ಯೋಚನೆ ಮಾಡಬೇಕು. ನೀತಿಗೆ ವಿರುದ್ಧವಾಗಿ ನಡೆದುದನ್ನು ಪ್ರತಿಭಟಿಸಿ ಯಶೋಧರ ದಾಸಪ್ಪನವರು ರಾಜೀನಾಮೆ ಕೊಟ್ಟರು ಮಹಾತ್ಮ ಗಾಂಧಿಯವರ ಶಿಷ್ಯರಾಗಿ ಕಾಂಗ್ರೆಸ್ ಹೆಸರಿನಲ್ಲಿ ರಾಜ್ಯಭಾರ ಮಾಡುವಾಗ ಪಾನನಿರೋಧವನ್ನು ರದ್ದು ಮಾಡಿದುದು ಸರಿಯಲ್ಲವೆಂದು ಅವರು ರಾಜಿನಾಮೆ ಕೊಟ್ಟರು ಪಾನನಿರೋಧದ ವಿಚಾರದಲ್ಲಿ ನನ್ನ ಅಭಿಪ್ರಾಯವನ್ನು ಖಚಿತವಾಗಿ ಹೇಳಿದ್ದೇನೆ ಮನುಷ್ಯರು ಪ್ರಜಾ ಜೀವಿಗಳು. ಹಾಗಿರುವಾಗ ಅವರನ್ನು ಪ್ರಜ್ಞಾಹೀನರನ್ನಾಗಿ ಮಾಡುವುದು ಸರಿಯಲ್ಲ.

ಪ್ರಜ್ಞಾಹೀನರಾಗತಕ್ಕಂಥಾದ್ದು ಸರಿಯಲ್ಲ. ನನ್ನ ದೃಢಸಂಕಲ್ಪದಿಂದ ಹೇಳುವುದಾದರೆ ಪ್ರಪಂಚದಲ್ಲಿ ನೋಡಿದರೆ ಕೆಲವರು ಪ್ರಜ್ಞಾಹೀನರಾಗಿರಬೇಕು. ಈ ಮಾನವೀಯ ಜನತೆ ಕಾತುರಪಡುತ್ತಿದ್ದಾರೆ ಎಂದು ಕಾಣುತ್ತದೆ. ಅಮೇರಿಕಾ ದೇಶದಲ್ಲಿ ಅವರೂ ಕೂಡ ಇದನ್ನು ತೆಗೆಯಬೇಕೆಂದು ಪ್ರತಿಯೊಂದು ಮನೆಯಲ್ಲೂ ಕೂಡ ಶುರು ಮಾಡಿದರು ಅನಂತರ ಹೆಚ್ಚು ಕಳ್ಳಭಟ್ಟಿ ತಯಾರಾಗಿ ಪೋಲಿಸರು ಎಲ್ಲರನ್ನೂ ಹಿಡಿದುಕೊಂಡು ಬಂದರು. ಪ್ರತಿಯೊಬ್ಬರು ಕುಡಿಯುವುದಾದರೆ ಎಲ್ಲರನ್ನೂ ಕೂಡಿ ಹಾಕುವುದಕ್ಕೆ ಜೈಲಿನಲ್ಲಿ ಸ್ಥಳ ಎಷ್ಟು ಸಾಕಾಗುತ್ತದೆ ? ಅದಕ್ಕೋಸ್ಕರ ಬೇರೆ ಒಂದು ಜೈಲು ಸೃಷ್ಟಿ ಮಾಡಬೇಕಾಯಿತು. ಆದರೆ ನಮ್ಮ ದೇಶದಲ್ಲಿ ಅಂಥಾದ್ದೇನೂ ಇಲ್ಲ ಎಂದು ನನಗೆ ಅನಿಸುತ್ತದೆ. ಈ ಒಂದು ದಿಶೆಯಲ್ಲಿ-ಸರ್ಕಾರ ಪ್ರಯತ್ನ ಮಾಡಬೇಕು. ಅಜ್ಞರನ್ನು ಪ್ರಾಜ್ಞರನ್ನಾಗಿ ಮಾಡಬೇಕಾಗಿದೆ. ಇಲ್ಲಿ ಪಾನನಿರೋಧ ತಂದರೆ ಅವರು ಕುಡಿಯುವುದು ಕಡಿಮೆಯಾಗುತ್ತದೆಯೋ ಎನ್ನುವುದನ್ನು ನೋಡಬೇಕು. ಪಕ್ಕದ ನೆರೆ ರಾಜ್ಯವಾದ ತಮಿಳುನಾಡಿನವರು ನಮಗಿಂತಲೂ ಕಟ್ಟುನಿಟ್ಟಾಗಿ ಪಾನನಿರೋಧ ಜಾರಿಗೆ ತಂದರು. ಆಗ ಅಲ್ಲಿಯ ಜನರು ಇಲ್ಲಿಗೆ ಬಂದು ಕುಡಿಯುತ್ತಿದುದನ್ನು ನಾನು ನೋಡಿದ್ದೇನೆ.

ಶ್ರೀ ಕೋಣಂದೂರು ಲಿಂಗಪ್ಪ .—ಮದ್ರಾಸ್‌ನಿಂದ ಬಂದು ಬೆಂಗಳೂರಿನಲ್ಲಿ ಕುಡಿಯಬೇಕಾದರೆ ಶ್ರೀಮಂತರು ಹೋಗುತ್ತಾರೆಯೇ ವಿನಾ ಬಡವರು ಹೋಗುವುದಿಲ್ಲ. ಇದರಿಂದ ಬಡವರು ಉದ್ಧಾರವಾಗುತ್ತಾರಲ್ಲಾ.

ಶ್ರೀ ಬಿ. ಬಸವಲಿಂಗಪ್ಪ .—ಇಲ್ಲಿ ಪಾನನಿರೋಧ ಜಾರಿಗೆ ತಂದರೆ ಪಕ್ಕದ ರಾಜ್ಯದಲ್ಲಿ ಹೋಗಿ ಕುಡಿಯುತ್ತಾರೆ. ಇದು ಏನಾಗುತ್ತದೆ ಎಂದರೆ ಇವರೆಲ್ಲರೂ ಹೋಗಿ ಅಲ್ಲಿ ಕುಡಿಯಲಿಕ್ಕೆ ಹತ್ತುತ್ತಾರೆ. ಪಕ್ಕದ ರಾಜ್ಯದವರು ಪಾನನಿರೋಧ ಜಾರಿಗೆ ತಂದರೆ ಅವರು ಇಲ್ಲಿಗೆ ಬಂದು ಕುಡಿಯುತ್ತಾರೆ. ಇದೇ ಕೆಲಸ ಅವರು ಮಾಡುವುದಾದರೆ ಆಗ ನಾವು ಸ್ವಲ್ಪ ಯೋಚನೆ ಮಾಡತಕ್ಕ ಪ್ರಸಂಗ ಬರುತ್ತದೆ. ಪಾನನಿರೋಧ ಎಲ್ಲಾ ಕಡೆಯೂ ಇರುವುದರಿಂದ ಇಲ್ಲಿ ನಮ್ಮನ್ನು ಕಿತ್ತುಹಾಕಿ ಎಂದು ಹೇಳುವುದು ಸರಿ ಎನಿಸುವುದಿಲ್ಲ. ಈ ಪಾನನಿರೋಧವನ್ನು ಕಿತ್ತು ಹಾಕಿದರೆ ಇದರ ಪರಿಣಾಮ ಏನಾಗುತ್ತದೆ ಅದನ್ನು ಅರಿತುಕೊಂಡು ಮುಂದಿನ ಹೆಜ್ಜೆ ಇಡಬೇಕು ಎಂದು ಹೇಳುತ್ತೇನೆ.

ಶ್ರೀ ಕೆ. ಪ್ರಭಾಕರ್ .—ಈ ಬಗ್ಗೆ ಕೇಂದ್ರ ಸರ್ಕಾರದವರನ್ನು ಕೇಳಿ ಮಾಡಬಹುದಲ್ಲಾ.

ಶ್ರೀ ಬಿ. ಬಸವಲಿಂಗಪ್ಪ .—ಇದರ ಬಗ್ಗೆ ಟೇಕ್‌ಚಂದ್ ಕಮಿಟಿಯವರು ರಿಪೋರ್ಟ್ ಕೊಟ್ಟಿದ್ದಾರೆ. ಕೇಂದ್ರ ಸರ್ಕಾರದವರು ಕೂಡ ಅಂತಹ ಒಂದು ಸಮಿತಿಯನ್ನು ನಿರ್ಮಾಣ ಮಾಡಿ ಅವರೂ ಒಂದು ರಿಪೋರ್ಟ್ ಕೊಟ್ಟಿದ್ದಾರೆ. ಆ ಕಮಿಟಿಯಲ್ಲಿರತಕ್ಕಂಥಾ ಶಿಫಾರಸುಗಳನ್ನು ಒಪ್ಪಿಕೊಂಡಿದ್ದಾರೋ ಇಲ್ಲವೋ ಅದು ನನ್ನ ಗಮನಕ್ಕೆ ಇನ್ನೂ ಬಂದಿಲ್ಲ. ಇದರ ಬಗ್ಗೆ ಆದಷ್ಟು ಬೇಗ ತೀರ್ಮಾನ ತೆಗೆದುಕೊಳ್ಳುತ್ತಾರೆಂದು ನಾನು ತಿಳಿದಿದ್ದೇನೆ. ಇದು ನಮ್ಮ ಕಾಂಗ್ರೆಸ್ ಪಾರ್ಟಿಯ ಮುಂದೆಯೂ ಇದೆ. ಇನ್ನೂವರೆಗೂ ಇದರ ಬಗ್ಗೆ ಯಾವ ಒಂದು ನಿರ್ಣಯವನ್ನೂ ತೆಗೆದುಕೊಂಡಿಲ್ಲ. ನಾವು ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ ಇಂತಹ ಒಂದು ಅನುಭವವನ್ನು ಮುಂದೆ ಇಟ್ಟುಕೊಂಡು ಪರಿಶೀಲನೆ ಮಾಡಿ ಈ ಬಗ್ಗೆ ಎ.ಐ.ಸಿ.ಸಿ. ಯವರು ಏನು ನಿರ್ದೇಶನ ಕೊಡುತ್ತಾರೋ ಆ ರೀತಿ ಮಾಡಬೇಕು. ಜೊತೆಗೆ ನಾವೂ ಕೂಡ ಕೂಲಂಕಷವಾಗಿ ವಿಚಾರ ಮಾಡಿಬಿಟ್ಟು ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ನಾನು ಆಗಲೇ ಹೇಳಿದ ಹಾಗೇ ಈ ಪಾನನಿರೋಧವನ್ನು ಕಿತ್ತು ಹಾಕಿದರೆ ಬಡವರಿಗೆ ಏನು ಅನುಕೂಲವಾಗುತ್ತದೆ ಅವರ ಕಷ್ಟ ಜೀವನದ ಮೇಲೆ ಏನು ಪರಿಣಾಮ ಉಂಟಾಗುತ್ತದೆ, ಅವರ ಬಡತನ ಮಾಯವಾಗುತ್ತದೆಯೇ ಎನ್ನುವುದನ್ನು ಲೆಕ್ಕ ಹಾಕಿ ನೋಡಿದರೆ ನನ್ನ ಅನುಭವಕ್ಕೆ ಬಂದ ಹಾಗೆ ಅವರ ಬಡತನ ಜಾಸ್ತಿಯಾಗುತ್ತದೆಯೇ ಹೊರತು ಕಡಿಮೆಯಾಗುವುದಿಲ್ಲ. ಇದರ ಬಗ್ಗೆ ಶ್ರೀ ಶ್ರಿರಾಮುಲುರವರು ಚೆನ್ನಾಗಿ ಹೇಳಿದರು ಅವರು ಸಾಯಂಕಾಲ ಆದ ತಕ್ಷಣ ಕುಡಿಯಲು ಹೋಗುತ್ತಾರೆ ಕುಡಿಯುವ ಪದ್ಧತಿ ಬಿಡುವುದಿಲ್ಲ. ಅವರಿಗೆ ಕುಡಿಯಲು ಆಲ್ಕೋಹಾಲ್ ಬೇಕು. ಅದರ ಬದಲು ಹಾಲು ಕುಡಿಯುತ್ತಾರೆ ಇಲ್ಲವೇ ಹೋಟೇಲಿಗೆ ಹೋಗಿ ಕಾಫಿ ಕುಡಿಯುತ್ತಾರೆ.

ಶ್ರೀ ಪಾಟೀಲ್ ನಾಗರಾಜ್ .—ಅಧ್ಯಕ್ಷರೇ, ಈಗ ತಮ್ಮನ್ನು ಒಂದು ವಿಷಯ ಕೇಳುತ್ತೇನೆ. ಈಗ ತಮ್ಮ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಿ. ನನ್ನಲ್ಲಿ ಮತ್ತು ಗುಂಡೂರಾವ್ ಇಬ್ಬರಲ್ಲೂ ರಕ್ತ ಪರೀಕ್ಷೆ ಮಾಡಿ. ಗುಂಡೂರಾವ್ ಶರೀರದಲ್ಲಿ ಸುಮಾರು ೯೦ ಪರ್ಸೆಂಟ್ ಆಲ್ಕೋಹಾಲ್ ೧೦ ಪರ್ಸೆಂಟ್ ರಕ್ತ ಇದೆ. ಅವರ ಶರೀರದಲ್ಲಿ ಜಾಸ್ತಿ ಪರ್ಸೆಂಟ್ ಆಲ್ಕೋಹಾಲ್ ಇದೆ. ಬೇಕಾದರೆ ಪರೀಕ್ಷೆಮಾಡಿ.

ಶ್ರೀ ಬಸವಲಿಂಗಪ್ಪ .—ಈಗ ಆ ಪರಿಶೀಲನೆಗೆ ಹೋಗಬೇಕಾಗಿಲ್ಲ

ಈಗ ಬಡವರಿಗೆ ಕಷ್ಟ ಜೀವನ ಪ್ರಾರಂಭವಾಗಿದೆ. ಅದು ಕೊನೆಗಾಣಬೇಕು ಎಂದು ಸರ್ಕಾರದ ಉದ್ದೇಶ. ಆದರೆ ಕೆಲವು ಸದಸ್ಯರು ಸಮಾಜವಾದದ ಮೇಲೆ ಭಾಷಣ ಮಾಡುತ್ತಿದ್ದಾರೆ. ನನಗಂತೂ ಬಹಳ ಆನಂದವಾಯಿತು, ಬಡವರ ಕಡೆ, ನಿಗಾ ಕೊಡದೇ ಇದ್ದರೆ ಸಮಾಜವಾದ ಬರುವುದಿಲ್ಲ. ನಾವು ಸಂಪಾದನೆ ಮಾಡುವ ಹಣ ಹೆಂಡದ ಅಂಗಡಿಗೆ ಕೊಟ್ಟರೆ ಸಮಾಜವಾದ ಬರುವುದಿಲ್ಲ. ಅವನು ಇನ್ನೂ ಕಡು ಬಡವನಾಗುತ್ತಾನೆ. ಅದಕ್ಕೆ ಏನು ಮಾಡಬೇಕು ಎಂದರೆ ಅವನಿಗೆ ಒಂದು ಅವಕಾಶವನ್ನು ದೊರಕಿಸಿ ಕೊಡಬೇಕು. ಸಮಾಜವಾದ ಬರಲಿಕ್ಕೆ ಅನುಕೂಲಸ್ಥರು ಏನು ಒಂದು ಸಂಪಾದನೆ ಮಾಡಿಕೊಂಡಿದ್ದಾರೆ ಆ ಹಣ ಅಮಲ್‌ನಲ್ಲಿ ಖರ್ಚಾದರೆ, ಅದು ಸಾರ್ವಜನಿಕ ಕ್ಷೇತ್ರಕ್ಕೆ ಬಂದರೆ ಅಷ್ಟರ ಮಟ್ಟಿಗೆ ಸಮಾಜವಾದ ಆಯಿತು ಎಂದು ನನ್ನ ಅಭಿಪ್ರಾಯ. ನನ್ನ ಸ್ನೇಹಿತರೂ ಕೂಡ ಇದನ್ನು ಒಪ್ಪಿಕೊಳ್ಳುತ್ತಾರೆ ಎಂದು ನನ್ನ ಭಾವನೆ.

ಶ್ರೀ ಕೋಣಂದೂರು ಲಿಂಗಪ್ಪ .—ನಿಮ್ಮ ಸಮಾಜವಾದ ಒಂದು ತರಹ ಸಮಾಜವಾದ. ಕೆಟ್ಟ ಸಮಾಜವಾದ.

ಶ್ರೀ ಬಿ. ಬಸವಲಿಂಗಪ್ಪ.—ಯಾವ ಸದಸ್ಯರಾದರು ಕೂಡ ಬಡತನವನ್ನು ಕಿತ್ತು ಹಾಕಬೇಕಾದರೆ ಇಲ್ಲಿಯವರೆಗೂ ಏನು ಒಂದು ಹೆಂಡದ ಅಂಗಡಿಗಳನ್ನು ತೆರೆದಿದ್ದಾರೋ ಅಲ್ಲಿ ಒಂದು ಟೆಂಪರೆನ್ಸ್ ಬೋರ್ಡ್‌ನ್ನು ಹಾಕಿಕೊಂಡು ಯಾರು ಹೆಂಡದ ಅಂಗಡಿಗೆ ಹೋಗಕೂಡದು, ಯಾರೂ ಕುಡಿಯಲಿಕ್ಕೆ ಹೋಗಬೇಡಿ ಎಂದು ಯಾರು ಹೇಳುತ್ತಿದ್ದರೋ ಅವರು ಜನಗಳ ಕಣ್ಣಿಗೆ ಮಣ್ಣು ಎರಚುತ್ತಿದ್ದಾರೆ. ಮತ್ತು ಏನೇನೋ ಮಾತನಾಡುತ್ತಾರೆ. ಯಾರೇ ಹೊಸ ಸರ್ಕಾರ ನಡೆಸಲಿ ಹಣಬೇಕು ಆದರೆ ನೀವು ಮಾತ್ರ ಕುಡಿಯಲಿಕ್ಕೆ ಹೋಗಬೇಡಿ ಎಂದರೆ ಏನು ಅರ್ಥ ? ನನಗೆ ಗೊತ್ತಾಗುವುದಿಲ್ಲ. ಇದನ್ನು ತೆಗೆದು ಹಾಕಬೇಕು ಎನ್ನುವುದರ ಬಗ್ಗೆ ಸರ್ಕಾರ ತೀವ್ರ ಪರಿಶೀಲನೆ ಮಾಡುತ್ತಿದೆ. ಇದರ ಬಗ್ಗೆ ಏನು ಒಂದು ನಿರ್ಣಯವನ್ನೂ ತೆಗೆದುಕೊಂಡಿಲ್ಲ. ಈ ಪಾನ ಮಾಡುವುದು ಈಗ ಜಾರಿಯಲ್ಲಿರುವುದರಿಂದ ಈ ಹೊಸ ವರ್ಷದ ಪ್ರಸ್ತುತ ಆಯವ್ಯಯದಲ್ಲಿ ೧೦ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಈ ೧೦ ಲಕ್ಷ ರೂಪಾಯಿ ಗಳನ್ನು ನಾವು ಯಾರು ಹರಿಜನರಲ್ಲಿ ಬಡವರಾಗಿರುತ್ತಾರೋ ಅವರಿಗೆ ಕೊಟ್ಟು ಸರಿಯಾದ ಅಂಗಡಿಗಳನ್ನು ಹಾಕಿಸುತ್ತೇವೆ. ಹರಿಜನರ ಕೇರಿಯಲ್ಲಿ ಇಟ್ಟಿರುವ ಅಂಗಡಿಗಳನ್ನು ದೂರವಾಗಿ ಇಡಿಸುವಂತೆ ಮಾಡ ಬೇಕಾಗಿದೆ. ಈ ಪ್ರಶ್ನೆ ಬಹಳ ವರ್ಷದಿಂದಲೂ ಇದೆ. ಯಾರು ಕಷ್ಟಪಟ್ಟು ಕೆಲಸ ಮಾಡುತ್ತಾರೋ ಯಾರು ಸಂಪಾದನೆ ಮಾಡುತ್ತಾರೋ ಆ ಸಂಪಾದನೆಯನ್ನು ಅವರಿಂದ ಕಿತ್ತುಕೊಂಡು ಬಿಡುವುದು ಏನಿದೆ ಇದು ಬಹಳ ದಿನದಿಂದ ಆಗುತ್ತಿದೆ. ಆದುದರಿಂದ ಇದರ ಬಗ್ಗೆ ನಾವು ಇನ್ನೂ ಕಣ್ಣು ತೆರೆದಿಲ್ಲ. ಸರ್ಕಾರ ದವರು ಈಗ ಯೋಚನೆ ಮಾಡಿದ್ದಾರೆ. ಈ ಒಂದು ಹರಿಜನ ಕೇರಿಗಳಲ್ಲಿರತಕ್ಕಂಥ ಅಂಗಡಿಗಳನ್ನು ದೂರ ವಾಗಿ ಇಡುವುದು ಒಳ್ಳೆಯದೆಂದು ಸರ್ಕಾರ ಒಪ್ಪಿದೆ. ಅದರ ಒಂದು ಅಂಗವಾಗಿ ನಾವು ೧೦ ಲಕ್ಷ ರೂಪಾಯಿಗಳನ್ನು ಪ್ರಸ್ತುತ ವರ್ಷದ ಬಜೆಟ್ಟಿನಲ್ಲಿ ಪ್ರಾವಿಷನ್ ಮಾಡಿದ್ದೇವೆ.

ಅದನ್ನು ಯಾವ ರೀತಿಯಾಗಿ ಖರ್ಚು ಮಾಡಬೇಕು, ಹೇಗೆ ಅಂಗಡಿಗಳನ್ನು ದೂರವಾಗಿ ಇಡಬೇಕು, ಯಾವ ಪ್ರದೇಶಗಳಲ್ಲಿ ಇಡಬೇಕು ಎನ್ನುವುದರ ಬಗ್ಗೆ ಕೂಡ ನಾವು ಇನ್ನೂ ಯೋಚನೆ ಮಾಡಿಲ್ಲ. ಅದರ ಬಗ್ಗೆ ಯೋಚನೆ ಮಾಡಬೇಕಾಗಿದೆ.

ಮಾನ್ಯ ಸದಸ್ಯರು ಇನ್ನೊಂದು ವಿಷಯ ಹೇಳಿದರು. ಏನೆಂದರೆ ಹೆಂಡದಲ್ಲಿ ರಾಸಾಯನಿಕ ವಸ್ತುಗಳನ್ನು ಸೇರಿಸಿ ಅಮಲು ಬರುವ ರೀತಿಯಲ್ಲಿ ಹೂಡಿ ಕಂಟ್ರಾಕ್ಟರುಗಳು ಮಾರುತ್ತಾರೆಂದು. ಇದು ಸರ್ಕಾರದ ಗಮನಕ್ಕೂ ಬಂದಿದೆ. ಇದರ ಪರಿಹಾರದ ಬಗ್ಗೆ ಸರ್ಕಾರ ಯೋಚನೆ ಮಾಡುತ್ತಿದೆ. ಹೆಂಡವನ್ನು ಸೀಸೆಗಳಲ್ಲಿ ತುಂಬಿ, ಸೀಲ್ ಮಾಡಿಮಾರತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ಸರ್ಕಾರಕ್ಕೆ ಅಭಿಪ್ರಾಯವಿದೆ. ಇದಾದ ಮೇಲೆ ಕಂಟ್ರಾಕ್ಟರುಗಳು ದುರ್ವ್ಯವಹಾರ ಮಾಡಿ ಹಣ ಸಂಪಾದನೆ ಮಾಡುವುದಕ್ಕೆ ಅವಕಾಶವಾಗಲಾರದು ಎನ್ನುವುದು ಸರ್ಕಾರದ ಆಶೆ.

ಕಳ್ಳಭಟ್ಟಿ ತಯಾರಿಕೆಯಲ್ಲಿ ಪೋಲೀಸರು ಲಂಚ ತೆಗೆದುಕೊಳ್ಳುತ್ತಾರೆ, ಎಕ್ಸೈಸ್ ಡಿಪಾರ್ಟ್‌ಮೆಂಟಿನ ಅಧಿಕಾರಿಗಳು ಲಂಚ ತೆಗೆದುಕೊಳ್ಳುತ್ತಾರೆ, ಎಂದು ಹೇಳಿದ್ದಾರೆ. ಸೀಸೆಗಳಲ್ಲಿ ಹೆಂಡವನ್ನು ತುಂಬಿ ಮಾರುವ ವ್ಯವಸ್ಥೆಯಾದ ನಂತರ ಲಂಚ ತೆಗೆದುಕೊಳ್ಳುವುದಕ್ಕೆ ಅವಕಾಶವಿರುವುದಿಲ್ಲವೆಂದು ನನಗನ್ನಿಸುತ್ತದೆ.

ಶ್ರೀ ವಾಟಾಳ್ ನಾಗರಾಜ್ ಅವರು ಮತ್ತು ಶ್ರೀ ಕೆ. ಪ್ರಭಾಕರ್ ಅವರು ಒಂದು ಸಲಹೆಯನ್ನು ನೀಡಿದ್ದಾರೆ. ಏನೆಂದರೆ ಮಹಿಳೆಯರಿಗೆ ಅವರ ಗಂಡಂದಿರ ಸಂಬಳಗಳನ್ನು ಕೊಡಿಸಿಕೊಡಬೇಕು, ಅವರಿಗೆ ಜಾಸ್ತಿ ಜವಾಬ್ದಾರಿ ಕೊಡಬೇಕು. ಅದರಿಂದ ಪೂರ್ಣವಾಗಿ ಅಲ್ಲದೆ ಇದ್ದರೂ ಸ್ವಲ್ಪಮಟ್ಟಿಗೆ ಕುಡಿತವನ್ನು ಕಡಮೆ ಮಾಡುವುದಕ್ಕೆ ಸಾಧ್ಯ ಎನ್ನುವ ಸಲಹೆ ಮಾಡಿದ್ದಾರೆ. ಹೆಣ್ಣು ಮಕ್ಕಳು ಈಗ ಸ್ವತಂತ್ರಹೀನ ರಾಗಿದ್ದಾರೆ, ಅವರಿಗೆ ಸಂಪಾದನೆ ಇರುವುದಿಲ್ಲ ಮನೆಯಲ್ಲಿ ಕೆಲಸ ಮಾಡಬೇಕು, ಗಂಡ ಹೇಳಿದ ಹಾಗೆ ಕೇಳಬೇಕು. ಹಾಗೆ ಕೇಳುವಾಗ ಬಯ್ದರೆ ಬಯ್ಸಿಕೊಳ್ಳಬೇಕು, ಒದ್ದರೆ ಒದಿಸಿಕೊಳ್ಳಬೇಕು. ಅವರನ್ನು ಸ್ವತಂತ್ರರಾಗಿ ಮಾಡತಕ್ಕ ವಿಧಾನವನ್ನು ನಾವು, ನೀವು ಎಲ್ಲರೂ ಕೂಡ ಇನ್ನು ಮುಂದೆ ಕಂಡುಹಿಡಿಯ ಬೇಕು ಎಂದು ಕಾಣುತ್ತದೆ.

ಮಾನ್ಯ ಸದಸ್ಯರು ಏನೇನು ಸಲಹೆಗಳನ್ನು ಮಾಡಿದ್ದಾರೆ, ಅವೆಲ್ಲವನ್ನೂ ಕೂಡ ಮನಸ್ಸಿನಲ್ಲಿಟ್ಟು ಕೊಂಡು, ಏನೊಂದು ಹಣವನ್ನು ಬಜೆಟ್ಟಿನಲ್ಲಿ ಒದಗಿಸಿದ್ದೇವೆ, ಆ ಹಣವನ್ನು ಜನರ ಮನೆಗೋಸ್ಕರ, ಕಟ್ಟಡ ಕಟ್ಟುವುದಕ್ಕೋಸ್ಕರ ಬಡ ಜನರ ಮಕ್ಕಳಿಗೋಸ್ಕರ, ಅವರ ಅಭಿವೃದ್ಧಿಗೋಸ್ಕರ ಉಪಯೋಗಿ ಸುತ್ತೇವೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಈ ಸದನದಲ್ಲಿ ಹೇಳಿದ್ದಾರೆ. ಅದೇ ರೀತಿಯಲ್ಲಿ ನಾನು ಪುನರುಚ್ಚಾರ ಮಾಡುತ್ತೇನೆ. ಈ ಹಣವನ್ನು ಬಡ ಮಕ್ಕಳ ಅಭಿವೃದ್ಧಿ ಕಾರ್ಯಗಳನ್ನು ಮತ್ತು ಇಂಥ ಕೆಲಸಗಳಿಗೆ ಉಪಯೋಗಿಸುತ್ತೇವೆಂದು ಹೇಳುತ್ತೇನೆ. ಸಾವಧಾನದಿಂದ ತಾವೆಲ್ಲರೂ ಕೂಡ ನನ್ನ ಉತ್ತರವನ್ನು ಕೇಳಿದ್ದೀರಿ. ಆದರೆ ಅದರಿಂದ ನಿರ್ಣಯವನ್ನು ಮಂಡಿಸಿರುವ ಮಾನ್ಯ ಜಯಪ್ರಕಾಶ

ನಾರಾಯಣ ಅವರಿಗಾಗಲೀ ಅಥವಾ ಬೇರೆಯವರಿಗಾಗಲೀ ಸಂಪೂರ್ಣವಾಗಿ ತೃಪ್ತಿಯಾಗಿರಲಾರದು ಎಂದು ಕಾಣುತ್ತದೆ. ನಿರ್ಣಯವನ್ನು ವಾಪಸು ತೆಗೆದುಕೊಳ್ಳಬೇಕೆಂದು ಹೇಳಿದರೆ ಅವರ ಮನಸ್ಸಿಗೆ ಬೇಜಾರಾಗಬಹುದು. ಸುಮಾರು ೨೫-೩೦ ವರ್ಷದಿಂದ ನನ್ನ ಜೊತೆಯಲ್ಲಿ ಕೆಲಸ ಮಾಡಿರತಕ್ಕ ಸ್ನೇಹಿತರುಗಳು. ಅವರ ಮನಸ್ಸಿನಲ್ಲಿರುವ ಆಕಾಂಕ್ಷೆ, ಆತಂಕವನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಅದೆಲ್ಲವನ್ನೂ ಪರಿಹಾರ ಮಾಡಲಿಕ್ಕೆ ಸಾಧ್ಯವಿಲ್ಲ. ಅದರ ಬಗ್ಗೆ ಸರ್ಕಾರ ನಾಳೆ ಇಲ್ಲ ನಾಡಿದ್ದು ಪ್ರಯತ್ನ ಮಾಡುತ್ತದೆ ಎಂದು ಹೇಳಿ ಮಾನ್ಯ ಸದಸ್ಯರು ಅವರ ನಿರ್ಣಯವನ್ನು ವಾಪಸು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

†ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್ (ಸಿರ್ಸಿ).—ಸನ್ಮಾನ್ಯ ಸಭಾಧ್ಯಕ್ಷರೇ, ಈ ವರೆಗೆ ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ಪೌರಾಡಳಿತ ಮಂತ್ರಿಗಳು ನಾನು ಮಂಡಿಸಿದಂಥ ಖಾಸಗಿ ನಿರ್ಣಯದ ಬಗ್ಗೆ ಕೆಲವು ಉಪಯುಕ್ತವಾದ ಸಲಹಾರೂಪವಾದ ಉತ್ತರವನ್ನು ಕೊಟ್ಟಿದ್ದಾರೆ. ಅವರು ಹೇಳುವಾಗ ಈ ಸಮಸ್ಯೆಯ ವಿಷಯದಲ್ಲಿ ಕಾಂಗ್ರೆಸ್ ಪಕ್ಷದ ಮುಂದೆ ಈ ಠರಾವಿನ ಬಗ್ಗೆ ಚರ್ಚೆಗೆ ತೆಗೆದುಕೊಳ್ಳುವುದಲ್ಲದೆ ಅಲ್ಲಿ ನಿರ್ಣಯ ತೆಗೆದುಕೊಳ್ಳುತ್ತೇವೆನ್ನುವ ಭರವಸೆಯನ್ನು ನೀಡಿದ್ದಾರೆ. ಅಷ್ಟೇ ಅಲ್ಲದೆ, ಎ.ಐ.ಸಿ.ಸಿ. ಯಲ್ಲಿ ಸಹ ನ್ಯಾಷನಲ್ ಪಾಲಿಸಿಯಾಗಿ ಇದರ ಬಗ್ಗೆ ಯೋಚನೆ ಮಾಡುತ್ತಿರುವುದಾಗಿ ಹೇಳಿದ್ದಾರೆ. ಬಡವರ ಕಷ್ಟ ಜೀವನವನ್ನು ಈ ಸರ್ಕಾರ ಅರಿತು ಅದಕ್ಕಾಗಿ ಹತ್ತು ಲಕ್ಷ ರೂಪಾಯಿಗಳನ್ನು ಸಹ ಮೀಸಲಾಗಿರಿಸಿ ಬಡವರ ಮತ್ತು ಶ್ರಮ ಜೀವಿಗಳ ಉದ್ಧಾರಕ್ಕಾಗಿ ಕೆಲವು ಹಣವನ್ನು ಮೀಸಲಾಗಿಟ್ಟು ಕೆಲಸ ಮಾಡುತ್ತದೆ, ಟೆಂಪರೆನ್ಸ್ ಬೋರ್ಡ ಮಾಡಿ ಕೆಲಸ ಮಾಡಲಿಕ್ಕೆ ತ್ರೀವ್ರ ಗಮನ ಕೊಡುತ್ತದೆ ಮತ್ತು ಈ ಬಗ್ಗೆ ಮುಂದೆ ಕಾಂಗ್ರೆಸ್ ಪಕ್ಷದಲ್ಲಿ ನಿರ್ಣಯ ತೆಗೆದುಕೊಳ್ಳಲಾಗುತ್ತದೆ ಎನ್ನುವ ಭರವಸೆಯನ್ನು ಸರ್ಕಾರದವರು ನೀಡಿರುವುದರಿಂದ, ನಾನು ಮಂಡಿಸಿರುವ ನಿರ್ಣಯಕ್ಕೆ ಮಾನ್ಯ ಮಂತ್ರಿಗಳ ಉತ್ತರ ಸಮಾಧಾನ ರೀತಿಯಲ್ಲಿ ಇರುವುದರಿಂದ, ನಿರ್ಣಯವನ್ನು ಮತಕ್ಕೆ ಹಾಕಿದರೆ ಅದಕ್ಕೆ ಹೆಚ್ಚು ಜನ ಬೆಂಬಲ ಕೊಡುತ್ತಾರೆಂದು ಗೊತ್ತಿದ್ದರೂ ಸಹ ಕಾಂಗ್ರೆಸ್ ಪಕ್ಷದಲ್ಲಿ ಇದರ ಬಗ್ಗೆ ನಿರ್ಣಯ ತೆಗೆದುಕೊಳ್ಳುತ್ತೇವೆಂದು ಅಭಯವನ್ನು ಕೊಟ್ಟಿರುವುದರಿಂದ ನನ್ನ ನಿರ್ಣಯನ್ನು ವಾಪಸು ತೆಗೆದುಕೊಳ್ಳುವುದಕ್ಕೆ ಅನುಮತಿ ಕೋರುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಸ್ವಾಮಿ, ಒಂದು ಕ್ರಿಯಾಲೋಪ, ಮಾನ್ಯ ಸದಸ್ಯರಾದ ಜಯಪ್ರಕಾಶ ನಾರಾಯಣ್ ಅವರು ನಿರ್ಣಯವನ್ನು ವಾಪಸು ತೆಗೆದುಕೊಳ್ಳುವ ಬಗ್ಗೆ ಹೇಳಿದರು. ಅದು ಕೇವಲ ಒಬ್ಬರ ನಿರ್ಣಯವಲ್ಲ. ೧೮ ಜನ ಈ ನಿರ್ಣಯವನ್ನು ಕಳುಹಿಸಿದ್ದಾರೆ. ಆ ೧೮ ಜನರ ಹೆಸರೂ ನಿರ್ಣಯದಲ್ಲಿದೆ. ಆದುದರಿಂದ ಮಾನ್ಯ ಜಯಪ್ರಕಾಶ ನಾರಾಯಣ ಅವರು ನಿರ್ಣಯವನ್ನು ವಾಪಸು ತೆಗೆದುಕೊಂಡರೂ ಇತರ ೧೭ ಜನರು ನಿರ್ಣಯನ್ನು ವಾಪಸು ತೆಗೆದುಕೊಳ್ಳುವದಿಲ್ಲ.

MR. DEPUTY SPEAKER.—There was an identical resolution tabled by 17 others also. That is not the point. In the ballot only one resolution came up and that is the one under discussion now. We are not concerned with the other resolutions. Hence, there is no point of order.

12-30 P.M.

I think the House has no objection for the hon. member to withdraw the resolution.

HON. MEMBERS.—We object.

MR. DEPUTY SPEAKER.—I will put it to the vote. The question is.

That this Assembly recommends that total prohibition be introduced throughout the State by making alternative arrangements for the loss of revenue through fresh taxation measures in order to materialise ideals of Gandhism through socialism."

(Sri Deputy Speaker)

The motion was negatived.

Sri Konandur Lingappa.—I press for division.

Mr. Deputy Speaker.—The Hon. Member must know when to press for a division. I have already announced that the motion was negatived. Now, let us go to the next resolution by the hon. member Sri Sheernaly Chandrasekhar.

(ii) Exhibiting name boards in Public Places.

Sri S. M. Sheeranaly Chandrasekhar.—(Hosanagar) I move

"That this House resolves that the Government should not allow any individuals to exhibit name boards depicting ones own caste in public places like hotel."

Sri M. H. Jayaprakash Narayan (Sirsi).—I support it.

Mr. Deputy Speaker.—Resolution moved.

"That this House resolves that the Government should not allow any individuals to exhibit name boards depicting ones own caste in public places like hotels."

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—

ಸನ್ಮಾನ್ಯ ಸಭಾಧ್ಯಕ್ಷರೆ, ಜಾತ್ಯಾತೀತವನ್ನು ಘೋಷಣೆ ಮಾಡಿದ ೨೫ ವರ್ಷಗಳ ನಂತರವೂ ಕೂಡ ಸಾರ್ವಜನಿಕ ಸ್ಥಳಗಳಲ್ಲಿ ಎಲ್ಲೆಲ್ಲಿ ನೋಡಿದರೂ ಬ್ರಾಹ್ಮಣರ ಖಾನಾವಳಿ, ಉಡುಪಿ ಬ್ರಾಹ್ಮಣರ ಖಾನಾವಳಿ, ವೀರಶೈವರ ಖಾನಾವಳಿ, ಶಿವಳ್ಳಿ ಬ್ರಾಹ್ಮಣರ ಖಾನಾವಳಿ, ಕುರುಬರ ವಿದ್ಯಾರ್ಥಿ ನಿಲಯ, ಬ್ರಾಹ್ಮಣರ ವಿದ್ಯಾರ್ಥಿನಿಲಯ, ವೀರಶೈವರ ವಿದ್ಯಾರ್ಥಿ ನಿಲಯ ಎಂಬ ನಾಮಫಲಕಗಳು ಕಾಣುತ್ತಿವೆ. ಯಾವುದೋ ಉತ್ತಮತೆಯನ್ನು ತೋರ್ಪಡಿಸಿಕೊಳ್ಳಲಿಕ್ಕಾಗಿ ಇಂಥ ನಾಮ ಫಲಕಗಳನ್ನು ಪ್ರಚಾರ ಪಡಿಸುವ ಉದ್ದೇಶ ಇರುತ್ತದೆ. ಇದು ಮಡಿವಂತಿಕೆಗೆ ಸಂಬಂಧಪಟ್ಟದ್ದು ಆಯಿತು. ಮಡಿವಂತಿಕೆಗೂ ಸಮಾಜವಾದಕ್ಕೂ ಯಾವ ಸಂಬಂಧವೂ ಇಲ್ಲ. ಮಡಿವಂತಿಕೆಯ ರೂಪರೇಷೆಗಳು ಹೇಗೆ ಎಂದರೆ, ಹದಿನೈದು ದಿವಸ ಮಗುಟ ಒಗೆಯುವೆ ಇದ್ದರೂ ಸಹ ಆತನ ಮೈ ಕೊಳೆತು ನಾರುತ್ತಾ ಇದ್ದರೂ ಸಹ ಸ್ನಾನ ಮಾಡುವಾಗ ಸೋಪು ಸಹ ಉಪಯೋಗಿಸದೆ ರುದ್ರಾಭಿಷೇಕ ಮಂತ್ರ ಹೇಳಿಕೊಂಡು ಜಳಜಳ ಸ್ನಾನ ಮಾಡಿ ಓಡಿ ಬರುತ್ತಾರೆ. ಆಗ ಚೆನ್ನಾಗಿ ಮೈತೊಳೆದು ನೀಟಾಗಿ ಬಟ್ಟೆ ಹಾಕಿಕೊಂಡ ಹರಿಜನ ಬಂದರೆ, ಸಂಪ್ರೋಕ್ಷಣೆ ಮಾಡಿಕೊಳ್ಳುತ್ತಾರೆ. ಆತ ಮಡಿ ಇವನು ಮೈಲಿಗೆ. ಇವತ್ತಿಗೂ ಕೂಡ ತೆಂಗಿನ ಕರಟದಲ್ಲಿ ಕಾಫಿ ಕೊಡುವ ಸಂಪ್ರದಾಯ ಹೋಟೆಲುಗಳಲ್ಲಿ ಇದೆಯೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಇವತ್ತು ಹಳ್ಳಿಗಳಲ್ಲಿ ತೆಂಗಿನ ಕರಟದಲ್ಲಿ ಹೊರಗಡೆ ನಿಲ್ಲಿಸಿ ಕಾಫಿ ಕೊಡುವ ಖಾನಾವಳಿಗಳು ಇವೆ. ನಾವು ಅಸ್ಪೃಶ್ಯತೆ ನಿವಾರಣೆ ಮಾಡುತ್ತೇವೆ, ಜಾತ್ಯಾತೀತ ರಾಷ್ಟ್ರವನ್ನು ನಿರ್ಮಾಣ ಮಾಡುವುದಕ್ಕೆ ಹೊರಟಿದ್ದೇವೆ. 'ಬ್ರಹ್ಮ ಜ್ಞಾನೇತಿ ಬ್ರಾಹ್ಮಣಃ' ಯಾವನಿಗೆ ಬ್ರಹ್ಮ ಜ್ಞಾನ ಇದೆಯೋ, ಅವನನ್ನು ಬ್ರಾಹ್ಮಣನೆಂದು ಕರೆಯಬಹುದು, ಜನ್ಮತಃ ಬ್ರಾಹ್ಮಣನೆಂದು ಕರೆಯಲಾಗದು. ಕರ್ಮದಲ್ಲಿ ಬ್ರಾಹ್ಮಣ ಚಂಡಾಲನಾಗಿರಬಹುದು. ಬ್ರಾಹ್ಮಣ ಹೋಟೆಲನ್ನು ನಡೆಸುತ್ತಾನೆ. ಅನ್ನದ ವ್ಯಾಪಾರ ಶಾಸ್ತ್ರ ವಿರುದ್ಧ ಎಂದು ಇದ್ದರೂ ಕೂಡ, ಬ್ರಾಹ್ಮಣ ಅನ್ನದ ವ್ಯಾಪಾರ ಮಾಡುತ್ತಾನೆ. ಈ ಮಾತನ್ನು ನಾನು ಬ್ರಾಹ್ಮಣನಾಗಿ ತಲೆ ತಗ್ಗಿಸಿ ಮಾತನಾಡಬೇಕಾಗಿದೆ. ಯಾವ ಬ್ರಾಹ್ಮಣನೂ ಕೂಡ ವ್ಯಾಪಾರ ಮಾಡುವುದು ನಿಷಿದ್ಧ. ಯಾರು ಅನ್ನದಾನ ಮಾಡಬೇಕಾಗಿತ್ತೋ, ಅವನು ಇವತ್ತು ಅನ್ನದ ವ್ಯಾಪಾರ ಮಾಡುತ್ತಿದ್ದಾನೆ. ಇಷ್ಟು ವಿಪರೀತವಿದೆ.

ಜನ್ಮತಃ ಜಾತಿಯ ನಿರ್ಣಯವಾಗುವುದಿಲ್ಲ. ಆತನ ವಿದ್ವತ್ತು ಪ್ರಕೃತಿ, ಆತನ ನಡವಳಿಕೆ, ಆತನ ಕರ್ಮ ಇವುಗಳಿಂದ ಜಾತಿ, ವರ್ಣ, ನಿರ್ಣಯ ಆಗಬೇಕು, ಎಂದು ಗೀತೆಯಲ್ಲಿ ಹೇಳಿದ್ದರೂ ಕೂಡ ಇವತ್ತು ಜನ್ಮತಃ ಜಾತಿಯ ನಿರ್ಣಯವಾಗುತ್ತಿದೆ. ಶ್ರೀಮಾನ್ ಇ. ವಿ. ರಾಮಸ್ವಾಮಿ ನಾಯಕರಂಥ ವ್ಯಕ್ತಿಗಳು ಎಲ್ಲಾ ಸಂಸ್ಥಾನಗಳಲ್ಲಿ ಹುಟ್ಟಬೇಕು ಎಂದು ಹೇಳುತ್ತೇನೆ. ನಮ್ಮ ಜನರಲ್ಲಿ ಎರಡು ಪರ್ಸೆಂಟ್ ಆರ್ಯನ್ ಬ್ಲಡ್ ಇಲ್ಲವೇ ಇಲ್ಲ ಎಂದು ರಾಮಸ್ವಾಮಿ ನಾಯಕರು ಹೇಳಿದರು. ರೇಷಿಯಲ್ ಸಿಂಥಿಸೀಸ್ ಇನ್ ಹಿಂದೂ ಇಂಡಿಯಾ ಎಂಬ ಪುಸ್ತಕ ಇದೆ. ಅದನ್ನು ಓದಿದ್ದೇ ಆದರೆ ದೇಶದಲ್ಲಿ, ನಮ್ಮ ಭರತವರ್ಷದಲ್ಲಿ, ಭಾರತ ಭೂಮಿಯಲ್ಲಿ ಎಲ್ಲಾ ಜನಾಂಗಗಳು ಒಂದೇ ಎಂದು ಬಹಳ ಚೆನ್ನಾಗಿ ಹೇಳಿದ್ದಾರೆ. ಅರ್ಥ ಇಷ್ಟೆ, ಯಾವ ರೀತಿಯ ಪ್ರತ್ಯೇಕತೆ ಕೂಡ ಇರಲಿಲ್ಲ. ಕೇವಲ ಆರ್ಟಿಫಿಷಲ್ ಪ್ರತ್ಯೇಕತೆ, ಮಾನವ ನಿರ್ಮಿತವಾದ ಪ್ರತ್ಯೇಕತೆ ಆಗಿದೆ ಎನ್ನುವುದನ್ನು ನಂಬದೆ ಇರುವ ಪಂಡಿತರು ಇವೊತ್ತಿಗೂ ಇದ್ದಾರೆ. ಜಾತಿಯನ್ನು ಆತನ ಮೇಧಾಶಕ್ತಿ, ವಿದ್ವತ್ತು, ಪ್ರಕೃತಿ ನಿರ್ಣಯ ಮಾಡುತ್ತದೆ. ಜನ್ಮತಃ ನಿರ್ಣಯ ಮಾಡುವ ಕಾಲ ಎಂದೋ ಹೋಯಿತು. ವಾಲ್ಮೀಕಿ ಬ್ರಾಹ್ಮಣನಲ್ಲ, ಬೇಡರವನು, ಕಾಳಿದಾಸ ಬ್ರಾಹ್ಮಣನಲ್ಲ, ಕುರುಬನು, ವಿಶ್ವಾಮಿತ್ರ ಬ್ರಾಹ್ಮಣನಲ್ಲ ಕ್ಷತ್ರಿಯ. ಮೇಧಾಶಕ್ತಿಯನ್ನು ಅನುಸರಿಸಿ ಅವನನ್ನು ಬ್ರಾಹ್ಮಣನೆಂದು ಕರೆದರು. ಇವೊತ್ತಿಗೂ ಸಂಪ್ರದಾಯವಾದಿ ಬ್ರಾಹ್ಮಣರು ಕಾಳಿದಾಸ ಬ್ರಾಹ್ಮಣ ನಿಮಗೆ ಏನು ಗೊತ್ತು, ಅವನು ಶಾಪಗ್ರಸ್ತನಾಗಿ ಕುರುಬನಾಗಿದ್ದನು ಎಂದು ಹೇಳುವರು. ಹಾಗೆಯೇ ವಾಲ್ಮೀಕಿಯೂ ಬ್ರಾಹ್ಮಣ ಶಾಪಗ್ರಸ್ತನಾಗಿ ಬೇಡನಾಗಿದ್ದ ಎಂದು ಹೇಳುತ್ತಾರೆ. ಈ ರೀತಿ ವಾದ ಮಾಡತಕ್ಕ ಬ್ರಾಹ್ಮಣರು ಇದ್ದಾರೆ. ಇಂತಹವರು ಸಮಾಜವಾದಿ ಸಮಾಜದಲ್ಲಿ ಇರುವುದಕ್ಕೆ ಸಾಧ್ಯವಿಲ್ಲ. ನಿರಂಕುಶ ಪ್ರಭುತ್ವವನ್ನು ಪಂಡಿತ ನೆಹರೂ ಅವರು ಮಾಡಿದ್ದು ತಪ್ಪು. ೧೭ ವರ್ಷಗಳ ಕಾಲ ಅವರು ನಿರಂಕುಶ ಪ್ರಭುತ್ವ ಮಾಡಿದ್ದರೆ ಈ ಜಾತಿಗಳನ್ನು ಮೇಲು ಕೀಳು ಎನ್ನುವ ಗೊಡ್ಡು ಸಂಪ್ರದಾಯವಾದಿಗಳನ್ನು ಆಮೂಲಾಗ್ರವಾಗಿ ಮೂಲೋತ್ಪಾಟನೆ ಮಾಡಬಹುದಾಗಿತ್ತು. ೧೦ ವರ್ಷಗಳ ಕಾಲ ಯಾರಾದರೂ ನಿರಂಕುಶ ಪ್ರಭುತ್ವ ಮಾಡಲು ಅವಕಾಶ ಕೊಡಲಿ. ೧೦ ವರ್ಷ ನಿರಂಕುಶ ಪ್ರಭುತ್ವವನ್ನು ನನ್ನ ಕೈಯಲ್ಲಿ ಕೊಟ್ಟರೆ ಜಾತಿ ಕುಲ ಧರ್ಮ ಈ ಗೊಡ್ಡು ಸಂಪ್ರದಾಯವನ್ನು ಮೂಲೋತ್ಪಾಟನೆ ಮಾಡುತ್ತೇನೆ. ನಿರಂಕುಶ ಪ್ರಭುತ್ವ ಸಿಕ್ಕಲಿಲ್ಲ ಏನು ಮಾಡುವುದಕ್ಕೂ ಸಾಧ್ಯವಾಗಲಿಲ್ಲ. ಇವೊತ್ತು ಅಂಥ ಅಧಿಕಾರವಿಲ್ಲ. ಎಲ್ಲರೂ ಸಮಾಜವಾದದ ಮಾತು ಆಡುತ್ತಾರೆ ಆದರೆ ಇವತ್ತಿನ ದಿನ ಜಾತಿ ಹೆಸರು ಇಲ್ಲದೆ ಯಾವುದೂ ನಡೆಯುವುದಿಲ್ಲ ಚುನಾವಣೆಗೆ ನಿಲ್ಲಲು ಟಿಕೇಟ್ ಬೇಕಾದರೂ ಜಾತಿಯ ಆಧಾರದ ಮೇಲೆಯೇ ಕೊಡುತ್ತಾರೆ. ಒಬ್ಬರು ಎಷ್ಟೇ ಯೋಗ್ಯರಿದ್ದರೂ ಕೂಡ ನ್ಯಾಯ ರೀತಿಯಲ್ಲಿ ಆತನಿಗೆ ಚುನಾವಣೆಗೆ ನಿಲ್ಲುವುದಕ್ಕೆ ಅಧಿಕಾರವಿದ್ದರೂ ಕೂಡ, ಜಾತಿಯ ಹೆಸರಿನಲ್ಲಿ ಆತನಿಗೆ ಟಿಕೆಟ್ಟು ನಿರಾಕರಿಸುತ್ತಾರೆ. ಜಾತಿಯ ಹೆಸರು ಹೇಳಿಯೇ ಹೋರಾಟ ಮಾಡಬೇಕು.

ಈ ರೀತಿಯಿಂದ ಯಾವ ಜಾತಿಯೂ ಉದ್ಧಾರವಾಗುವುದಿಲ್ಲ. ಪ್ರತಿಯೊಂದಕ್ಕೂ ಜಾತಿ ಹೆಸರಿನಲ್ಲಿ ಬರಬೇಕಾಗಿದೆ. ಇದು ನನ್ನ ಅನುಭವ ಈ ಸಭೆಯಲ್ಲಿ ಹೇಳುವುದಕ್ಕೆ ಇಷ್ಟ ಪಡುವುದಿಲ್ಲ. ಜಾತಿ ಹೆಸರು ಹೇಳಿಕೊಂಡು ಟಿಕೇಟ್ ತೆಗೆದುಕೊಳ್ಳಬೇಕಾಗುತ್ತದೆ. ಜಾತಿ ಹೆಸರು ಹೇಳಿಕೊಂಡೇ ಪ್ರತಿಯೊಂದನ್ನು ಮಾಡಬೇಕಾಗುತ್ತದೆ. ಇಂಥ ಸಂಪ್ರದಾಯವನ್ನು ಮೂಲೋತ್ಪಾಟನೆ ಮಾಡುವ ಸರ್ಕಾರ ಬರಬೇಕು. ನಾನು ೩-೪ ರೆಜಲ್ಯೂಷನ್ ಕಳಿಸಿದ್ದೆ. ಅವೆಲ್ಲ ಹಾಳಾಗಿ ಹೋಯಿತು. ಯಾರು ಅಂತರ್ ಜಾತಿ ವಿವಾಹ ಆಗುತ್ತಾರೋ ಅಂಥವರಿಗೆ ಸರ್ಕಾರದವರು ೩೦ ಪರ್ಸೆಂಟ್ ಸರ್ಕಾರ ಕೆಲಸ ಕೊಡಬೇಕು ಎಂದು ಒಂದು ನಿರ್ಣಯ ತಂದಿದ್ದೆ. ಅದು ಅಡಿಗೆ ಬಿದ್ದು ಹೋಯಿತು. ಎರಡನೆಯದು ಸಂಸ್ಥಾನದಲ್ಲಿ ಎಲ್ಲಿಯೂ ಜಾತಿ ಹೆಸರಿನ ಹಾಸ್ಟೆಲ್‌ಗಳು ಇರಕೂಡದು, ಜಾತೀಯತೆಯ ಹಾಸ್ಟಲುಗಳಿರ ಕೂಡದು. ಅವನ್ನು ಮುಚ್ಚಿ ಗೋಲು ಹಾಕಬೇಕು ಎಂದು ತಂದಿದೆ. ಅದೂ ಅಡಿಗೆ ಬಿದ್ದು ಹೋಯಿತು. ಮೂರನೆಯದರಲ್ಲಿ ದೇವಸ್ಥಾನದಲ್ಲಿ ಒಂದೇ ಜಾತಿಯ ಪೂಜಾರಿಗಳು ಇರುವುದು ಮೂಲೋತ್ಪಾಟನೆ ಆಗಬೇಕು. ಯಾವನಿಗೆ ಆಗಮ ಶಾಸ್ತ್ರ ಅಭ್ಯಾಸ ಇರುತ್ತದೆಯೋ ಯಾರಿಗೆ ಪೂಜಾ ವಿನಿಯೋಗ ಕ್ರಮ ಗೊತ್ತಿರುತ್ತದೆಯೋ ಅಂಥವನನ್ನು ನೇಮಕ ಮಾಡುವ ಪದ್ಧತಿ ಬರಬೇಕು ಎಂದು ಹೇಳಿದ್ದೆ. ಅದೂ ಅಡಿಗೆ ಬಿದ್ದು ಹೋಯಿತು. ಈಗ ಸುಯೋಗದಿಂದ ಇದು ಬಂದಿದೆ. ಈಗ ಇರತಕ್ಕದ್ದು ಬ್ರಾಹ್ಮಣ ಖಾನಾವಳಿ ಬೋರ್ಡ್ ಮಾತ್ರ. ಖಾನಾವಳಿಯಲ್ಲಿ ಒಳಗೆ ನಡೆಯ ತಕ್ಕದ್ದು ನೋಡಿದರೆ ಒಬ್ಬ ರುಬ್ಬುತ್ತಿರುತ್ತಾನೆ. ಮಸಾಲೆ ದೋಸೆ ಮೇಲೆ ಬೆವರು ಸುರಿಯುತ್ತದೆ. ಒಂದು ಕಡೆ ಮೂಗಿನ ನೀರು ಸುರಿಯುತ್ತಿರುತ್ತದೆ ಇದು ಮಸಾಲೆ ದೋಸೆಗೆ ಮಿಕ್ಸ್ ಆಗುತ್ತದೆ. ಬ್ರಾಹ್ಮಣರ ಖಾನಾವಳಿ ಒಂದೇ ಅಲ್ಲ ವೀರಶೈವರ ಖಾನಾವಳಿ ಮತ್ತು ಇತರ ಕಡೆಗಳಲ್ಲೂ ಇದೇ ಹಾಡು. ನಾವು ಪ್ರತ್ಯೇಕರು ಎಂದು ಹೇಳಿಕೊಳ್ಳುವ ನಿಲುವಿನ ಮೇಲೆ ಒಂದು ವರ್ಗವನ್ನು ಪೋಷಿಸುವ ಒಂದು ಉದ್ಯಮದಲ್ಲಿ ಬಾರಿರತಕ್ಕ ಒಂದು ಸಂಪ್ರದಾಯ ಇದು ಹೋಗಲೇಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಯಾರ ಬೆವರಿನಲ್ಲಿ ಉಪ್ಪು ಜಾಸ್ತಿಯಾಗಿದೆ ಎಂದು ಹೇಳುತ್ತೀರಾ ?

ಶ್ರೀ ಎಸ್. ಎಂ. ಚಂದ್ರಶೇಖರ್.— ಅದನ್ನು ಆ ಮೇಲೆ ವಿಚಾರ ಮಾಡೋಣ. ಇದು ಎಷ್ಟು ಮಟ್ಟಕ್ಕೆ ಹೋಗಿದೆ ಎಂದರೆ ಬ್ರಾಹ್ಮಣರ ಕೆಲವು ಖಾನಾವಳಿಯಲ್ಲಿ ದಕ್ಷಿಣ ಕನ್ನ ಜಿಲ್ಲೆಯಿಂದ ಬ್ರಾಹ್ಮಣರನ್ನು ಕರೆದುಕೊಂಡು ಬಂದರೆ ಜಾಸ್ತಿ ಹಣ ಕೊಡಬೇಕಾಗುತ್ತದೆಂದು ಅಲ್ಲಿಂದ ಮೊಗವೀರರನ್ನು, ಕುಂಬಾರರನ್ನು ಮತ್ತು ಉಪ್ಪಾರರನ್ನು ಕರೆದುಕೊಂಡು ಬಂದು ಜನಿವಾರ ಹಾಕಿ ವಿಭೂತಿ ಪಟ್ಟೆ ಹಾಕಿ ಅವರಿಂದ ಎಲ್ಲಾ ಕೆಲಸ ಕಾರ್ಯಗಳನ್ನು ಮಾಡಿಸುತ್ತಾರೆ. ಊಟಕ್ಕೆ ಹೋದರೆ ಅಲ್ಲಿ ಒಬ್ಬ ಬ್ರಾಹ್ಮಣರೂ ಇರುವುದಿಲ್ಲ. ಇಂಥ ಹೋಟೆಲ್‌ಗಳು ಇವೆ. ಖಾನಾವಳಿಗಳಲ್ಲಿ ಎಲ್ಲಿಯವರೆಗೆ ನಾಮ ಹಾಕಿ ಮುದ್ರೆ ಹಾಕಿ ವಿಭೂತಿ ಶಿವದಾರ ಹಾಕುವ ಸಂಪ್ರದಾಯ ನಾಮಾವಶೇಷ ಆಗುವುದಿಲ್ಲವೋ ಅಲ್ಲಿಯವರೆಗೆ ಸಮಾಜವಾದ ಅನ್ನಿಸುವುದಿಲ್ಲ. ಇದು ತೋಳ ಕುರಿಮರಿ ಕಥೆ ಮಾತ್ರ ಆಗಬಾರದು. ನೀವಲ್ಲದಿದ್ದರೆ ನಿಮ್ಮ ಮುತ್ತಾತ ಅನ್ಯಾಯ ಮಾಡಿದ್ದಿರಬೇಕು ನೀನು ಅನುಭವಿಸು ಎಂದು ಹೇಳುವಂತಿರಬಾರದು. ಇವೊತ್ತು ಸಂಪ್ರದಾಯವಾದಿ ಬ್ರಾಹ್ಮಣರು, ವಿಚಾರವಂತ ಬ್ರಾಹ್ಮಣರು, ಸಂಪ್ರದಾಯವಾದಿ ವೀರಶೈವರು, ವಿಚಾರವಂತ ವೀರಶೈವರು ಇದ್ದಾರೆ. ಒಂದು ಜಾತಿಯ ಎಲ್ಲರೂ ಕಮ್ಯೂನಲ್ ಎಂದು ಹೇಳುವುದು ತಪ್ಪು. ಒಂದು ಜಾತಿಯ ಎಲ್ಲರೂ ಸಂಪ್ರದಾಯವಾದಿಗಳು ಎಂದು ಹೇಳುವುದಾಗಲಿ ಜಾತಿವಾದಿಗಳು ಎಂದು ಹೇಳುವುದಾಗಲಿ ತಪ್ಪಾಗುತ್ತದೆ. ದೇವಸ್ಥಾನದಲ್ಲಿ ಪೂಜೆ ನಡೆಸುತ್ತಿರುತ್ತಾರೆ. ಪೂಜೆ ನಡೆಸಿ ತೀರ್ಥ ಕೊಡುವುದಕ್ಕೆ ಬರುವಾಗ ಇಸ್ತ್ರಿ ಮಾಡಿದ ಬಟ್ಟೆ ಹಾಕಿಕೊಂಡು ಬಂದಿದ್ದರೆ ಅವನನ್ನು ದೂರ ಹೋಗು ಎಂದು ಹೇಳುತ್ತಾರೆ ಅಕಸ್ಮಾತ್ತಾಗಿ ಅವನ ಮೈ ತಗುಲಿದರೆ ತಿರುಗಿ ಸ್ನಾನ ಮಾಡುತ್ತಾರೆ. ಉಡುಪಿನಲ್ಲಿ ಇರುವ ಕೊಳ ನೋಡಬೇಕು ಅದರಲ್ಲಿ ಮುಳುಗಿ ಬರುತ್ತಾರೆ. ೫೦ ವರ್ಷಗಳು ಆದರೂ ಕೂಡ ಆ ಕೊಳದ ನೀರನ್ನು ಇವೊತ್ತಿಗೂ ಶುದ್ಧಿ ಮಾಡಿಲ್ಲ. ಅಲ್ಲಿನ ನೀರಿನಲ್ಲಿ ನಾತ ದುರ್ಗಂಧ ಇದೆ. ಅಂಥ ಕೊಳೆಯನ್ನೊಳಗೊಂಡ ಪುಷ್ಕರಣಿ ಅದು. ಇದೇ ಗಂಗೋದಕ, ಎಂದು ಮುಳುಗಿ ದೇವರ ತಲೆ ಮೇಲೆ ಒಂದು ತಂಬಿಗೆ ನೀರು ಸುರಿಯುತ್ತಾರೆ. ಅವರ ಮಡಿಪಂಚೆಯಲ್ಲಿ ಕೂರೆ ಹೇನು ಎಲ್ಲಾ ಇರುತ್ತವೆ. ಅದಕ್ಕೆ ಸೋಪು ಮುಟ್ಟಿಸಿದ್ದು ಗೊತ್ತೇ ಇಲ್ಲ. ಅಂಥ ಪಂಚೆ ಉಟ್ಟುಕೊಂಡು ಪೂಜೆಗೆ ದೇವಸ್ಥಾನದ ಒಳಗೆ ಹೋಗುತ್ತಾರೆ. ಮಲ್ಲಿಕಾರ್ಜುನ ಸ್ವಾಮಿ ಅಂಥವರು ಹರಿಜನರಾದರೂ ಶುಭ್ರವಾಗಿ ಇದ್ದವರು ಮತ್ತೊಬ್ಬರಲ್ಲಿ ಅವರ ಸ್ಪರ್ಶವಾದರೆ ಮತ್ತೆ ಸ್ನಾನ ಮಾಡಬೇಕು. ಈ ಗೊಡ್ಡು ಸಂಪ್ರದಾಯವನ್ನು ಯಾವತ್ತು ಮೂಲೋತ್ಪಾಟನೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೋ ಅಲ್ಲಿಯವರೆಗೆ ನಾವು ಮುಂದುವರೆಯುವುದಿಲ್ಲ. ಮಂತ್ರಾಲಯದ ಒಂದು ವಿಚಾರ ಹೇಳುತ್ತೇನೆ. ಮಂತ್ರಾಲಯದಲ್ಲಿ ಸಂಪ್ರದಾಯವಾದ ಎಲ್ಲಿಯವರೆಗೆ ಇದೆಯೆಂದರೆ, ನಾನು ಸ್ಮಾರ್ತ ನಾನು ಮಂತ್ರಾಲಯಕ್ಕೆ ಹೋದರೆ ನನಗೆ ಸಿಕ್ಕುವುದು ಕಚ್ಚಾನ್ನ. ಬರೀ ವೈಷ್ಣವರಿಗೆ ಅಲ್ಲಿ ಪ್ರಾಶಸ್ತ್ಯ ಇದೆ ಮಂತ್ರಾಲಯದಲ್ಲಿ ದೇವಸ್ಥಾನದ ಸುತ್ತಮುತ್ತ ಇರುವ ರೀತಿಯನ್ನು ನೋಡಿದರೆ ೬ ತಿಂಗಳು ೨ ವರ್ಷ ಮಕ್ಕಳು ಶೌಚಕ್ಕಾಗಿ ಕೂತಿರುತ್ತಾರೆ. ಬೇರೆಯವರು ಕೂತರೆ ಮೈಲಿಗೆ ಉತ್ತಮ ವರ್ಗದವರು ಏನು ಮಾಡಿದರೂ ಅವಸನೆಯಾಗುವುದಿಲ್ಲ. ಅದು ಪುನುಗು, ಸುವಾಸನೆ, ಈ ನೀತಿ, ಈ ನಿಯಮ ಸಂಪೂರ್ಣವಾಗಿ ಹೋಗಬೇಕು ಎನ್ನುವುದು ನನ್ನ ವಾದ ಇದೇ ಉದ್ದೇಶದಿಂದಲೇ ನಾನು ಇಲ್ಲಿ ತಂದಿರುವ ನಿರ್ಣಯದಲ್ಲಿ ಹೇಳಿದ್ದೇನೆ, ಯಾವ ಕೆಲಸಕ್ಕೆ ಅರ್ಜಿ ಹಾಕಿಕೊಳ್ಳುವಾಗಲೂ ಅರ್ಜಿಯಲ್ಲಿ ಅವರ ಜಾತಿ ಏನು ಎನ್ನುವ ಕಾಲಂ ಇರುತ್ತದೆ. ನಿನ್ನೆ ಇಲ್ಲಿ ಒಂದು ಪ್ರಶ್ನೆ ಬಂದಿತ್ತು, ನಾಲ್ಕು ದಿನಗಳಿಂದ ಅನ್ನವಿಲ್ಲದೆ ಪರಿತಪಿಸುತ್ತಾ ಇರುವ ಕೆಲವು ವಿದ್ಯಾರ್ಥಿಗಳು ನನ್ನ ಒಳಗೆ ಬಂದು ಅವರ ಕಷ್ಟಗಳನ್ನು ಹೇಳಿಕೊಂಡು ಗೋಳಾಡಿದರು. ಜುಟ್ಟು ಇಲ್ಲದೆ ಬಂದರೆ ಅವರಿಗೆ ಅನ್ನ ಹಾಕುವುದಿಲ್ಲ ಎಂದು ಒಂದು ಮಠದವರು ಹೇಳಿದ್ದಾರೆ ಎಂದು ಅವರು ಹೇಳಿದರು. ಇಂದು ಅವರು ಅನ್ನವಿಲ್ಲದೇ ಉಪವಾಸ ಮಾಡುವ ಸ್ಥಿತಿ ಬಂದಿದೆ. ಇಡೀ ಹಿಂದೂ ಧರ್ಮ ಸಾರಸರ್ವಸ್ವದಲ್ಲಿ ಈ ಜುಟ್ಟೇ ಪ್ರಾಧಾನ್ಯವೇ ಎಂದು ಕೇಳುತ್ತೇನೆ. ಸರಕಾರ ಇಂತಹ ಸಣ್ಣ ವಿಚಾರಗಳಿಗೆ ಬಲ ಕೊಡಬಾರದು ಎಂದು ಇದರ ಬಗ್ಗೆ ಅಲಕ್ಷ್ಯ ಮಾಡುವುದು ಸರಿಯಲ್ಲ. ಜಗತ್ತಿನಲ್ಲಿ ಧರ್ಮ ಸರ್ವಸ್ವತಂತ್ರವಾದದ್ದು, ಈ ಸಂದರ್ಭದಲ್ಲಿ ದಿನ ನಿತ್ಯವೂ ಸಂಧ್ಯಾವಂದನೆ ಮಾಡುವ ಬ್ರಾಹ್ಮಣರು ಈ ಕೆಳಗಿನ ಶ್ಲೋಕವನ್ನು ದಿನವೂ ಹೇಳುತ್ತಿರುತ್ತಾರೆ.

'ಆಕಾಶಾತ್ ಪತಿತಂ ತೋಯಂ ಯಥಾ ಗಚ್ಛತಿ ಸಾಗರಂ ಸರ್ವದೇವ
ನಮಸ್ಕಾರಃ ಶ್ರೀ ಕೇಶವಂ ಪ್ರತಿಗಚ್ಛತಿ'

ಆಕಾಶದಿಂದ ಬರುವ ಮಳೆಹನಿ ಯಾವ ರೀತಿ ಸಮುದ್ರಕ್ಕೆ ಹೋಗಿ ಸೇರುತ್ತದೋ ಅದೇರೀತಿ ನಾವೆಲ್ಲರೂ ಯಾವ ದೇವರಿಗೆ ನಮಸ್ಕಾರ ಮಾಡಿದರೂ ಅದು ಶ್ರೀ ಕೇಶವನಿಗೆ ಹೋಗಿ ಸೇರುತ್ತದೆ ಎಂದು

ಇದರ ಅರ್ಥ. ಇದನ್ನು ನನ್ನಂಥ ಬ್ರಾಹ್ಮಣನಾದವರು ದಿನ ನಿತ್ಯವೂ ಹೇಳುತ್ತ ಬರುತ್ತಿದ್ದಾರೆ. ಇಂದು ದೇಶದಲ್ಲಿ ಸಮಾಜವಾದವನ್ನು ತರಬೇಕೆಂದಿರುವಾಗ ಜಾತಿಯ ಮೇಲೆ ಯಾವ ರೀತಿಯಾದ ಸಮಾಜ ವಾದವನ್ನು ನಿರ್ಮಾಣ ಮಾಡಲು ಹೋಗುತ್ತೀರಿ ಎಂದು ಕೇಳಬೇಕಾಗಿದೆ. ಇಂದು ಜುಟ್ಟು ಇಲ್ಲ ಎನ್ನುವ ಕಾರಣಕ್ಕಾಗಿ ಅನ್ನ ಹಾಕುವುದಿಲ್ಲ ಎಂದು ಹೇಳಿದರೆ ಇದು ಯಾವ ರೀತಿಯ ಸಮಾಜವಾದ. ಇಂದು ಬ್ರಾಹ್ಮಣರು ಇದರ ಬಗ್ಗೆ ಹೇಳಿದ್ದಾರೆಂದು ಹೇಳುತ್ತಿಲ್ಲ. ಮಾನ್ಯ ಸದಸ್ಯರೊಬ್ಬರು ಹೇಳಿದ ಹಾಗೆ ವೀರಶೈವ ಬ್ರಾಹ್ಮಣರು ಎಂದು ಹಿಂದೆ ಇದ್ದರು. ಇಂದು ಅವರು ವೀರಶೈವರಾದರು. ಇವರು ಯಾವ ರೀತಿ ಮಂತ್ರಗಳನ್ನು ಹೇಳುತ್ತಾರೆ ಅದರ ಬಗ್ಗೆ ಮುಂದೆ ಪ್ರಸ್ತಾಪ ಮಾಡುತ್ತೇನೆ. ಇಂದು ಇಡೀ ಹಿಂದೂ ಧರ್ಮ ಜಾತಿಯ ತತ್ವದ ಮೇಲೆ ಅಡಗಿದೆಯೇ ? ನಾನು ಮೇಲೆ ಹೇಳಿದ ಶ್ಲೋಕದಲ್ಲಿ ಯಾವ ರೀತಿ ನೀರು ಹರಿದು ಸಮುದ್ರಕ್ಕೆ ಹೋಗುತ್ತೋ ಹಾಗೆ ಯಾವ ದೇವರಿಗೆ ನಮಸ್ಕಾರ ಮಾಡಿದರೂ ಅದು ಶ್ರೀ ಕೇಶವನಿಗೆ ಅರ್ಪಿತವಾಗುತ್ತದೆ ಎಂದು ಪ್ರತಿನಿತ್ಯ ಬ್ರಾಹ್ಮಣರು ಹೇಳುತ್ತಾರೆ ಇದರಲ್ಲಿರುವ ತತ್ವವೇನೋ ಒಳ್ಳೆಯದು. ಆದರೆ ಇದರ ಆಚರಣೆಯಲ್ಲಿ ವ್ಯತ್ಯಾಸಗಳಿವೆ. ಇಂದು ಸ್ಮಾರ್ತ ಬ್ರಾಹ್ಮಣರನ್ನು ಕಂಡರೆ ವೈಷ್ಣವರಿಗೆ ಆಗುವುದಿಲ್ಲ. ವೈಷ್ಣವರನ್ನು ಕಂಡರೆ ಸ್ಮಾರ್ತರಿಗೆ ಆಗುವುದಿಲ್ಲ. ಹಾಗೆಯೇ ವೀರ ಶೈವರಲ್ಲಿ ಕೂಡ ಅನೇಕ ಒಳಪಂಗಡಗಳಿವೆ, ಒಬ್ಬರನ್ನು ಕಂಡರೆ ಒಬ್ಬರಿಗೆ ಆಗುವುದಿಲ್ಲ. ಈ ರೀತಿಯ ಭೇದಭಾವಗಳು ಬೆಳೆಯುತ್ತಾ ಬರುತ್ತಿವೆ. ಇದಕ್ಕೆ ಎಷ್ಟೋ ನಿದರ್ಶನಗಳನ್ನೂ ಕೊಡಬಹುದು. ಇಂದು ಕೆಲವರು ಹರಿವಾಣ ಎಂದು ಹೇಳುವುದಿಲ್ಲ. ಗಂಗಾಳ ಎನ್ನುತ್ತಾರೆ. ಇದಕ್ಕೆ ಕಾರಣ ಹರಿವಾಣ ಎಂದರೆ "ಹರಿ" ಹೆಸರು ಹೇಳಬೇಕಾಗುತ್ತೆ ಎಂದು,

ಶ್ರೀ ಎಂ. ಮಲ್ಲಪ್ಪ:—ಇಂದು ಇಷ್ಟು ಜಾತಿಯ ಪಂಗಡಗಳು ಇದ್ದರೂ ಎಲ್ಲರೂ ಹೋಟಲಿಗೆ ಬಂದು ಒಂದೇ ಕಡೆಯಲ್ಲಿ ಕಾಫಿಯನ್ನು ಕುಡಿಯುತ್ತಿದ್ದಾರಲ್ಲವೇ?

ಶ್ರೀ ವಿ. ಎನ್. ಪಾಟೀಲ್ :—ಒಂದೇ ಬಾಟ್ಲಿನಲ್ಲೂ ಕುಡೀತಾರೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ .—ಸಮುದಾಯದಲ್ಲಿ ಆ ರೀತಿ ಮಾಡುತ್ತಿದ್ದಾರೆ, ಇಂತಹ ನಿದರ್ಶನಗಳು ಬೇಕಾದಷ್ಟು ಇವೆ. ಇದು ಹೇಗಿದೆ ಎಂದರೆ :

When class itself withers away, the caste will

definitely wither away. It is based on class.

ಇದನ್ನು ನಮ್ಮ ಹಿರಿಯರು ಹೇಳುತ್ತಿದ್ದರು. ಹಿಂದೆ ಬ್ರಿಟಿಷರು ಈ ದೇಶಕ್ಕೆ ಬಂದಾಗ ಅವರು ದನವನ್ನು ಕೊಂದು ತಿನ್ನುತ್ತಿದ್ದರು, ಇಂತಹ ಬ್ರಿಟಿಷರು ಬಂದಾಗ ಬ್ರಾಹ್ಮಣರಾದರು ಅವರನ್ನು ರಾಜಾ ಪ್ರತ್ಯಕ್ಷ ದೇವತಾ ಎನ್ನುವಂತೆ ಅವರಿಗೆ ಆಶೀರ್ವಾದ ಮಾಡಿ ಅವರ ತಲೆ ಮೇಲೆ ಅಕ್ಷತೆ ಕಾಳನ್ನು ಹಾಕು ತ್ತಿದ್ದರು. ಇಂದು ಹರಿಜನರು ಸತ್ತ ದನವನ್ನು ತಿನ್ನುತ್ತಾರೆ. ಬ್ರಿಟಿಷರು ದನವನ್ನೇ ಕೊಂದು ತಿನ್ನುತ್ತಿದ್ದರು ಅಷ್ಟೇ ವ್ಯತ್ಯಾಸ. ಆದರೆ ಹರಿಜನರಿಗೆ ನೀವು ಕೊಡುವ ಗೌರವವಾದರೂ ಏನು. ಇಂತಹ ಜಾತೀಯವಾದವನ್ನು ನಿರ್ಮೂಲ ಮಾಡಬೇಕು. ಇನ್ನೊಂದು ನಿದರ್ಶನ ಇಲ್ಲಿ ಹೇಳುತ್ತೇನೆ. ನಮ್ಮ ಕ್ಷೇತ್ರದ ಬಳಿ ಒಂದು ದೊಡ್ಡ ಯಾಗ ನಡೆಯಿತು. ಇದರಲ್ಲಿ ಬರೀ ಬ್ರಾಹ್ಮಣರಿಗೆ ಮಾತ್ರ ಅವಕಾಶ ಇತ್ತು ಇತರ ಪಂಗಡಗಳವರಿಗೆ ಅಲ್ಲಿ ಹೋಗಲು ಅವಕಾಶವಿರಲಿಲ್ಲ. ಆದರೆ ಆಗ ನಮ್ಮ ಜಿಲ್ಲೆಯಲ್ಲಿ ಶ್ರೀ ಮಾನ್ ಭರಣಯ್ಯನವರು ಜಿಲ್ಲಾಧಿಕಾರಿಗಳಾಗಿದ್ದರು. ಅವರು ಹರಿಜನರು, ಒಂದು ಸಾರಿ ಅವರು ಈ ಯಾಗ ನಡೆಯುವ ಸ್ಥಳಕ್ಕೆ ಬಂದಾಗ ಇಲ್ಲಿ ಸೇರಿದ್ದ ವೇದ ಪಂಡಿತರು ಹಾಗೂ ಬ್ರಾಹ್ಮಣ ಸಮೂಹದವರೆಲ್ಲಾ ಇವರನ್ನು ಎದುರುಗೊಂಡು ಇವರನ್ನು ಕರಿಸಿಕೊಂಡು ಕುರ್ಚಿ ಮೇಲೆ ಕೂರಿಸಿ ಹಾರ ಹಾಕಿ ಎಲ್ಲ ಮರ್ಯಾದೆಗಳನ್ನೂ ಮಾಡಿದರು. ಅದೇ ಬಾಗಿಲಿನಿಂದ ಅಚೆ ಇದ್ದ ಒಬ್ಬ ಹೊಲೆಯ ಕಸ ಗುಡಿಸುತ್ತಿದ್ದವ ನಿಗೆ ಅವನು ಕುಡಿಯುವವನು ಎಂದು ಒಳಗೆ ಬರಲು ಅವಕಾಶ ಕೊಡಲಿಲ್ಲ. ಇದನ್ನು ನೋಡಿದರೆ ಅಧಿಕಾರ ಸ್ಥಾನದಲ್ಲಿರುವವರು ಯಾರೇ ಆಗಿರಲಿ ಅವರಿಗೆ ಗೌರವ ಕೊಡಬೇಕು ಎಂದು ಅಲ್ಲಿನ ಗಣ್ಯ ಬ್ರಾಹ್ಮಣೋತ್ತಮರು ತೀರ್ಮಾನಿಸಿದರು. ಹೀಗೆ ಜಾತಿಯಲ್ಲಿ ಕೀಳು ಮೇಲು ಎನ್ನುವ ಭಾವನೆ ಇನ್ನೂ ಬೆಳೆದುಕೊಂಡು ಬರುತ್ತಲೇ ಇದೆ. ಯಾರು ಹೆಚ್ಚು ಪ್ರಭಾವಯುತರಾಗಿರುತ್ತಾರೋ ಅವರಿಗೆ ಎಲ್ಲ ರೀತಿಯ ಅರ್ಹತೆಗಳನ್ನು ಕೊಡಬಾರದು ಎಂತಲೇ ನಾನು ಇಲ್ಲಿ ನಿರ್ಣಯ ತಂದಿರುವುದು. ಇಂತಹ ಒಂದು ನಿರ್ಣಯವನ್ನು ಇಲ್ಲಿ ೨೯ ವರ್ಷಗಳ ಹಿಂದೆಯೇ ಮಾಡಬೇಕಾಗಿತ್ತು. ಆಗ ಮಾಡಿಲ್ಲ ಎಂದು ಇಂದು ನಾನು ತರುತ್ತಿದ್ದೇನೆ. ಇನ್ನೊಂದು ವಿಚಾರ ಇಲ್ಲಿ ಹೇಳಬೇಕಾಗಿದೆ, ಶಿವಮೊಗ್ಗಾದಲ್ಲಿ ದೊಡ್ಡಪೇಟೆಯಲ್ಲಿ ಹಿಂದೆ ಒಂದು ಬೋರ್ಡು ಇತ್ತು. ಅದು ವೀರಶೈವ ಬ್ರಾಹ್ಮಣರ ಕಾಫೀ ಕ್ಲಬ್ ಎಂದು. ಇದು ೧೯೪೭ರ

(ಶ್ರೀ ಎಸ್. ಎಂ. ಶೀರನಾಳ ಚಂದ್ರಶೇಖರ್)

ಹಿಂದೆ ಇತ್ತು. ಆದರೆ ಈ ರಿಂದೀಚೆಗೆ ಇದನ್ನು ವೀರಶೈವರ ಕಾಫೀ ಕ್ಲಬ್ ಎಂದು ಬದಲಾಯಿಸಿದ್ದಾರೆ. ಇದರಲ್ಲಿ ಬ್ರಾಹ್ಮಣ ಎನ್ನುವುದನ್ನು ತೆಗೆದರು. ಇನ್ನೊಂದು ವಿಚಾರ. ಹಿಂದೆ ಬಡಗಿಗಳು ವಿಶ್ವಕರ್ಮ ಬ್ರಾಹ್ಮಣರು ಎಂದು ಹೆಸರು ಇಟ್ಟುಕೊಂಡಿದ್ದರು, ಈಗ ಬದಲಾಗಿದೆ. ಹೀಗೆ ಉತ್ತಮ ಹಾಗೂ ಕೀಳು ಎಂದು ಇರುವ ಜಾತೀಯತೆಯನ್ನು ಇಂದು ನಿರ್ಮೂಲ ಮಾಡಬೇಕು. ಜಾತ್ಯತೀತ ರಾಜ್ಯ ಮಾಡಿ ಸಮಾಜವಾದ ತರಬೇಕೆಂದು ಇರುವಾಗ ಇಂತಹ ಒಂದು ವಿಚಾರದಲ್ಲಿ ನಂಬಿಕೆ ಇರಲಿ ಇಲ್ಲದಿರಲಿ ಸಮಾಜದಲ್ಲಿ ಇಂತಹ ಭೇದ ಭಾವಗಳು ಇರಬಾರದು. ಒಬ್ಬನನ್ನು ಹೊಲೆಯ ಎಂದು ಕರೆಯುತ್ತೇವೆ ಇನ್ನೊಬ್ಬರನ್ನು ಇನ್ನೊಂದು ಜಾತಿ ಎಂದು ಕರೆಯುತ್ತೇವೆ. ಇಂತಹ ಒಂದು ನೀತಿ ಸರಿಯಾದುದಲ್ಲ.

ಉಪಾಧ್ಯಕ್ಷರು.—ತಮಗೆ ಇನ್ನೆಷ್ಟು ಸಮಯ ಬೇಕೋ ಅದನ್ನು ಮುಂದೆ ತೆಗೆದುಕೊಳ್ಳಬಹುದು.

Message from the Chairman

(*re* : *Passing the Mysore Appropriation* (*No.* 2) *Bill, 1972*)

[ANNOUNCEMENT]

MR. DEPUTY SPEAKER.—I have received communication from the Chairman, Mysore Legislative Council it reads thus :

"Dear Madam Speaker,

As required by Rule 107 of the Rules of Procedure and Conduct of Business in the Mysore Legislative Council, I retransmit the Mysore Appropriation (No. 2) Bill 1972 without any recommendations from the Council.

The Bill was passed by the Legislative Council on Thursday, the 20th July, 1972."

The Hon. Member may continue his speech on the next non-official day 1-00 P.M.

A little while ago when I put the non-official resolution of Sri Jayaprakash Narayan to the vote of the House, some Hon. Members pressed for a division. When I had already put the motion to the vote of the House and announced that the motion was negatived. I disallowed their request for a division. In support of my stand I shall read a small paragraph from May's Parliamentary Practice- Page 374.

"...In the Commons, the Speaker takes the sense of the House by desiring that "As many as are of that opinion say, 'Aye' and "As many as are of the contrary opinion say, 'No' "On account of these forms the two parties are distinguished in the Lords as "contents" and "not contents" and in the Commons as "ayes" and "noes". When each party have responded according to their opinion, the Speaker endeavours to judge from the loudness and general character of the opposing exclamations, or from a consideration of the probabilities of the case (r), which party have the majority. As his judgment is not final, he expresses his opinion thus : "I think the 'contents,' or 'ayes' have

it;" "I think the "not contents,' or) 'noes' have it." If the House acquiesce in this decision, the question is said to be "agreed to" or "negatived" according to the supposed majority on either side; but if the party thus declared to be the minority dispute the fact, they respond with further exclamations of "content" (or "not content"), "aye" (or "no"), as the case may be. In this case the Speaker in the Commons says, "Clear the lobby", in order to start the process of counting the numbers on either side, which is termed a division."

The House will stand adjourned and meet again at 1-00 O'clock on Monday the 24th July 1972.

The House adjourned at two minutes past one of the Clock to meet again at one of the Clock on Monday the 24th July 1972.

WD 18281—GPB—550—12-3-1973